SAPTHAGIRI(KANNADA)
SPIRITUAL ILLUSTRATED MONTHLY
Volume:03, Issue:9, Pages:56
April - 2024,Price Rs.20/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಏಪ್ರಿಲ್ 2024

ಬೆಲೆ ರೂ. 20/-

## ಸ್ವಾಮಿಯವರ ಯುಗಾದಿ ಆಸ್ಥಾನ ಮಹೋತ್ಸವ

09.04.2024

## ಒಂಟಿಮಿಟ್ಟ

**ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು**

**17.04.2024 ರಿಂದ 25.04.2024 ರ ವರೆಗೆ**

**17.04.2024 ಬುಧವಾರ**
ಹಗಲು- ಧ್ವಜಾರೋಹಣ, ರಾತ್ರಿ-ಶೇಷವಾಹನ

**18.04.2024 ಗುರುವಾರ**
ಹಗಲು-ವೇಣುಗಾನಾಲಂಕಾರ, ರಾತ್ರಿ-ಹಂಸವಾಹನ

**19.04.2024 ಶುಕ್ರವಾರ**
ಹಗಲು-ವಟಪಾತ್ರಶಾಯಿ ಅಲಂಕಾರ
ರಾತ್ರಿ-ಸಿಂಹವಾಹನ

**20.04.2024 ಶನಿವಾರ**
ಹಗಲು-ನವನೀತಕೃಷ್ಣಾಲಂಕಾರ
ರಾತ್ರಿ-ಹನುಮತ್ಸೇವೆ

**21.04.2024 ಭಾನುವಾರ**
ಹಗಲು-ಮೋಹಿನಿಸೇವೆ, ರಾತ್ರಿ-ಗರುಡಸೇವೆ

**22.04.2024 ಸೋಮವಾರ**
ಹಗಲು-ಶಿವಧನುರ್ಭಾಣಾಲಂಕಾರ
ರಾತ್ರಿ-ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ

**23.04.2024 ಮಂಗಳವಾರ**
ಹಗಲು-ರಥೋತ್ಸವ

**24.04.2024 ಬುಧವಾರ**
ಹಗಲು-ಕಾಳೀಯಮರ್ಧನಾಲಂಕಾರ
ರಾತ್ರಿ-ಅಶ್ವವಾಹನ

**25.04.2024 ಶನಿವಾರ**
ಹಗಲು-ಚಕ್ರಸ್ನಾನ, ರಾತ್ರಿ-ಧ್ವಜಾವರೋಹಣ

## ತಿರುಪತಿ

**ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು**

**2024 ಏಪ್ರಿಲ್ 05 ರಿಂದ 13 ರ ವರೆಗೆ**

**05-04-2024 ಶುಕ್ರವಾರ**
ಹಗಲು: ಧ್ವಜಾರೋಹಣ, ರಾತ್ರಿ: ದೊಡ್ಡಶೇಷವಾಹನ

**06-04-2024 ಶನಿವಾರ**
ಹಗಲು: ಚಿಕ್ಕಶೇಷವಾಹನ, ರಾತ್ರಿ: ಹಂಸವಾಹನ

**07-04-2024 ಭಾನುವಾರ**
ಹಗಲು : ಸಿಂಹವಾಹನ
ರಾತ್ರಿ : ಮುತ್ತಿನಚಪ್ಪರವಾಹನ

**08-04-2024 ಸೋಮವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**09-04-2024 ಮಂಗಳವಾರ**
ಹಗಲು: ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ: ಗರುಡವಾಹನ

**10-04-2024 ಬುಧವಾರ**
ಹಗಲು: ಹನುಮದ್ವಾಹನ, ಸಾ॥ : ವಸಂತೋತ್ಸವ
ರಾತ್ರಿ: ಗಜವಾಹನ

**11-04-2024 ಗುರುವಾರ**
ಹಗಲು: ಸೂರ್ಯಪ್ರಭವಾಹನ, ರಾತ್ರಿ: ಚಂದ್ರಪ್ರಭವಾಹನ

**12-04-2024 ಶುಕ್ರವಾರ**
ಹಗಲು: ರಥೋತ್ಸವ, ರಾತ್ರಿ: ಅಶ್ವವಾಹನ

**13-04-2024 ಭಾನುವಾರ**
ಹಗಲು: ಚಕ್ರಸ್ನಾನ, ರಾತ್ರಿ : ಧ್ವಜಾವರೋಹಣ

ರಾಮಾರಾಮಾ ಎಂಬೆರಡಕ್ಷರ ಪ್ರೇಮದಿ ಸಲಹಿತು ಭಜಕರನು
ಹಾಲಾಹಲವನು ಪಾನವ ಮಾಡಿದ ಫಾಲಲೋಚನ ತಾ ಬಲ್ಲವನು

ಆಲಾಪಿಸುತ ಶಿಲೆಯಾಗಿರ್ದಾ ಬಾಲೆ ಅಹಲ್ಯೆಯ ಕೇಳೇನೋ
ಕೀಶಕುಲದವರ ಜೀವನ ಸಲಹಿದ ಕೇಸರಿತನಯನೆ ಬಲ್ಲವನು

ವಾಸವಾದಿಗಳ ಪೀಡಿಸಿದ ಲಂಕೇಶನನುಜನ ಕೇಳೇನೋ
ಅಂಜಿಕೆಯಿಲ್ಲದ ಗಿರಿಸಾರಿದಕಪಿ ಕುಂಜರ ರವಿನುತ ಬಲ್ಲವನು

ಎಂಜಲ ಫಲವನು ಹಾಗಿತ್ತಾ ಸತಿ ಕಂಜದಳಾಕ್ಷಿಯ ಕೇಳೇನೋ
ಕಾಲವನರಿತು ಸೇವೆಯ ಮೊಳ್ಳ ಭೂಪಲಕ್ಷ್ಮಣ ಬಲ್ಲನು ಸಾಸಿರ

ನಾಮದಿ ಪೊಗಳುವೆನು ದಾಶರಥಿಯ ಪದಯುಗಳ ವನನುದಿನ
ಶೇಷಗಿರೀಶನ ದಾಸರು ಧನ್ಯರು ಲೇಸು ನಮಗವರ ಸಂಗವು

– ಶ್ರೀ ಶೇಷಗಿರಿದಾಸರು



# ಭಗವದ್ಗೀತೆ

ಮಾತ್ರಾ ಸ್ಪರ್ಶಾಸ್ತು ಕೌಂತೇಯ ಶೀತೋಷ್ಣ ಸುಖದುಃಖದಾಃ
ಆಗಮಾಪಾಯಿನೋಽನಿತ್ಯಾಃ ತಾಂಸ್ತಿತಿ ಕ್ಷಸ್ವ ಭಾರತ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ – 2, ಶ್ಲೋಕ –14)

ಅರ್ಜುನ , ಶೀತ-ಉಷ್ಣಗಳ ಸ್ಪರ್ಶದಿಂದ ನಮ್ಮ ಮೈಗೂ ಶೀತ – ಉಷ್ಣಗಳ ಅನುಭವವಾಗುತ್ತದೆ. ಆದರಿಂದ ಸುಖವೋ, ದುಃಖವೋ ಆಗುತ್ತದೆ. ಹಾಗೆಯೇ ವಿಷಯ ಸಂಪರ್ಕಗಳೇ ಸುಖವನ್ನೂ, ದುಃಖವನ್ನೂ ಕೊಡತಕ್ಕವುಗಳು, ಕ್ಷಣಿಕವಾಗಿ ಬಂದು ಹೋಗುವವುಗಳು, ಅವು ನೆಲೆಯಾಗಿರತಕ್ಕವುಗಳಲ್ಲ, ಅವುಗಳನ್ನು ತಡೆದುಕೋ.

(ಹತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ವಿಶ್ವೋಪಕಾರಮಿತಿ ನಾಮ ಸದಾ ದುಹಾನಾಮ್ ಅದ್ಯಾಪಿ ದೇವಿ ಭವತೀಮವಧೀರಯಂತಮ್।
ನಾಥೇ ನಿವೇಶಯ ವೃಷಾದ್ರಿಪತೇರ್ದಯೇ ತ್ವಂ ನ್ಯಸ್ತ ಸ್ವರಕ್ಷಣಭರಂ ತ್ವಯಿ ಮಾಂ ತ್ವಯೈವ ॥91॥

ಹಿಂದಿನ ಒಂಭತ್ತು ದಶಕಗಳಲ್ಲಿ ಲೋಕಕ್ಕೇ ಎಲ್ಲ ಕಾಲಗಳಲ್ಲಿಯೂ ದಯಾದೇವಿಯಿಂದ ಏರ್ಪಡುವ ಸರ್ವವಿಧವಾದ ಉಪಕಾರಗಳನ್ನು ನಿರೂಪಿಸಿ ಜಗತ್ತಿನಲ್ಲಿ ಇರುವವರಿಗೂ ತನ್ನನ್ನು ಆಶ್ರಯಿಸಿದ ಶಿಷ್ಯಪರಂಪರೆಗೂ ದಯಾದೇವಿಯ ಹಿರಿಮೆಯನ್ನು ಉಪದೇಶಿಸುವ ರೀತಿಯಿಂದ ಆ ದಯಾದೇವಿಯನ್ನು ಆಚಾರ್ಯರು ಸ್ತುತಿಸಿರುತ್ತಾರೆ. ಕೊನೆಯದಾದ ಈ ದಶಕದಲ್ಲಿ ತಮ್ಮ ಸ್ಥಿತಿಗೆ ಅನುರೂಪವಾದ ಕೆಲವು ಬೇಡಿಕೆಗಳನ್ನು ತಮಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿ ಕೊಳ್ಳುತ್ತಾರೆ. ಹಿಂದೆ ಉಪದೇಶಿಸಿರುವುದನ್ನು ಇಲ್ಲಿ ತಮ್ಮ ಅನುಷ್ಠಾನದಿಂದ ತೋರಿಸಿರವರೆಂದು ಭಾವವು. ಹಿಂದಿನ ದಶಕದಲ್ಲಿ ವಿಭವಾವತಾರಗಳ ಹಿರಿಮೆಯೂ, ಅವುಗಳಿಂತಲೂ ಆರ್ಚಾವತಾರದ ಮಹಿಮೆಯೂ ಪ್ರಕಾಶಿಸಲ್ಪಟ್ಟಿತು. ಅಂತಹ ಅರ್ಚಾವತಾರಗಳಲ್ಲಿ ಅತ್ಯಂತ ಮುಖ್ಯವಾದ ಶ್ರೀನಿವಾಸ ರೂಪವಾದ ಅರ್ಚಾರೂಪದಮೂಲಕವಾಗಿ ತಮಗೆ ಬೇಕಾದ ಫಲಗಳನ್ನು ಉಂಟು ಮಾಡಿಕೊಡುವಂತೆ ದಯಾದೇವಿಯನ್ನು ಈ ದಶಕದಲ್ಲಿ ಪ್ರಾರ್ಥಿಸುತ್ತಾರೆ.

ಹಿಂದಿನ ಪದ್ಯದಲ್ಲಿ ಸಮಸ್ತ ಪಾಪಿಗಳನ್ನೂ ಸಂಹಾರ ಮಾಡುವಂತಹ ಕಲ್ಕಿ ಅವತಾರದ ಮಹಿಮೆಯು ಪ್ರಸ್ತಾವಿಸಲ್ಪಟ್ಟಿತು. ಹಾಗೆ ಸರ್ವ ಪಾಪಗಳನ್ನು ತೊಲಗಿಸುವ ಕಲ್ಕಿರೂಪಿಯಾದ ಶ್ರೀನಿವಾಸನು ನನ್ನ ಪಾಪಗಳನ್ನು ತೊಲಗಿಸಲೇಬೇಕು. ಇದು ದಯಾದೇವಿಯಾದ ನಿನ್ನಿಂದಲೇ ಉಂಟಾಗಬೇಕೆಂದು ಈ ಪದ್ಯದಲ್ಲಿ ಪ್ರಾರ್ಥಿಸುವರು.

ಶ್ರೀನಿವಾಸನನ್ನು ಒಂದು ಕಾಮಧೇನುವಿನಂತೆ ಕಲ್ಪಿಸಿ ಲೋಕಕ್ಕೆ ಆಗಬೇಕಾದ ಸರ್ವ ಉಪಕಾರಗಳನ್ನು ಅವನಿಂದ ಕರೆದು ತಾಯಿಯು ಮಕ್ಕಳಿಗೆ ಕೊಡುವಂತೆ ದಯಾದೇವಿಯು ನಮ್ಮನ್ನು ಅನುಗ್ರಹಿಸುವಳು. ಸೃಷ್ಟಿಕಾಲದಲ್ಲಿಯೂ, ಪ್ರಳಯದಲ್ಲಿಯೂ, ಸ್ಥಿತಿಕಾಲದಲ್ಲಿಯು, ಪ್ರಪನ್ನರ ವಿಷಯದಲ್ಲಿಯೂ, ಪ್ರಪನ್ನರಲ್ಲದವರ ವಿಷಯದಲ್ಲಿಯೂ, ಯೋಗಿಗಳ ವಿಷಯದಲ್ಲಿಯೂ, ಪರ-ವ್ಯೂಹ-ವಿಭವ- ಅರ್ಚಾದಿ ಅವತಾರರೂಪಗಳಿಂದಲೂ ಮತ್ತೂ ಹಲವಾರು ರೀತಿಗಳಿಂದಲೂ, ಹಲವು ಬಗೆಯಾದ ಉಪಕಾರಗಳನ್ನು ಉಂಟು ಮಾಡುವಂತೆ ದಯಾದೇವಿಯು ಮಾಡುವಳೆಂಬುದೇ ಈ ಸ್ತೋತ್ರದಲ್ಲಿ ಇಲ್ಲಿಯವರೆಗೆ ಒಂಭತ್ತು ದಶಕಗಳಿಂದಲೂ ವಿಶದವಾಗಿ ನಿರೂಪಿಸಲ್ಪಟ್ಟಿರುವುದು.

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ - ಶ್ರೀಕ್ರೋಧಿ ನಾಮ ಸಂವತ್ಸರ ಫಾಲ್ಗುಣ -ಚೈತ್ರ ಮಾಸ ಸಂಚಿಕೆ

ಸಂಪುಟ : 03 ಏಪ್ರಿಲ್ - 2024 ಸಂಚಿಕೆ : 09

ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ, (ಎಫ್.ಎ.ಸಿ.)
ತಿ.ತಿ.ದೇ., ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ. ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ. ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ., ಮುದ್ರಣಾಲಯ, ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ. ತಿರುಪತಿ.

**ಛಾಯಾಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಾಗ್ರಹಣ, ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಾಗ್ರಹಣ ತಿ.ತಿ.ದೇ.

**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 06 |
| ಭದ್ರಾಚಲ ರಾಮದಾಸರು | -ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ | 07 |
| ಆರೋಗ್ಯದಾಯಿನಿ ಯುಗಾದಿ ರಸಾಯನ | -ಡಿ.ಎಸ್.ಬದ್ರಿನಾಥ್ | 09 |
| ಜೀವಕಳೆಯು ಬರುತ್ತಿದೆ ಸಕಲ ಜೀವ ಜಾತಕೆ | -ಡಾ॥ ಗುರುರಾಜಪೋಶೆಟ್ಟಿಹಳ್ಳಿ | 10 |
| ರಾಮಾಯಣದ ಲೋಕದರ್ಶನ | -ಅನಿಲ್ ಎಸ್.ಪಿ. ರೈಕರ್ | 13 |
| ಪ್ರೇಮಮೂರ್ತಿ ಶ್ರೀಭರತನ ಭ್ರಾತೃ ಪ್ರೇಮ | -ಮೂರ್ತಿರಾಮನಾಥಪುರ | 15 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ (ಪಂಚಮಹಾಯಜ್ಞ ಸಂಧಿ) | -ಶ್ರೀಮತಿ.ಪ್ರಿಯಾಪ್ರಾಣೇಶ ಹರಿದಾಸ | 17 |
| ಸಾಲಿಗ್ರಾಮದ ಯೋಗನರಸಿಂಹ ದೇವಾಲಯ | -ಕೆಂಗೇರಿ ಚಕ್ರಪಾಣಿ | 19 |
| ರಾಮಾಯಣದಲ್ಲಿ ಗ್ರಾಮವಾಸ್ತವ್ಯದ ಪರಿಕಲ್ಪನೆ | - ಬೇಲೂರು ರಾಮಮೂರ್ತಿ | 21 |
| ಮಾಸ ಮಹಿಮೆ | -ಶ್ರೀಮತಿ. ಕೆ.ವಿ. ಪದ್ಮಾವತಿ | 24 |
| ಪ್ರಖ್ಯಾತ ಶ್ರೀರಾಮ ಕ್ಷೇತ್ರ ದರ್ಭಶಯನ | -ಡಾ॥ ಸುಮನಬದರೀನಾಥ್ | 31 |
| ಶ್ರೀರಾಮನವಮಿ | -ಡಾ॥ ಎ. ಕುಮುದ | 33 |
| ತಂಜೈಮಾಮಣಿ ಕೋವಿಲ್ | -ಸೂರ್ಯವಂಶಿ | 35 |
| ಶ್ರೀತಂದೆ ಮುದ್ದುಮೋಹನವಿಠ್ಠಲ ದಾಸರು | -ಡಾ॥ಎಸ್.ಜಿ. ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯ | 37 |
| ಅನ್ನಮಯ್ಯನಿಗೆ ಒಲಿದ ಶ್ರೀನಿವಾಸ | -ಎಸ್. ವಾದಿರಾಜ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ನಮ್ಮೊಳಗೊಂದು ಆತ್ಮಾವಲೋಕನ | -ಪ್ರಣವ | 48 |
| ಚಿತ್ರಕಥೆ -ಎಲ್ಲರಿಗೂ ಮೋಕ್ಷವೇ | - ಶ್ರೀನಿವಾಸದೀಕ್ಷಿತರು | 52 |

ಮುಖಚಿತ್ರ - ಉಭಯದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿ, ತಿರುಮಲೆ
ಹಿಂಬದಿಚಿತ್ರ - ಶ್ರೀಕೋದಂಡರಾಮ, ತಿರುಮಲೆ

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |

ಸಂಪಾದಕೀಯ

# ಧರ್ಮಾವತಾರ ಮೂರ್ತಿ ಶ್ರೀರಾಮ

ಪರಿತ್ರಾಣಾಯ ಸಾಧೂನಾಂ ವಿನಾಶಯ ಚ ದುಷ್ಕೃತಾಮ್
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ (ಭ.4.8.)

"ಲೋಕದಲ್ಲಿ ಧರ್ಮಾಚರಣೆಗೆ ಭಂಗವುಂಟಾದಾಗ, ಅಧರ್ಮವು ತಾಂಡವಾಡುವಾಗ, ನನ್ನ ಭಕ್ತರನ್ನು ರಕ್ಷಿಸಿ, ದುಷ್ಟರನ್ನು ಶಿಕ್ಷಿಸುತ್ತೇನೆ ಮತ್ತು ಧರ್ಮವನ್ನು ಪುನಃ ಪ್ರತಿಷ್ಠಾಪನೆಗಾಗಿ ಪ್ರತಿಯೊಂದು ಯುಗದಲ್ಲೂ ನಾನು ಮತ್ತೆ ಮತ್ತೆ ಅವತರಿಸುತ್ತೇನೆ" ಎಂದು ಗೀತಾಚಾರ್ಯನು ತಿಳಿಸಿದ್ದಾನೆ.

ಧರ್ಮ ಎಂದರೆ ಒಳ್ಳೆಯತನ ಸನ್ನಡೆತೆ ನೀತಿನಿಯಮಗಳ ಪ್ರಕಾರ ಜೀವನವನ್ನು ನಡೆಸುವುದು. ನ್ಯಾಯಯುತವಾಗಿ, ಪ್ರಕೃತಿಯೊಂದಿಗೆ ಇತರ ಮನುಷ್ಯರೊಂದಿಗೆ, ಭಗವಂತನೊಂದಿಗೆ, ಎಲ್ಲಾ ಕಾರ್ಯಗಳಲ್ಲೂ ಧರ್ಮಯುತವಾಗಿ ನಡೆದು ಕೊಳ್ಳುವುದು ಅದಕ್ಕೇ ಧರ್ಮವನ್ನು ರಕ್ಷಿಸಬೇಕೆಂದು ಭಗವಂತನು ರಾಕ್ಷಸರನ್ನು ಸಂಹರಿಸಿ, ದುಷ್ಟಶಿಕ್ಷಣ, ಶಿಷ್ಟರಕ್ಷಣೆಯನ್ನು ಮಾಡುವುದಕ್ಕಾಗಿ ಶ್ರೀರಾಮನಾಗಿ ಅವತರಿಸಿದನು. "ರಾಮ" ಎಂಬ ಶಬ್ದವೇ ತಿಳಿಸುವಂತೆ ಎಲ್ಲರ ಮನಸ್ಸಿಗೂ ಮುದನೀಡುವಂತಹಾ ಹೆಸರು ಲೋಕವನ್ನೆಲ್ಲಾ ಸಮ್ಮೋಹನಗೊಳಿಸುವಂತಹುದು. ಈ ಶಬ್ದವು ಸತ್ಪುರುಷರಿಗೆ ಸಂತೋಷವನ್ನು ದುಷ್ಟರಿಗೆ ದುಃಖವನ್ನು, ಭಯವನ್ನುಂಟು ಮಾಡುವಂತದ್ದು ಸಮಸ್ತ ಸುಖಸಂಪತ್ತುಗಳನ್ನು ಅನುಗ್ರಹಿಸುವಂತದ್ದು ಯಮದೂತರನ್ನು ಭಯಕ್ಕೀಡುಮಾಡುವಂತದ್ದು ವೇದಗಳ ಸಾರವಾದ ರಾಮನಾಮವು ಅತ್ಯಂತ ಸುಲಭಸಾಧ್ಯವಾದುದು. ಮಧುರವೂ ಅನಂತವೂ ಆದುದು.

ಶ್ರೀರಾಮನು ಏಕಾಗ್ರಚಿತವನ್ನು ಸುಂದರವಾದ ರೂಪವನ್ನು ಹೊಂದಿದವನು, ವಿಶಾಲವಾದ ಬಾಹುಗಳು ಶಂಖದಂತಹಾ ಕುತ್ತಿಗೆ, ಸುಂದರವಾದ ವದನಾರವಿಂದವನ್ನು, ವಿಶಾಲವಾದ ವಕ್ಷಃಸ್ಥಳವನ್ನು ಅಂದವಾದ ಮುಖವನ್ನು ಹೊಂದಿದವನು. ಶಕ್ತಿ ಸಂಪನ್ನನಾದವನು ದಿವ್ಯ ಶಕ್ತಿಯನ್ನು ಹೊರಸೂಸುವಂತಹವನು. ಇಂದ್ರಿಯ ನಿಗ್ರಹವನ್ನು ಹೊಂದಿದವನು ಸತ್ಕೀರ್ತಿ, ಜ್ಞಾನಸಂಪತ್ತು, ವೇದ ವೇದಾಂಗ ತತ್ವವೇತ್ತ ಸರ್ವಶಾಸ್ತ್ರಪಾರಂಗತ, ಉತ್ತಮೋತ್ತಮವಾದ ಸ್ಮೃತಿ, ಪ್ರತಿಭೆ, ಲೋಕಪ್ರಿಯತೆ, ಸಾಧು ಮನೋಭಾವ ವಿಚಕ್ಷಣೆ, ಏಕಪತ್ನೀವ್ರತ, ಒಂದೇ ಮಾತು ಒಂದೇ ಬಾಣ, ಪಿತೃವಾಕ್ಯಪರಿಪಾಲಕ ಇವೆಲ್ಲಾ ಸದ್ಗುಣಗಳನ್ನು ಹೊಂದಿದ್ದವನಾದ್ದರಿಂದ ಸರ್ವಜೀವರಿಗೆ, ಸರ್ವಲೋಕಕ್ಕೆ, ಆದರ್ಶಪುರುಷನಾಗಿದ್ದಾನೆ. ರಾಮನ ರಾಜ್ಯ ಪಾಲನೆಯಲ್ಲಿ ಪ್ರಜೆಗಳು "ರಾಮ ರಾಮ" ಎಂಬ ರಾಮ ನಾಮವನ್ನು ಬಿಟ್ಟು ಮತ್ತೊಂದು ಮಾತನ್ನು ಆಡುತ್ತಿರಲಿಲ್ಲಿ ಪ್ರಪಂಚವೆಲ್ಲಾ ರಾಮ ನಾಮಮಯವಾಗಿತ್ತು.

ತ್ರೇತಾಯುಗ ಧರ್ಮವನ್ನು ಪರಿರಕ್ಷಿಸಬೇಕೆಂದು ವಸಂತಋತುವಿನ ಆಗಮನದ ಸಮಯದಲ್ಲಿ ಚೈತ್ರಮಾಸದ ನವಮಿ ತಿಥಿಯಂದು ಪುನರ್ವಸು ನಕ್ಷತ್ರದಲ್ಲಿ ಸಮಸ್ತ ಲೋಕಪ್ರಭುವಾದ ಶ್ರೀರಾಮನು ಜನ್ಮಿಸಿದ. ರಾಕ್ಷಸ ಕೃತ್ಯಗಳಿಂದ ಅಧರ್ಮವು ಹರಡುತ್ತಿದ್ದು ಲೋಕಕಂಟಕರು ಹೆಚ್ಚಾದಾಗ ಶ್ರೀರಾಮಚಂದ್ರನ ದಯೆಯಿಂದಾಗಿ ಧರ್ಮವು ಮತ್ತೆ ಪ್ರತಿಷ್ಠಾಪಿಸಲ್ಪಟ್ಟಿತು. ಲೋಕಕ್ಕೆ ಹೊಸ ಚೈತನ್ಯ ಉಕ್ಕಿಬಂತು. ಚೈತ್ರಶುದ್ಧ ಪಾಡ್ಯಮಿಯಂದು ಯುಗಾದಿ ಆದ್ದರಿಂದ ಅಂದಿನಿಂದ ನವಮಿಯವರೆಗೂ ಶ್ರೀರಾಮ ನವರಾತ್ರೋತ್ಸವಗಳನ್ನು ದೇಶದಾದ್ಯಂತ ಅತ್ಯಂತ ವೈಭವದಿಂದ ಆಚರಿಸುತ್ತಾರೆ ಹಾಗೇ ತಾರಕಮಂತ್ರವಾದ ರಾಮಮಂತ್ರದೊಂದಿಗೆ ಜನರೆಲ್ಲರೂ ಸರ್ವಸೌಭಾಗ್ಯಗಳಿಂದ ತುಂಬಿತುಳುಕುವಂತೆ ಧರ್ಮಕ್ಕೆ ಪ್ರತೀಕವಾದ ಶ್ರೀರಾಮ ಚಂದ್ರವನ್ನು ಅರ್ಚಿಸಿ, ಸ್ಮರಿಸಿ, ಧ್ಯಾನಿಸಿ ರಾಮನ ಆಶೀರ್ವಾದವನ್ನು ಪಡೆದು ನಾವೆಲ್ಲರೂ ಧನ್ಯರಾಗೋಣ.

**ಶ್ರೀರಾಮ!ಜಯ ರಾಮ!ಜಯ ಜಯ ರಾಮ!!**

# ಭದ್ರಾಚಲ ರಾಮದಾಸರು

-ಶ್ರೀಮತಿ. ಗಿರಿಜಾ ಎಸ್. ದೇಶಪಾಂಡೆ,
97393 88300

ರಾಮಾಯಣ ಕಾಲದಿಂದಲೂ ನಾವು ಶ್ರೀರಾಮನನ್ನು ದೇವರೆಂದು ನಂಬಿರುವೆವು. ಹಾಗೆಯೇ ರಾಮನನ್ನು ಪೂಜಿಸಿ ರಾಮನವಮಿಯನ್ನು ಸಂಭ್ರಮದಿಂದ ನಾಡಿನಲ್ಲೆಲ್ಲ ಆಚರಿಸುತ್ತೇವೆ. ನಂಬಿಕೆ ದೇವರ ಮೇಲೆ ಮುಖ್ಯವಾಗಿರಬೇಕು. ಅದೇ ರೀತಿ ರಾಮನು ಭಕ್ತರನ್ನು ಉದ್ಧಾರ ಮಾಡಿರುವ ಎಷ್ಟೋ ಕಥೆಗಳನ್ನು ನಾವು ಕೇಳಿದ್ದೇವೆ. ಅಂಥಹ ಕಥೆಗಳು ಪ್ರಚಾರದಲ್ಲೂ ಇದೆ. ಅಂತಹ ಕಥೆಗಳಲ್ಲಿ ಭದ್ರಾಚಲ ರಾಮದಾಸರ ಕಥೆಯೂ ಒಂದು.

**ಶ್ರೀರಾಮನ ಆಶೀರ್ವಾದ -**

ಭದ್ರಾಚಲ ಎಂದರೆ ಭದ್ರ ಎಂಬ ಹೆಸರಿನ ಒಂದು ಪರ್ವತ ಎಂದರ್ಥ. ಈ ಪರ್ವತ ಆಂಧ್ರಪ್ರದೇಶದ ಖಮ್ಮಂ ಜಿಲ್ಲೆಯಲ್ಲಿದೆ. ಅದರ ಪಕ್ಕದಲ್ಲೇ ಗೋದಾವರಿ ನದಿ ಹರಿಯುತ್ತದೆ. ಬ್ರಹ್ಮಾಂಡ ಪುರಾಣದಲ್ಲಿ ಒಂದು ಕತೆ ಇದೆ ಪರ್ವತಗಳ ರಾಜ ಆಮೇರು. ಅವನ ಹೆಂಡತಿ ಮೇನಕೆ. ಬ್ರಹ್ಮನ ವರದಿಂದ ಅವರಿಗೆ ಭದ್ರನೆಂಬ ಮಗ ಹುಟ್ಟಿದ. ಭದ್ರ ಬೆಳೆದು ದೊಡ್ಡವನಾದನು. ಅವನು ಗೋದಾವರಿ ತಟದಲ್ಲಿ ತಪಸ್ಸು ಮಾಡುತ್ತಿದ್ದನು. ಆ ಪ್ರದೇಶಕ್ಕೆ ದಂಡಕಾರಣ್ಯವೆಂಬ ಹೆಸರು. ಶ್ರೀರಾಮನು ಸೀತೆ, ಲಕ್ಷ್ಮಣನೊಂದಿಗೆ ಕಾಡಿಗೆ ಹೊರಟಾಗ ಭದ್ರನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದರು. ಆ ಪರ್ವತದಲ್ಲಿ ಕುಳಿತಾಗ ಮೂವರಿಗೂ ಬಹಳ ಶಾಂತಿ ದೊರೆಯಿತು. ಭದ್ರನ ತಪಸ್ಸು ಈ ಶಾಂತಿ ಸಿಗಲು ಕಾರಣವೆಂದು ರಾಮನಿಗೆ ಅರ್ಥವಾಯಿತು. ಆಗ ಸಂತಸಗೊಂಡ ರಾಮನು ಭದ್ರಾ ಇಲ್ಲಿ ಬಾ ಎಂದು ಕರೆದನು. ಆಗ ರಾಮನು ತಪಸ್ಸಿಗೆ ಕಾರಣ ಕೇಳಿದಾಗ ಭದ್ರನು ನೀವು ಸೀತೆ, ಲಕ್ಷ್ಮಣರೊಡನೆ ಇಲ್ಲಿಯೇ ನೆಲೆಯಾಗಿ ನಿಲ್ಲಬೇಕು. ನನ್ನನ್ನು ನಿಮ್ಮ ಭಕ್ತರನ್ನು ಉದ್ಧಾರ ಮಾಡಬೇಕೆಂದಾಗ ರಾಮನು ಆಗಲಿ ಎಂದು ವರ ಕರುಣಿಸಿದಾಗ ಅವರು ನಿಂತಿದ್ದ ಕಲ್ಲು ಸೀತಾ ರಾಮಲಕ್ಷ್ಮಣರ ಆಕಾರವನ್ನು ತಾಳಿತು. ಭದ್ರ ಎಂದರೆ ಮಂಗಳ ಎಂದರ್ಥ. ಶ್ರೀರಾಮನ ಪಾದ ಪರ್ವತ ಮೆಟ್ಟಿದುದರಿಂದ ಅದಕ್ಕೆ ಭದ್ರಾಚಲವೆಂಬ ಹೆಸರು ಸಾರ್ಥಕವಾಯಿತು. ಗೋಪನ್ನ - ಅಲ್ಲಿ ನೆಲೆ ಇರುವ ದೇವಾಲಯ ಕಟ್ಟಿಸಿದ ಕೀರ್ತಿ ರಾಮದಾಸರಿಗೆ ಸಲ್ಲುತ್ತದೆ. ಇವರ ನಿಜವಾದ ಹೆಸರು ಗೋಪನ್ನ. ಈ ಕಥೆ ನಡೆದದ್ದು 17 ನೆಯ ಶತಮಾನದ ಮಧ್ಯ ಭಾಗದಲ್ಲಿ.ಭದ್ರಾಚಲ ಗೋಲ್ಕಂಡದ ನವಾಬನಿಗೆ ಸೇರಿತ್ತು. ಆ ಖಮ್ಮಂ ಜಿಲ್ಲೆಯಲ್ಲಿ ನೆಲಕೊಂಡಪಲ್ಲಿ ಎಂಬ ಹೆಸರಿನ ಗ್ರಾಮದಲ್ಲಿ ಲಿಂಗನ ಮಂತ್ರಿ ಶಾಮಮ್ಮ ಎಂಬ ದಂಪತಿಗಳ ಮಗನೇ ಗೋಪನ್ನ. ಗೋಪನ್ನ ಬಹುಬೇಗ ತೆಲುಗು, ಸಂಸ್ಕೃತ ಕಲಿತು ದೊಡ್ಡ ಪಂಡಿತನಾದ.ಅಂದು ರಾಜ ಭಾಷೆಗಳಾಗಿದ್ದ ಉರ್ದು, ಪರ್ಶಿಯನ್ ಭಾಷೆಗಳಲ್ಲೂ ವಿದ್ವಾಂಸನಾದ ಎಳೆ ವಯಸ್ಸಿನಲ್ಲೇ ಬಹುಭಕ್ತಿ ಇರುವ ಗೋಪನ್ನ ಮಾರುತಿಯ ಗುಡಿಗೆ ಹೋಗಿ ಅಲ್ಲಿ ಸೇವೆ ಮಾಡುತ್ತಿದ್ದ.

ಊರಿನಲ್ಲಿದ್ದ ರಾಮದೇವರ ದೇವಸ್ಥಾನದಲ್ಲಿ ರಾಮೋತ್ಸವ. ಜನ ಸಾಗರದಲ್ಲಿ ಹಬ್ಬದ ಆಚರಣೆಯ ಸಮಯದಲ್ಲಿ ಜನರು ಮಧ್ಯದಲ್ಲಿ ಇರುವ ಮುಸಲ್ಮಾನ ಸಂತನು ದೇವರ ದರ್ಶನಕ್ಕೆ ಹಾತೊರೆಯುತ್ತಿರುವಾಗ ಯಾರೋ ಒಳಗೆ ಬಿಡದ ಸಮಯದಲ್ಲಿ ಗೋಪನ್ನ ನೋಡಿ ಜನರ ಒಪ್ಪಿಗೆ ತೆಗೆದುಕೊಂಡು ಸಂತನನನ್ನು ಒಳಗೆ ಬಿಡಲು ರಾಮನ ಹಾಡಿನಿಂದ ಜನರನ್ನು ರಂಜಿಸಲು ದೇವಸ್ಥಾನದ ಧರ್ಮಾಧಿಕಾರಿ ಸಂತನನ್ನೇ ಸೇರಿಸಿದ್ದಕ್ಕೆ ಅವನನ್ನು ಹೊರಗೆ ಹಾಕಿದರು.ಸಂತನು ಊರ ಹೊರಗೆ ಹೋಗಲು ದೇವರ ಮೂರ್ತಿ ಗಳೂ ಅಲ್ಲಿಂದ ಮಾಯವಾಗಲು ಎಲ್ಲರಿಗೂ ಅಚ್ಚರಿಯಾಯಿತು. ಗೋಪನ್ನ ಸಂತನನ್ನು ಹುಡುಕಿ ಮತ್ತೆ ಕರೆತರಲು ಆ ಸಂತನು ಕಬೀರದಾಸರು ಎಂದು ಗೊತ್ತಾಗಿ ಶಿಷ್ಯತ್ವ ಪಡೆಯುತ್ತಾನೆ. ಮುಂದೆ ಸಂತನನ್ನು ದೇವಸ್ಥಾನಕ್ಕೆ ಕರೆತರಲು ದೇವರ ವಿಗ್ರಹಗಳು ಮತ್ತೆ ಕಂಡಾಗ ಜನರಿಗೆಲ್ಲ ಅಚ್ಚರಿ ಕಾದಿತ್ತು ಜೀವನದಲ್ಲೇ ಜಿಗುಪ್ಸೆಗೊಂಡ ಗೋಪನ್ನನನ್ನು ಸೋದರ ಮಾವಂದಿರು ತಮ್ಮ ಮನೆಗೆ ಕರೆದೊಯ್ದಾಗ ಮಾದಣ್ಣನಿಗೆ ವಯಸ್ಸಿಗೆ ಬಂದ ಮಗಳಿದ್ದಳು. ಆಕೆಯನ್ನು ಕೊಟ್ಟು ಗೋಪನ್ನನಿಗೆ ಮದುವೆ ಮಾಡಿ ತಮ್ಮ ನವಾಬರಿಗೆ ಹೇಳಿ

ಗೋಪನ್ನನಿಗೆ ಕೆಲಸ ಕೊಡಿಸಿದರು. ಆಗ ಗೋಪನ್ನ ಹೆಂಡತಿಯೊಡನೆ ಖಿಮ್ಮಂಗೆ ಬಂದರು.

ಗೋಪನ್ನ ಭದ್ರಾಚಲಕ್ಕೆ ಹೋದಾಗ ಭದ್ರಾಚಲದ ರಾಮನ ಕಥೆ ಕೇಳಿ ಅಲ್ಲಿಯ ವಿಗ್ರಹ ಕಾಣುತ್ತಲೇ ಆತನ ಭಕ್ತಿ ಉಕ್ಕಿತು.ಆಗ ಆತನ ಬಾಯಿಯಿಂದ "ದಾಶರಥಿ ಕರುಣಾಪಯೋನಿಧಿ" ಎಂಬ ಕವಿತೆ ಹರಿದು ಬಂದಿತು. ರಾಮಚಂದ್ರ ಮೂರ್ತಿಯನ್ನೇ ತಮ್ಮ ಮನೆ ದೇವರಾಗಿ ಭಾವಿಸಿದನು. ಅಲ್ಲಿನ ರಾಮ ದೇವರಿಗೆ ನಾಲ್ಕು ಕೈಗಳಿವೆ. ಬಲಗೈಲಿ ಶಂಖ,ಎಡಗೈಲಿ ಚಕ್ರವಿದೆ.ಇಲ್ಲಿನ ರಾಮನನ್ನು ವೈಕುಂಠರಾಮ, ರಾಮ ನಾರಾಯಣ ಎಂಬ ಹೆಸರಿನಿಂದ ಕರೆಯುತ್ತಾರೆ. ಅಲ್ಲಿ ಪೂಜೆ ಅನ್ನದಾನ ಪ್ರತಿದಿನ ನಡೆಯುತ್ತಿತ್ತು. ರಾಮದಾಸರು ಒಮ್ಮೆ ರಾಮ,ಲಕ್ಷ್ಮಣ, ಸೀತೆಯ ಮೂರ್ತಿಗಳು ನಿರಾಭರಣವಾಗಿರುವುದನ್ನು ನೋಡಿ ನಾನ್ಯಾಕೆ ದೇವಸ್ಥಾನವನ್ನು ಅದ್ಧೂರಿಯಾಗಿ ನಿರ್ಮಿಸಿ ಬಾರದೆಂದು ಗರ್ಭಗುಡಿ, ಗೋಪುರ, ಕೈಸಾಲೆ, ಮೇಲ್ಕಟ್ಟು ಮಂಟಪ, ರಥ, ಕೊಳ, ಪ್ರಾಕಾರ ಸುಂದರವಾಗಿ, ಭವ್ಯವಾಗಿ ಕಲಾಮಯವಾಗಿ ಕಂದಾಯದ ಸಹಾಯದಿಂದ ಕಟ್ಟಿಸಿದರು. ಆ ಕಂದಾಯ ಆರು ಲಕ್ಷ ದುಡ್ಡು ದೇವ ಸ್ಥಾನಕ್ಕೆ ವೆಚ್ಚ ಮಾಡಿದ್ದರಿಂದ ರಾಮದಾಸರನ್ನು ಸೆರೆ ಮನೆಗೆ ನವಾಬರು ತಳ್ಳಿ ಕೊಡಬಾರದ ಹಿಂಸೆ ನೀಡಲು 12 ವರ್ಷ ಸೆರೆಮನೆಯ ವಾಸದಲ್ಲೂ ರಾಮನಾಮ ಬಿಡದ ರಾಮದಾಸರು ರಾಮನ ಆಶೀರ್ವಾದ ಸಿಗದಿರಲು ಸೀತಮ್ಮನನ್ನು ಮೊರೆ ಹೋದಾಗ ಒಂದು ದಿನ ರಾಮ, ಲಕ್ಷ್ಮಣರು ಬಂದು ಅವರು ದೇವಸ್ಥಾನಕ್ಕೆ ವೆಚ್ಚಮಾಡಿದ ಹಣವನ್ನು ಸಂದಾಯ ಮಾಡಿ ರಾಮದಾಸರನ್ನು ಬಿಡುಗಡೆ ಮಾಡಲು ಹೇಳಿದರು. ನವಾಬರು, ಅವರ ಹಣವನ್ನು ಅವರಿಗೆ ಹಿಂದಿರುಗಿಸಿ ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕೊಂಡು ಹೋದರು. ಅವರಿಗೆ ಸಿದ್ಧವಾಗಿದ್ದ ಪೀಠದಲ್ಲಿ ನವಾಬರು ಆಸೀನರಾಗಿಸಿ ತಮ್ಮ ತಪ್ಪನ್ನು ಮನ್ನಿಸುವಂತೆಯೂ ದೇವರು ತಂದೊಡ್ಡಿಸಿದ ಹಣವನ್ನು ನಿಮಗೆ ಒಪ್ಪಿಸುತ್ತೇನೆ. ಸ್ವೀಕರಿಸಿ ಇನ್ನು ಮುಂದೆ ಭದ್ರಾಚಲದ ತಾಲೂಕಿನಿಂದ ಬಂದ ಕಂದಾಯವನ್ನೆಲ್ಲ ನೀವು ನಿಮ್ಮ ಪೂಜೆಗಾಗಿ ವೆಚ್ಚ ಮಾಡಬಹುದು ಎಂದು ವಿನಂತಿಸಿದರು. ರಾಮದಾಸರು ಆ ಹಣವನ್ನು ಮುಟ್ಟಲಿಲ್ಲ ಅವೆಲ್ಲ ಬಂಗಾರದ ನಾಣ್ಯಗಳಾಗಿದ್ದವು. ಅವುಗಳಲ್ಲಿ ಎರಡನ್ನು ಮಾತ್ರ ತೆಗೆದುಕೊಂಡು ನವಾಬರಿಗೆ "ನನ್ನ ಪುಣ್ಯಕ್ಕಿಂತ ನಿನ್ನ ಪುಣ್ಯ ದೊಡ್ಡದು ನನ್ನ ರಾಮಚಂದ್ರ ಮೂರ್ತಿಯನ್ನು ಕಣ್ಣಾರೆ ಕಂಡೆ, ನನಗೆ ಈ ಭಾಗ್ಯ ಇಲ್ಲ ನೀನು ಧನ್ಯ" ಎಂದು ಹೇಳಿದರು. ರಾಮದಾಸರು ಭದ್ರಾಚಲಕ್ಕೆ ಬರುವ ಸುದ್ದಿ ಕೇಳಿದ ಜನ ಅವರನ್ನು ಇದಿರುಗೊಂಡರು. ರಾಮದಾಸರು ನೇರ ದೇವಸ್ಥಾನಕ್ಕೆ ಹೋಗಿ ಸೀತಾರಾಮ ಲಕ್ಷ್ಮಣರ ವಿಗ್ರಹ ನೋಡಿ ತಮ್ಮ ಗದ್ಗದ ಕಂಠದಲ್ಲಿ " ಈ ಜಗಮಂತಾ ರಾಮಮಯಂ" ಎಂದು ಹಾಡು ಹೇಳಿದರು. ತಾವು ತಂದ ಎರಡು ರಾಮಟಂಕೀ ವರಾಹಗಳನ್ನು ರಾಮಸೀತೆಯ ವಿಗ್ರಹದ ಬಳಿ ಇಟ್ಟರು. ಈಗಲೂ ಆ ನಾಣ್ಯಗಳು ರಾಮಸೀತೆಯರ ವಿಗ್ರಹಗಳನ್ನು ಅಲಂಕರಿಸಿವೆಯೆಂದು ಅರ್ಚಕರು ಅಲ್ಲಿಗೆ ಹೋದ ಭಕ್ತಾದಿಗಳಿಗೆ ತೋರಿಸುತ್ತಾರೆ.

ರಾಮದಾಸರು ತಾನೀ ಶನು ಕೊಟ್ಟ ಹಣವನ್ನೆಲ್ಲ ರಾಮನ ಪೂಜೆಗಾಗಿ ವೆಚ್ಚ ಮಾಡುತ್ತ ಕಾಲ ಕಳೆದರು ಅವರ ಭಕ್ತಿ ರಾಮ ಚಂದ್ರನ ಕರುಣೆ ದೇಶದಲ್ಲೆಲ್ಲ ಪ್ರಚಾರವಾಯಿತು. ಆಗಿನಿಂದ ಭದ್ರಾಚಲವು ಬಹುದೊಡ್ಡ ಯಾತ್ರಾ ಸ್ಥಳವಾಗಿದೆ. ಅವರಿಗೆ ಕಾಲುಗಳು ನಡೆದಾಡಲೂ ಆಗದಿರಲು ರಾಮಚಂದ್ರನನ್ನು ದೀನರಾಗಿ ಬೇಡಲು ಅಲ್ಲಿಯೇ ಬಂದು ದರ್ಶನವೀಯುತ್ತಿದ್ದನಂತೆ. ಒಂದು ದಿನ ರಾಮನನ್ನು ನೋಡುತ್ತಲೇ ತಮ್ಮ ಉಸಿರನ್ನು ಎಳೆದರಂತೆ. ಭದ್ರಾಚಲ ರಾಮದಾಸರು ಈಗ ಇಲ್ಲವಾದರೂ ಅವರು ಕಟ್ಟಿಸಿದ ಗುಡಿ ಅವರು ಹಾಡಿದ ಕೀರ್ತನೆಗಳು ಅವರ ಹೆಸರನ್ನು ಇಂದಿಗೂ ಉಳಿಸಿವೆ. ಗೋಲ್ಕಂಡ ಕೋಟೆಯಲ್ಲಿ ರಾಮದಾಸರು ಸೆರೆ ಇದ್ದು, ರಾಮ, ಸೀತೆ, ಲಕ್ಷ್ಮಣರ ಪೂಜೆ ಮಾಡುತ್ತಿದ್ದ ಸ್ಥಳವನ್ನು ಇಂದೂ ತೋರಿಸುತ್ತಾರೆ. ಅಲ್ಲಿ ಈಗಲೂ ಪೂಜೆ ನಡೆಯುತ್ತದೆ. ಭಕ್ತ ರಾಮದಾಸರು ಆರಂಭಿಸಿದ ವೈಕುಂಠ ಏಕಾದಶಿ ಮತ್ತು ರಾಮ ನವಮಿ ಉತ್ಸವಗಳು ಇಂದಿಗೂ ನಡೆದುಕೊಂಡು ಬರುತ್ತಿದೆ.

**ತಿರುಮಲೆಯ ಯಾತ್ರಿಕರಿಗೆ,**
**ಶ್ರೀ ವೆಂಕಟೇಶ್ವರಸ್ವಾಮಿಯ ಭಕ್ತರಿಗೆ,**
**ಸಪ್ತಗಿರಿ ಮಾಸಪತ್ರಿಕೆಯ**
**ಓದುಗರಿಗೆ,ಚಂದಾದಾರರಿಗೆ, ಏಜಂಟರಿಗೆ**

**"ಶ್ರೀಕ್ರೋಧಿ ನಾಮ ಸಂವತ್ಸರ"**
**ಶುಭಪ್ರದವಾಗಿರಲಿ**
**ಶ್ರೀ ವೆಂಕಟೇಶ್ವರಸ್ವಾಮಿಯು**
**ಅನುಗ್ರಹ ಪೂರ್ಣವಾಗಿ**
**ಎಲ್ಲರನ್ನೂ ಕಾಪಾಡಲಿ ಎಂದು**
**'ಸಪ್ತಗಿರಿ'ಯ ಹೃತ್ಪೂರ್ವಕ**
**ಹಾರೈಕೆಗಳು**

**- ಪ್ರಧಾನ ಸಂಪಾದಕರು**

ಮೂಲ : ಡಾ॥ ಸಿ. ಮಧುಸೂದನ ಶರ್ಮ
ಅನುವಾದ : ಡಿ.ಎಸ್. ಬದ್ರಿನಾಥ್

ಧರ್ಮಾರ್ಥ ಕಾಮ ಮೋಕ್ಷಗಳ ಸಾಧನೆಗೆ ಅತ್ಯಂತ ಅವಶ್ಯಕವಾದುದು ಆರೋಗ್ಯ ಎನ್ನುತ್ತದೆ. ಸನಾತನ ವೈದಿಕ ವಾಙ್ಮಯವು ಆರೋಗ್ಯ ಸಂರಕ್ಷಣೆಗೆ ನಾವು ಸ್ವೀಕರಿಸುವ ಆಹಾರ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆಂಬುದು ನಮ್ಮೆಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಆಹಾರದಿಂದಲೇ ಈ ದೇಹ ಉದ್ಭವಿಸುತ್ತದೆಂದು,ರೋಗಗಳೂ ಸಹ ಉದ್ಭವಿಸುತ್ತದೆಂದೂ ನಮ್ಮ ಆಯುರ್ವೇದ ವೈದ್ಯ ವಿಜ್ಞಾನ ಕೂಡಾ ಸ್ಪಷ್ಟಪಡಿಸುತ್ತದೆ. ಕಾಲವನ್ನೇ ದೇವರೆಂದು ಭಾವಿಸಿ ಪೂಜಿಸುವ ವಿಶೇಷವಾದ ಪರ್ವದಿನ ಯುಗಾದಿ. ಯುಗಾದಿಯಂದು ತಯಾರಿಸುವ ರಸಾಯನಕ್ಕೆ ಬೇವಿನ ಹೂವಿನ ಭಕ್ಷಣೆ, ಅಶೋಕ ಕಳಿಕಾಪ್ರಾಶಂ ಎಂಬ ಹೆಸರಿದೆ. ಋತು ಪರಿವರ್ತನೆಯ ಪ್ರಭಾವದಿಂದ ಉಂಟಾಗುವ ತೊಂದರೆಗಳು,ಅನಾರೋಗ್ಯ ಸಮಸ್ಯೆಗಳ ಪರಿಹಾರಾರ್ಥವಾಗಿ ಇದನ್ನು ಸೇವಿಸುವುದು ಅನಾದಿಯಾಗಿ ನಡೆದುಕೊಂಡು ಬಂದ ಪದ್ಧತಿ.

ತತ್ರಾದ್ಯಾ ಮಾರುತಂ ಘ್ನಂತಿ ತ್ರಯಸ್ತಿಕಾದಯಃ ಕಫಂ।
ಕಷಾಯತಿಕ್ತ ಮಧುರಾಃ ಪಿತ್ತಮನ್ಯೇತು ಕುರ್ಯತೇ॥

ಎನ್ನುತ್ತಾರೆ. ಪ್ರಾಮಾಣಿಕ ಆಯುರ್ವೇದ ಗ್ರಂಥ ಅಷ್ಟಾಂಗ ಹೃದಯ ಕರ್ತರಾದ ವಾಗ್ಭಟಾಚಾರ್ಯರು ಷಡ್ರಸಗಳಲ್ಲಿ ಮಧುರಾಮ್ಲ ಲವಣ ರಸಗಳು, ವಾತ ದೇಹ ದೋಷವನ್ನು, ಕಟು (ಖಾರ), ತಿಕ್ತ (ಕಹಿ) ರಸಗಳು ಕಫ ದೋಷವನ್ನು,ಕಷಾಯ,ತಿಕ್ತ,ಮಧುರರಸಗಳು ಪಿತ್ತ ದೋಷಗಳನ್ನು ನಿವಾರಿಸುತ್ತವೆಂಬುದು ಇದರ ಅರ್ಥ. ಋತುಗಳು ಬದಲಾದಂತೆ ಸಮಸ್ತ ಚರಾಚರ ಜೀವ ಜಂತುಗಳ ದೇಹಪ್ರಕ್ರಿಯೆಗಳಲ್ಲೂ ಬದಲಾವಣೆ ಬರುವುದು ಸ್ವಾಭಾವಿಕ. ಶಿಶಿರ ಋತುವಿನಿಂದ ವಸಂತ ಋತುವಾಗಿ ಬದಲಾಗುವ ವೇಳೆ ರೋಗಗಳ ವ್ಯಾಪ್ತಿ,ನಿಯಂತ್ರಣ,ನಿರೋಧಗಳ ನಿಮಿತ್ತ ಈ ಯುಗಾದಿ ರಸಾಯನ ಸೇವನ ಪ್ರಕ್ರಿಯೆ ಸಂಪ್ರದಾಯವನ್ನು ಅನುಸರಿಸುವ ದ್ಯೋತಕವೂ ಆಗಿದೆ.

ಯುಗಾದಿ ಚೈತ್ರ ಮಾಸದಲ್ಲಿ ಬರುತ್ತದೆ. ಉಷ್ಣ,ಶಾಖ,ತಾಪಗಳ ತೀವ್ರತೆ, ಸೂರ್ಯನ ತಾಪ ದಿನೇ ದಿನೇ ಜಾಸ್ತಿಯಾಗುವುದು ಇದ್ದೇ ಇರುತ್ತದೆ. ಅವುಗಳಿಂದ ರಕ್ಷಣೆಯನ್ನು ಪಡೆಯುವುದು. ಪಾಲಿಸಬೇಕಾದ ಆಹಾರ ವಿಧಾನಗಳನ್ನು ತಿಳಿಸುವುದೇ ಈ ಹಬ್ಬದ ಆಚರಣೆಯ ಗೂಢಾರ್ಥ. ಪರಮಾರ್ಥ ಮತ್ತು ಗುರಿಯೆಂದು ಭಾವಿಸಬಹುದು.

## ಸಂಪ್ರದಾಯ ಪದ್ಧತಿಯ ಪ್ರಕಾರ ಯುಗಾದಿ ರಸಾಯನದ ತಯಾರಿಕೆ:

ಒಂದು ಮಣ್ಣಿನ ಪಾತ್ರೆಯಲ್ಲಿ ತುಂಬಿಲ್ಲದ ಬೇವಿನ ಹೂವು ಒಂದು ಭಾಗ, ಮಾವಿನಕಾಯಿಯ ಖಂಡದ ಎರಡು ಹೋಳುಗಳು, ಕಾಲಮೆಣಸಿನ ಪುಡಿ ಮೂರು ಭಾಗಗಳು, ಹುಣಸೇ ಹಣ್ಣು ನಾಲ್ಕು ಭಾಗ, ಉಪ್ಪು ಐದು ಭಾಗಗಳು, ಬೆಲ್ಲದ ಪುಡಿ ಆರು ಭಾಗಗಳು ಹಾಕಿ ತಕ್ಕಷ್ಟು ನೀರು ಹಾಕಿದರೆ ಅದೇ ಯುಗಾದಿ ರಸಾಯನವಾಗುತ್ತದೆ. ಹೀಗೆ ಒಂದು ಪ್ರಮಾಣದ ಪ್ರಕಾರ ಶಾಸ್ತ್ರೀಯ ಪದ್ಧತಿಯಲ್ಲಿ ತಯಾರು ಮಾಡಿಕೊಂಡು ಖಾಲಿ ಹೊಟ್ಟೆಯಲ್ಲಿ,

"ಶತಾಯು ವಜ್ರದೇಹಾಯ ಸರ್ವ ಸಂಪತ್ಕರಾಯಚ।
ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳ ಭಕ್ಷಣಂ॥"

ಎಂಬ ಶ್ಲೋಕವನ್ನು ಓದುತ್ತಾ ಸೇವಿಸಬೇಕು. ಅರಿಷಡ್ವರ್ಗಗಳೆಂದು ಕರೆಯಲ್ಪಡುವ ಕಾಮ,ಕ್ರೋಧ,ಲೋಭ,ಮೋಹ,ಮದ,ಮಾತ್ಸರ್ಯಗಳೆಂಬ ಅಂತಃಶತ್ರುಗಳನ್ನು ವಿಜಯಿಸಲು ಸಹ ಇದು ಸಹಾಯಕವಾಗುತ್ತದೆ ಎಂದು ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಈ ರಸಾಯನವನ್ನು ಚೈತ್ರ ಶುಕ್ಲ ಪಾಡ್ಯದಿಂದ ಹುಣ್ಣಿಮೆಯವರೆಗೆ, ಯುಗಾದಿಯಿಂದ ಶ್ರೀರಾಮನವಮಿವರೆಗೆ ದಿನವೂ ಸೇವಿಸುವ ಮೂಲಕ ಈ ವರ್ಷದ್ಯಾಂತ ರೋಗ ನಿರೋಧಕಶಕ್ತಿ ವೃದ್ಧಿಸುವಂತೆ ಪ್ರಚುರವಾಗಿದ್ದು ಯಾವುದೇ ಅನಾರೋಗ್ಯವುಂಟಾಗಲಾರದೆಂದು ಭಾವಿಸುತ್ತಿದ್ದರು.

ಇದರಲ್ಲಿರುವ ಬೇವಿನ ಕಹಿರಸವನ್ನು, ಮಾವಿನ ಹಿಪ್ಪೆಯ ಒಗರು, ಹುಣಸೆಯಹುಳಿ, ಉಪ್ಪು ಲವಣದ ರಸ, ಮೆಣಸಿನ ಖಾರ ಬೆಲ್ಲವು ಸಿಹಿ ರಸವನ್ನು ಹೊಂದಿರುತ್ತದೆ. ಬೇವು ಕ್ರಿಮಿಸಂಹಾರಕ, ರಕ್ತವನ್ನು ಶುದ್ಧಿ ಮಾಡುತ್ತದೆ. ಚರ್ಮವ್ಯಾಧಿಯನ್ನು ನಿವಾರಿಸುತ್ತದೆ. ಶ್ಲೇಷ್ಮದೋಷವನ್ನು ಕಡಿಮೆ ಮಾಡುತ್ತದೆ. ಮಾವು ಜೀರ್ಣ ರಸಗಳನ್ನು ಉತ್ಪತ್ತಿ ಮಾಡುತ್ತದೆ,ಹಸಿವನ್ನು ಹುಟ್ಟಿಸುತ್ತದೆ. ಬಾಯಿಗೆ ರುಚಿಯನ್ನು ತಂದು ಕೊಡುತ್ತದೆ. ಮೆಣಸು ಘಾಟಿನದಾಗಿದ್ದು ಶ್ಲೇಷ್ಮ, ವಾತಾದಿ ಪ್ರಕೋಪಗಳನ್ನು ಉಲ್ಬಣಗೊಳ್ಳದಂತೆ ಕೆಲಸ ಮಾಡುತ್ತದೆ. ಆಸ್ತಾ, ಕೆಮ್ಮು, ಶ್ವಾಸಕೋಶ ದೋಷಗಳಿಗೆ ಒಳ್ಳೆಯದು.

ಹುಣಸೆಹುಳಿ ಜೀರ್ಣಕಾರಕವಾಗಿ ಕಾರ್ಯನಿರ್ವಹಿಸುತ್ತದೆ. ತೇಗುಗಳನ್ನು ನಿಯಂತ್ರಿಸುತ್ತದೆ. ಆಹಾರದ ಮೇಲೆ ಉತ್ಸಾಹವನ್ನು ಬೆಳೆಸುತ್ತದೆ. ಬಾಯಿಗೆ ರುಚಿಯನ್ನು ತರುತ್ತದೆ. ಉಪ್ಪು ಶರೀರಕ್ಕೆ ಶಕ್ತಿಯನ್ನು ನೀಡುತ್ತದೆ. ಆಹಾರಕ್ಕೆ ರುಚಿಯನ್ನು ತರುತ್ತದೆ. ಅಜೀರ್ಣ ದೋಷವನ್ನು ಹೊಟ್ಟೆ ನೋವನ್ನು ನಿವಾರಿಸುತ್ತದೆ. ಬೆಲ್ಲ ಮನಸ್ಸನ್ನು ಆಹ್ಲಾದವಾಗಿರಿಸುತ್ತದೆ. ಮಾನಸಿಕ ಪ್ರಶಾಂತತೆಯನ್ನು ಉಂಟುಮಾಡುತ್ತದೆ. ರಕ್ತಹೀನತೆ ಬರದಂತೆ ಕಾಪಾಡುತ್ತದೆ. ಕಾಲಕ್ಕನುಗುಣವಾಗಿ ಮೇಲಿನ ಪದಾರ್ಥಗಳ ಜೊತೆ ಹಲವಾರು, ಹಲವು ಪ್ರಾಂತ್ಯಗಳಲ್ಲಿ ಏಲಕ್ಕಿ,ಅಜ್ವಾನ,ಬಾಳೆಹಣ್ಣಿನ ಹೋಳು, ಗೋಡಂಬಿ, ಕೊಬ್ಬರಿ ತುಂಡು,ಇಂಗು,ಸ್ಫಟಿಕ ಬೆಲ್ಲ,ತಾಟಿಬೆಲ್ಲ,ಜೀರಿಗೆ,ಅರಸಿನ ಮುಂತಾದವುಗಳನ್ನು ಬಳಸುತ್ತಿದ್ದರೆ ಅವೆಲ್ಲವೂ ರುಚಿಗಾಗಿಯೇ ಹೊರತು ಸಂಪ್ರಾದಯಿಕ ಪದ್ಧತಿಯಲಿಲ್ಲ. ಆಧುನಿಕ ಕಾಲದಲ್ಲಿ ಬಹಳಷ್ಟು ಮಂದಿ ಒಂದೇ ಪಾತ್ರೆಯಲ್ಲಿ ಒಂದು ಟೇಬಲ್‌ಸ್ಪೂನ್ ಬೇವಿನ ಹೂವು ತಾಜಾ ಕೊಬ್ಬರಿ ತುರಿದದ್ದು, ಸಣ್ಣದಾಗಿ ಕತ್ತರಿಸಿದ ಸ್ವಲ್ಪ ಬಾಳೆಹಣ್ಣಿನ ತುಂಡುಗಳು, ಎರಡು ಟೇಬಲ್‌ಸ್ಪೂನಷ್ಟು ಹುಣಸೇಹಣ್ಣು ತುಂಡಾಗಿ ಕತ್ತರಿಸಿದ ಒಂದು ಹಸಿ ಮೆಣಸಿನಕಾಯಿ, ಒಂದು ಕಪ್ಪು ತುರಿದ ಬೆಲ್ಲ, ಒಂದು ಕಪ್ಪು ಮಾವಿನ ಕಾಯಿ ತುಂಡುಗಳು, ಚಿಟಿಕೆ ಉಪ್ಪು, ಅವಶ್ಯಕತೆಯಿದ್ದಲ್ಲಿ ಸ್ವಲ್ಪ ನೀರು ಹಾಕಿ ರಸಾಯನವನ್ನು ತಯಾರಿಸುವುದು ವಾಡಿಕೆ.

ಯಾವುದು ಏನಾದರೂ ಭಗವತ್ಪ್ರಸಾದವಾದ ಈ ಪ್ರಕೃತಿಯಲ್ಲಿ ಲಭಿಸುವ ವಿವಿಧ ರಸ ಪದಾರ್ಥಗಳನ್ನು ಪರಿಚಯಿಸುತ್ತಾ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅವುಗಳನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕು. ಅವುಗಳ ಪ್ರಯೋಜನಗಳೇನೆಂದು ತಿಳಿದುಕೊಂಡು ಎಲ್ಲರಿಗೂ ತಿಳಿಯಪಡಿಸಲೆಂದೇ ಈ ರೀತಿಯ ಹಬ್ಬಗಳನ್ನು ಆಯೋಜನೆ ಮಾಡಿರುವುದರ ಪರಮಾರ್ಥವು.

# ಜೀವ ಕಳೆಯು ಬರುತ್ತಿದೆ ಸಕಲ ಜೀವ ಜಾತಕೆ

-ಡಾ॥ಗುರುರಾಜ ಪೋಶೆಟ್ಟಿಹಳ್ಳಿ
97393 69621

## ಹಳತು ಹೊಸತರ ಸಮನ್ವಯ

ನಿಜಕ್ಕೂ ಈ ಕಲಿಯುಗದ ಆರಂಭ ಒಂದು ವಿಸ್ಮಯವೇ ಸರಿ. ಮಹಾಭಾರತ ಪರ್ವ ಮುಗಿದ ಕೊನೆಯ ದಿನ. ರಾಜ್ಯ, ಕೋಶ, ಉಗ್ರಾಣ, ರಾಜರು, ಸಾಮಂತರು ಬಂಧು ಪರಿವಾರದವರು, ಆಸೆಗಳು, ಸ್ವಾರ್ಥಗಳು, ಲೋಭಗಳು ಎಲ್ಲವೂ ಪರ್ಯಾವಸನಗೊಂಡ ದಿನ. ಕೃಷ್ಣನೊಬ್ಬನೇ ಒಂಟಿಯಾಗಿ ಮರದ ಕೊಂಬೆಯ ಅಂಚಲ್ಲಿ ಕುಳಿತು ಕೊಳಲು ಊದುತ್ತಿದ್ದಾನೆ ಹಾಗೂ ನುಡಿಸುತ್ತಿದ್ದಾನೆ. ಸುತ್ತಮುತ್ತಲಲ್ಲಿ ಎಲ್ಲೂ ಯಾವ ಗೋವು-ಕರುಗಳೂ ಇರಲಿಲ್ಲ. ಕಿವಿಯಾಣಿಸುವವರು,ತಲೆ ದೂಗುವವರೂ ಯಾರು ಇರಲಿಲ್ಲ. ಸ್ತಬ್ಧಭೂಮಿ, ನಿಶ್ಶಬ್ಧ ಆಕಾಶ, ಎತ್ತ ಬೀಸಬೇಕೆಂದು ತಿಳಿಯದ ಗಾಳಿ. ಶ್ರೀಕೃಷ್ಣ ಆ ವೇಳೆಗಾಗಲೇ ಒಂದು ನಿರ್ಧಾರಕ್ಕೆ ಬಂದು ಬಿಟ್ಟಿದ್ದ. ಈ ಪ್ರಸ್ತುತ ದ್ವಾಪರ ಯುಗವನ್ನು ಇಲ್ಲಿಗೇ ಮೊಟಕುಗೊಳಿಸೋಣ. ಹಾಗೆಯೇ ಮುಂಬರುವ ಸಕಲ ಜೀವರಾಶಿಗಳಿಗೂ ನವೋಲ್ಲಾಸ ಹುಟ್ಟುವ ಹಾಗೆ ಮತ್ತೊಂದು ಹೊಸ ಯುಗವನ್ನು ಆರಂಭಿಸೋಣ ಎಂದು ನಿರ್ಧರಿಸಿಬಿಟ್ಟಿದ್ದ. ಆಗ ಆರಂಭವಾದದ್ದೇ ಈ ಕಲಿಯುಗ. ಯಾವುದೇ ಒಂದು ಆರಂಭವು ವಿಶೇಷವಾಗಿ ಕಾಣಿಸಬೇಕಾದರೆ ಅದಕ್ಕೆ ಒಂದು ಸುಮುಹೂರ್ತಬೇಕು. ಅದು ಈ ವಸಂತಋತುವಿನ,ಚೈತ್ರಮಾಸದ ದಿನ. ಇಲ್ಲಿಂದ ಆರಂಭವಾದ ಈ ದಿನೋತ್ಸವಕ್ಕೆ ಅಥವಾ ಯುಗವೊಂದರ ಆದಿ ಮೂಲಕ್ಕೆ ಆ ಶ್ರೀಕೃಷ್ಣ ಯುಗಾದಿ ಎಂದು ನಾಮಕರಣ ಮಾಡಿದ. ಯುಗದ ಆದಿಯಿಂದಲೂ ಜಗದ ಗಾದಿಯ ಮೇಲೆ ಕುಳಿತು ರಾರಾಜಿಸುತ್ತಾ ಇರುವ ಈ ವಿರಾಜಮಾನ ಹಬ್ಬವು ಸದಾ ಹಸಿರು.

## ಯುಗಾದಿಯ ಕಲಾಪಗಳು

ನಮ್ಮ ಹಿಂದು ಸಂಪ್ರದಾಯದಲ್ಲಿ ಯುಗಾದಿಗೆ ತನ್ನದೇ ಆದ ವಿಶೇಷವಾದ ಸ್ಥಾನಮಾನಗಳಿವೆ.ವಾಸ್ತವದಲ್ಲಿ, ಯುಗಾದಿಯು ಎಲ್ಲ ಹಬ್ಬಗಳಿಗೂ ಬೇರು. ಚಿಗುರುವ ಪ್ರತಿ ಕನಸುಗಳಿಗೂ ತೇರು. ಬೆಳಗಿನ ಜಾವ ಬ್ರಾಹ್ಮೀಮುಹೂರ್ತದಲ್ಲಿ ಅಂದರೆ ಸರಿಸುಮಾರು 4.30ರ ವೇಳೆಗೆ ಎದ್ದು ತೈಲ ಸ್ನಾನಗಳನ್ನು ಮುಗಿಸಿ, ತುಪ್ಪ ತುಂಬಿದ ಪಾತ್ರೆಯಲ್ಲಿ ನಮ್ಮ ನಮ್ಮ ಮುಖದರ್ಶನ ಮಾಡುವುದು.ಹೊಸ ಬಟ್ಟೆಗಳನ್ನು ಉಡುವುದು,ಹೆಣ್ಣು ಮಕ್ಕಳಿಂದ ಅರಿಶಿನ-ಕುಂಕುಮ- ಆರತಿಗಳ ವಿನಿಮಯ, ದೇವರಿಗೆ ಪೂಜೆ, ಅಭಿಷೇಕ,ಅಲಂಕಾರ,ನೈವೇದ್ಯ ಮುಂತಾದ ಪುರಾತನ ಪೂಜಾ ವಿಧಿವಿಧಾನಗಳ ಜೊತೆಗೆ ಅತೀ ಪ್ರಾಮುಖ್ಯವಾದ ಒಂದು ಅಂಶವೆಂದರೆ ಪಂಚಾಂಗ ಶ್ರವಣ.

ಆಯಾ ವರ್ಷದ ನಕ್ಷತ್ರಗಳ ಫಲಫಲ, ಗ್ರಹಗತಿಗಳ ಫಲಾಫಲ ಹಾಗೂ ಋತುಮಾನಗಳ ಕ್ರಮಬದ್ಧತೆಯ ವಿಶ್ಲೇಷಣೆ ಮುಂತಾದ ಧಾರ್ಮಿಕ ವಿವರಣೆಗಳನ್ನು ಮನಗಂಡು ರೈತಾಪಿ ಜನಗಳಿಂದ ನಿರಂತರ ಹಸಿರು ಕ್ರಾಂತಿಯನ್ನೇ ಹುಟ್ಟುಹಾಕುವ ಒಂದು ಪಕ್ಷಿನೋಟವೇ ಈ ಪಂಚಾಂಗ ಶ್ರವಣ. ಜೀವನವೆಂದರೆ ಏಳು-ಬೀಳು ಸಹಜ,ಏರು-ಪೇರು ಸಹಜ. ಹೀಗಿರುವಾಗ,ಮನುಷ್ಯನಾದವನು ಸದಾಕಾಲ ಸಮಚಿತ್ತದಿಂದ, ಸಂಯಮದಿಂದ,ಸಚ್ಚಾರಿತ್ರ್ಯದಿಂದ ಬಾಳುವಂತೆ ಪ್ರೇರೇಪಿಸುವುದೇ ಈ ಯುಗಾದಿಯ ಮೂಲ ಧ್ಯೇಯ ಮತ್ತು ಉದ್ದೇಶ.

ಎಲ್ಲ ಸಂತಸಗಳಿಗೂ ಆರಂಭ ಈ ಯುಗಾದಿ. ಹಾಗೆಯೇ, ಎಲ್ಲ ಸಮತ್ವಗಳಿಗೂ ಅಂದರೆ ಸಮಾನತೆಗಳಿಗೂ ಆರಂಭ ಈ ಯುಗಾದಿ.

## ಆರೋಗ್ಯದ ಬುನಾದಿ

ನಮ್ಮ ಸನಾತನ ಭಾರತೀಯ ಪರಂಪರೆಯಲ್ಲಿ ವೇದಗಳಿಗೆ ಎಷ್ಟು ಮಹತ್ವವಿದೆಯೋ, ವೈದ್ಯಕೀಯ ವಿಷಯಗಳಿಗೂ ಅಷ್ಟೇ ಮಹತ್ವವಿದೆ. ನಮ್ಮ ಶಾಸ್ತ್ರ, ಪುರಾಣಗಳಲ್ಲಿ ಅದು ಹೇಗೆ ಮಂತ್ರಗಳ ಉಲ್ಲೇಖವಿದೆಯೋ ಹಾಗೆಯೇ ಔಷಧಗಳ ಉಲ್ಲೇಖವೂ ಇದ್ದೇ ಇದೆ. ಅಂಥಾ ಪ್ರಾಕೃತಿಕ ಔಷಧಗಳಲ್ಲಿ ಅಗ್ರಸ್ಥಾನ ಪಡೆದ ಔಷಧವೆಂದರೆ ಅದು ಬೇವು, ಮೇಲ್ನೋಟಕ್ಕೆ ಕಹಿ ಮಾತ್ರ ಎನಿಸಬಲ್ಲ ಬೇವು ತನ್ನೊಳಗಡೆ ದೇಹ, ಮನಸ್ಸುಗಳಿಗೆ ಸಂಬಂಧಿಸಿದ ಅದೆಷ್ಟೋ ಕಹಿಗಳನ್ನು ಹೋಗಲಾಡಿಸಬಲ್ಲದು. ಕೇವಲ ಬೇವಿನ ಮರವನ್ನು ಸೋಕಿದ ಗಾಳಿಯನ್ನು ಸೇವಿಸಿದ ಮಾತ್ರದಿಂದಲೇ ಕನಿಷ್ಠ 37 ಬಗೆಯ ರೋಗಗಳು ವಾಸಿಯಾಗಿರುವ ಉದಾಹರಣೆಗಳಿವೆ.



ಅಂತೆಯೇ ಬೇವಿನ ಹೂಗಳಿಂದ ತಯಾರಿಸಲ್ಪಟ್ಟ ಚೂರ್ಣಗಳನ್ನು ಹಣೆಗೆ ಹಚ್ಚುವುದರಿಂದ ತಲೆನೋವಿನ ಉಪಶಮನ, ಎದೆಗೆ ಹಚ್ಚುವುದರಿಂದ ಹೃದ್ರೋಗದ ಉಪಶಮನ, ದ್ರವರೂಪದಲ್ಲಿ ಸೇವಿಸುವುದರಿಂದ ನರನಾಡಿಗಳ ನೋವಿನ ಉಪಶಮನ. ಇಂಥಾ ಅನೇಕ ಉಪಶಮನಗಳ ಮೂಲದಾತುವಾಗಿರುವ ಬೇವಿನ ಜನ್ಮ ದಿನವೇ ಈ ಯುಗಾದಿಯ ದಿನ.

ಪ್ರತೀ ಆರೋಗ್ಯವಂತರೂ ಸಹ ಯುಗಾದಿಗೆ ಋಣಪಟ್ಟಿರಲೇಬೇಕು. ಜಗತ್ತಿನಲ್ಲಿ ವಿಶ್ವ ಆರೋಗ್ಯ ದಿನ ಎಂಬ ಪದ್ಧತಿ ರೂಢಿಯಲ್ಲಿದೆ. ಆದರೆ ನನ್ನ ಪ್ರಕಾರ ಬೇವನ್ನು ಮತ್ತು ಬೇವು-ಬೆಲ್ಲವನ್ನು ಸೇವಿಸುವ ದಿನವೆಲ್ಲ ವಿಶ್ವ ಆರೋಗ್ಯ ದಿನವೇ, ಹಾಗಾಗಿ ಆರೋಗ್ಯ ಯುಗಾದಿ ಮತ್ತು ಯುಗಾದಿಯ ಆರೋಗ್ಯ ಎಲ್ಲರ ಮನೆ ಮನಗಳಲ್ಲಿ ತುಂಬಿರಲಿ.

### ಬೇವು -ಬೆಲ್ಲದ ಮಹತ್ವ

ಬೇವು-ಬೆಲ್ಲದ ಹಬ್ಬ ನಿಜವಾದ ಅರ್ಥದಲ್ಲಿ ಪ್ರತೀ ಮನುಷ್ಯ ಮನುಷ್ಯನ ನಡುವಿನ ಮನಸ್ಸುಗಳ ಜೀರ್ಣೋದ್ಧಾರದ ಹಬ್ಬ. ಈ ಜೀರ್ಣೋದ್ಧಾರದ ವಿಷಯದಲ್ಲಿ ಒಂದು ಸೂಕ್ಷ್ಮವಿದೆ. ಮೊದಲನೆಯ ಸೂಕ್ಷ್ಮ, ಜೀರ್ಣ,ಎರಡನೆಯ ಸೂಕ್ಷ್ಮ, ಉದ್ಧಾರ ಮೇಲ್ನೋಟಕ್ಕೆ ಜೀರ್ಣ ಎಂಬುದು ಸರ್ವಸಾಧಾರಣ ಪದವಾದರೂ ಅದು ಯಾವ ರೀತಿಯ ಜೀರ್ಣ,ಯಾವ ಉದ್ಧಾರಕ್ಕಾಗಿ ಜೀರ್ಣ ಎಂಬುದು ಬಹಳ ಮುಖ್ಯ. ಇಂಥಾ ಸಂದರ್ಭದಲ್ಲೇ ಬೇವು-ಬೆಲ್ಲದ ಚಿಕ್ಕ ಚರಿತ್ರೆಯೂ ಇತಿಹಾಸವಾಗುವುದು.

ದೈಹಿಕ ಆರೋಗ್ಯ,ಮಾನಸಿಕ ಆರೋಗ್ಯ, ಬೌದ್ಧಿಕ ಆರೋಗ್ಯ. ಈ ಮೂರರ ನಿಟ್ಟಿನಲ್ಲೂ ನಾವು ಸ್ವೀಕರಿಸಲೇಬೇಕಾದ ಒಂದು ಆಹಾರ ಪದ್ಧತಿಯನ್ನು ನಮ್ಮ ಸಂವತ್ಸರದ ಮೊದಲ ಮೈಲಿಗಲ್ಲಾದ ಯುಗಾದಿಯು ತಂದುಕೊಟ್ಟಿದೆ. ದುಃಖವನ್ನು ಮರೆಯಲಿಕ್ಕೆ ಬೇವು. ಸಂತೋಷವನ್ನು ನೆನೆಯಲಿಕ್ಕೆ ಬೆಲ್ಲ, ಕೋಪವನ್ನು ಕರಗಿಸಲಿಕ್ಕೆ ಹಸಿಮೆಣಸು,ಭಯದ ನಿವಾರಣೆಗೆ ಉಪ್ಪು, ಆಶ್ಚರ್ಯವನ್ನು ಕೊಡಲಿಕ್ಕೆ ಹುಣಸೆ,ಬಣ್ಣವನ್ನು ಬೆಳೆಸಲಿಕ್ಕೆ ಮಾವು! ಈ ಆರೂ ವಸ್ತುಗಳನ್ನು ಸಮವಾಗಿ ಬೆರೆಸಿ ಪೂರ್ವಾಭಿಮುಖವಾಗಿ ನಿಂತು ಇಷ್ಟ ದೇವರನ್ನು ನೆನೆದು ಸ್ವೀಕರಿಸಿದರೆ ಸಾಕು, 'ಅಂತರಂಗ ಅನಂತರಂಗ' ಎರಡೂ ಶುದ್ಧಿಯಾಗಿ ಮನುಷ್ಯ ಮನುಷ್ಯನಾಗೇ ಬಾಳುವ ಒಂದು ವರವನ್ನು ನಮ್ಮೀ ಯುಗಾದಿಯು ವರವಾಗಿ ಕೊಟ್ಟಿದೆ. ಮೂಲತಃ ಬೇವನ್ನು ತಿಂದು ನೋವನ್ನು ಮರೆಯುವ, ಬೆಲ್ಲವನ್ನು ತಿಂದು ಎಲ್ಲವನ್ನೂ ಪಡೆಯುವ ಒಂದು ನಿತ್ಯ ಮನೆಮದ್ದು ಎಲ್ಲರೊಟ್ಟಿಗಿರಲಿ. ಆಗ ಪ್ರತಿದಿನವೂ ಯುಗಾದಿಯೇ ಆಗುವುದರಲ್ಲಿ ಮೂರನೇ ಮಾತಿಲ್ಲ.

### ಬದುಕಿನ ಸುಸ್ವರ ಅನುಕರಣಿಸಲಿ

ದೃಷ್ಟಿ ಇದ್ದ ಹಾಗೆ ಎಂಬುದು ಜನಜನಿತ. ಅಂಥಾ ತನ್ನದೇ ಆದ ದೃಷ್ಟಿಕೋನದಿಂದ ನಾವು ಗಮನಿಸಿದ್ದಾದರೆ ಈ ಪ್ರಪಂಚದ ಸರ್ವ ಸಂಗೀತ ಸೃಷ್ಟಿಯೂ ಪ್ರಕೃತಿಯಿಂದಲೇ ಉಂಟಾಗಿದೆ. ಅಂಥಾ ಪ್ರಕೃತಿಯು ತನ್ನ ಎದೆಯಲ್ಲಿ ನಾದಗಳ ಚಿಗುರನ್ನು ಚಿಗಿತುಗೊಳಿಸಿಕೊಂಡ ದಿನವೇ ಈ ಯುಗಾದಿ. ಷಡ್ಜ ಎಂಬುದು 'ಸ' ಕಾರವಾಗಿದ್ದು ಚಿಗುರು ಮಾವಿನೆಲೆಯ ಅಂಚಿನಲ್ಲಿ ಗೋಚರವಾಗುವುದು ರಿಷಭ/ ಎಂಬ 'ರಿ' ಕಾರವು ಪೀತವರ್ಣದ ಹೂವುಗಳಲ್ಲಿ ಮಾಡಿಲು ಹಾಸಿದ್ದು/ಗಾಂಧಾರ ಎಂಬ 'ಗ' ಕಾರವು ವಸಂತ ಹುಣ್ಣಿಮೆಯ ಕಡಲ ಭೋರ್ಗರೆತದಲ್ಲಿ ಕೋಗಿಲೆಯ ಮಾರ್ದನಿಯಲ್ಲಿ ಪ್ರತಿಧ್ವನಿಸಿರುವುದು ಪಂಚಮ ಎಂಬ 'ಪ' ಕಾರವು ಹಸಿರು ಹೂಬನಗಳ ಪ್ರಕಾರದಲ್ಲಿ ಪಲ್ಲವಿಸಿದ್ದು/ದೈವತ ಎಂಬ 'ದ' ಕಾರವು ಧಾರ್ಮಿಕ ಮಂತ್ರೋಪಚ್ಚಾರಗಳ ದಾರಿಯಲ್ಲಿ ಎಡತಾಕಿದ್ದು/ನಿಶಾದ ಎಂಬ'ನಿ' ಕಾರವು ನಿರ್ಮಲ ನಿಂಬಕದಳದ ರಸ್ಸಸ್ವಾದವಾಗಿದ್ದು/ಇಡಿ ಚೈತ್ರ ಮಾಸವೇ ಸರಿಗಮಪದನಿಗಳ ಪರ್ವ ಕಾಲವಾಗಿರುವುದರಲ್ಲಿ ಯಾವ ನಾಲ್ಕನೆಯ ಮಾತೂ ಇಲ್ಲ. ಸರಳವಾಗಿ ಯೋಚಿಸೋಣ. ಇಡೀ ಸಂಗೀತದ ಚರಿತಾಪುಟವೇ ಈ ವಸಂತಮಾಸದಲ್ಲಿದೆ. ಈ ವಸಂತ ಗಾಯನದ ಜೀವಸ್ವರದ ಹೆಸರೇ ಯುಗಾದಿ /ಪ್ರತಿಯೊಬ್ಬರ ಬದುಕಿನಲ್ಲೂ ನಿತ್ಯ ವಸಂತದ, ಪ್ರೇಮ ಕೋಗಿಲೆಗಳು ತಮ್ಮ "ಕುಹೂ ಕುಹೂ"ಗಳಿಂದ ಹೃದಯಗಳನ್ನು ನಾಡಿನೆಲ್ಲೆಡೆ ಹಸಿರಾಗಿಸಲಿ.

### ಲವಲವಿಕೆ ಈ ಜಗತೆ

ಮಾನವ ಜನ್ಮ ದೊಡ್ಡದ್ದು. ಅಂತೆಯೇ, ಮಾನವ ಜನ್ಮಕ್ಕೆ ಕಾರಣವಾಗಿರುವ ಪ್ರಕೃತಿಯ ನಿಯಮಗಳೂ ದೊಡ್ಡದು. ನಮ್ಮ ಈ ಪ್ರಕೃತಿಯಲ್ಲಿ ಅದು ಹೇಗೆ ಸೂರ್ಯ,ಚಂದ್ರ,ನಕ್ಷತ್ರ ಗ್ರಹಗಳು,ಗಾಳಿ,ನೀರು,ಬೆಳಕು ಎಂಬುವೆಲ್ಲ ತುಂಬಿಕೊಂಡಿ

ವೆಯೋ ಹಾಗೆಯೇ ಮನುಷ್ಯ ಜೀವನದಲ್ಲೂ ಕಾಲ,ವೇಳೆಗಳಿಗೆ,ಸಮಯ, ದಿನ, ತಿಂಗಳು, ವಾರಗಳು, ವರ್ಷ ಮುಂತಾದ ನಿಗದಿತ ಕಾಲಮಾನಗಳಿವೆ. ಇಂಥ ಎಲ್ಲ ರೀತಿಯ ಕಾಲಮಾನಗಳಲ್ಲಿ ಅತಿಶ್ರೇಷ್ಠವಾದ ಕಾಲಮಾನವೆಂದರೆ ಸಂವತ್ಸರ ಕೇವಲ ಒಂದು ಸಂವತ್ಸರದಲ್ಲೇ ಇಡೀ ಪ್ರಕೃತಿಯ ಮತ್ತು ಕಾಲದ ಅಳತೆಗೋಲು ಅಡಗಿದೆ. ಅಂಥಾ ಸಂವತ್ಸರದ ಆರಂಭದ ದಿನವೇ ಯುಗಾದಿ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಇಲ್ಲಿ ಮರೆಯಬಾರದ ಒಂದು ದೈವ ಸೂಕ್ಷ್ಮ ಏನೆಂದರೆ ಆಯಾ ಸಂವತ್ಸರದ ಮೊಟ್ಟಮೊದಲ ಚೈತ್ರ ಮಾಸದ ಮೊಟ್ಟಮೊದಲ ಪೌರ್ಣಮಿಯ ನಂತರ ಬರುವ ಪಾಡ್ಯಮಿಯ ದಿನದಂದು ಸೂರ್ಯೋದಯದ ಕಾಲದಲ್ಲಿ ಅರಳೀಮರ, ತೆಂಗಿನಮರ ಮತ್ತು ಬೇವಿನ ಮರದ ಬೇರುಗಳಿಗೆ ಒಂದು ಒಟ್ಟಲು ಹಸುವಿನ ಹಾಲು ಬಟ್ಟಲು ಬಾವಿಯ ನೀರು ಮತ್ತು ಒಂದು ಬಟ್ಟಲು ಜೇನುತುಪ್ಪಗಳನ್ನು ಅರ್ಪಿಸಿ ನಮ್ಮ ಪ್ರಾರ್ಥನೆಗಳನ್ನು ಸಲ್ಲಿಸಿದ್ದಾದರೆ ನೂರಕ್ಕೆ ನೂರರಷ್ಟು ಕೋರಿಕೆಗಳನ್ನು ಈಡೇರುವುದರಲ್ಲಿ ಯಾವ ಸಂಶಯವೂ ಇಲ್ಲ.

ಇಂಥ ಒಂದು ಜ್ಯೋತಿಷಿ ಸೂಕ್ಷ್ಮವನ್ನು ಸಹ ಯುಗಾದಿಯು ತಂದು ಕೊಡುತ್ತದೆ ಎಂಬುದು ವಿಶೇಷ. ಈ ಜಗತ್ತಿನ ಮೊಟ್ಟಮೊದಲ ಪಂಚಾಂಗ ಕರ್ತೃವಾದ ಆ ಬ್ರಹ್ಮ ದೇವನೂ ಈ ಮೇಲಿನ ಪ್ರಾರ್ಥನೆಯನ್ನು ಮಾಡಿದ್ದಾನೆ ಎಂಬುದು ಸತ್ಯ. ಇಂಥ ಸತ್ಯವನ್ನು ಪ್ರತಿಯೊಬ್ಬರೂ ರೂಢಿಸಿಕೊಂಡಿದ್ದಾರೆ. ಸಕಲ ಇಷ್ಟಾರ್ಥಗಳು ಪುಟ ತಿರುಗಿಸುವುದರೊಳಗೆ ನೆರವೇರುವುದು.

### ಹೊಸತಾಗುವುದು ಎಂದರೆ

ಈ ಭೂಮಂಡಲದಲ್ಲಿರುವ ಯಾವುದೇ ಪ್ರಾಣಿ-ಪಕ್ಷಿಗಳಲ್ಲೂ ಯಾವ ವಿಧವಾದ ಜಾತಿ ಭೇದಗಳಿಲ್ಲ. ವರ್ಣಭೇದಗಳಿಲ್ಲ, ಕರ್ಣಭೇದಗಳಿಲ್ಲ. ಹೊಟ್ಟೆಪಾಡುಗಳ ಹೊರತಾಗಿ ಬೇರೆ ಯಾವ ಕಟ್ಟು ಪಾಡುಗಳ ಚಿಂತೆ ಇಲ್ಲ.

ಆದರೆ ಎಲ್ಲ ಭೇದ-ಪ್ರಭೇದಗಳೂ ಈ ಮನುಷ್ಯನೊಬ್ಬನಿಗೆ ಮಾತ್ರವೇ ಅಂಟಿರುವ ಜಾಡ್ಯ. ಹಾಗಾಗಿ ಸಾಮಾಜಿಕ, ಬೌದ್ಧಿಕ, ಮಾನ ಸಿಕ ಅಸಮಾನತೆ, ಆರ್ಥಿಕ ಅಸಮಾನತೆ,ಹಾರ್ದಿಕ ಅಸಮಾ ನತೆಗಳೆಲ್ಲ ಹೆಚ್ಚಾಗಿವೆ. ನಿಜವಾದ ಅರ್ಥದಲ್ಲಿ ನಮ್ಮ ಈ ಭರತ ಖಂಡದಲ್ಲೇ ಎಲ್ಲೇ ಹುಡುಕಲಿ.ಅಸಹಿಷ್ಣುತೆ ಎಂಬುದು ಇಲ್ಲವೇ ಇಲ್ಲ, ಆತಂಕಗಳು ಎಂಬುದು ಇಲ್ಲವೇ ಇಲ್ಲ. ಎಲ್ಲ ಕೇವಲ ಭ್ರಮೆ, ಎಲ್ಲಿ ಮನಸ್ಸುಗಳು ಸ್ವಾರ್ಥರಹಿತವಾಗಿ, ಕೆರೆಯ ನೀರನ್ನು ಕೆರೆಗೆ ಚೆಲ್ಲುತ್ತಾ ಬಾಳುವುವೋ, ಅಂಥಾ ಮನಸ್ಸುಗಳು ನೊಂದ ಉದಾಹರಣೆ ಇಲ್ಲವೆ ಇಲ್ಲ. ಅತಿಯಾದ ದಾಹ ಅಜೀರ್ಣಕ್ಕೆ ಹಾದಿ, ಅತಿಯಾದ ಮೋಹ, ಅಧರ್ಮಕ್ಕೆ ಹಾದಿ, ಸಮಾನತೆ ಎಂಬುದೇ ಸಕಲ ಜೀವಿಗಳಿಗೂ ಆ ದೇವರು ಕಲಿಸಿ ಕೊಟ್ಟ ಮಂತ್ರ. ಆದರೆ,ಅದೊಂದನ್ನು ಮರೆತು ಮನುಷ್ಯ ಅಹಂಕಾರದಿಂದ ಹೂಡುತ್ತಲೇ ಇದ್ದಾನೆ ತಂತ್ರ.

ಎಲ್ಲರೂ ಒಟ್ಟಿಗೆ ಬಾಳೋಣ. ಪ್ರೀತಿಯಿಂದ ಹೊಂದಿಕೊಳ್ಳೋಣ. ದಾನದಿಂದ ದೊಡ್ಡವರಾಗೋಣ. ದೊಡ್ಡವರ ಎದುರು ಸದಾ ಚಿಕ್ಕವರಾಗೋಣ. ಒಳ್ಳೆಯದನ್ನೇ ಕಲಿಯೋಣ, ಕಲಿಸೋಣ. ತಿಳಿಯೋಣ, ತಿಳಿಸೋಣ. ಬದುಕಿನ ಪ್ರತೀ ಕಷ್ಟ ಸುಖಗಳನ್ನೂ, ಸಿಹಿ-ಕಹಿಗಳನ್ನೂ ಸಮನಾಗಿ ಸ್ವೀಕರಿಸೋಣ. ಒಳ್ಳೆಯದನ್ನೇ ನೋಡೋಣ. ಒಳ್ಳೆಯದನ್ನೇ ಮಾಡೋಣ. ಒಳ್ಳೆಯದನ್ನೇ ಹಾಡೋಣ. ಒಳ್ಳೆಯವರನ್ನೇ ಸೇರೋಣ. ಸಮ-ಸುಮವಾಗಿ ಬದುಕಲಿಕ್ಕೆ ಸಾಕ್ಷಿಯಾದ ಬೇವು-ಬೆಲ್ಲವನ್ನು ದಿನವೂ ಯುಗಾದಿಯ ನೆಪದಲ್ಲಿ ಸ್ವೀಕರಿಸಿ ಒಳ್ಳೆಯವರಾಗಿ ಬಾಳೋಣ.

## ರಾಮಾ! ಶ್ರೀರಾಮಾ!!

ಸಕಲ ಸದ್ಗುಣಗಳಿಂದ ಕೂಡಿದ,ತನ್ನ ಶೀಲಸಂಪತ್ತಿನಿಂದ ಪ್ರಪಂಚಕ್ಕೆ ಆದರ್ಶ ಪುರುಷನಾಗಿರುವ ಶ್ರೀರಾಮಚಂದ್ರಮೂರ್ತಿ,ಸಕಲಲೋಕ ಆರಾಧ್ಯನು. ನಮ್ಮ ದೇಶದ ಅನೇಕ ಪ್ರದೇಶಗಳವರೆಗೆ ಆರಾಧ್ಯನಾದ ಶ್ರೀರಾಮ ಚಂದ್ರಮೂರ್ತಿ ಪ್ರತಿಯೊಂದು ಗ್ರಾಮದಲ್ಲೂ ದರ್ಶನ ನೀಡುತ್ತಿರುವುದು ಭಾರತೀಯರಿಗೆ ಶ್ರೀರಾಮನ ಮೇಲಿರುವ ಭಕ್ತಿಗೆ ನಿದರ್ಶನವಾಗಿದೆ.

ಇದಲ್ಲದೆ ಶ್ರೀರಾಮನ ರಾಜ್ಯ ಅಯೋಧ್ಯೆಯಾದರೂ ಸಹ ಆತನು ತೆಲುಗು ಭೂಮಿಯ ಅನೇಕ ಪ್ರಾಂತ್ಯಗಳನ್ನು ತನ್ನ ಪಾದದೂಳಿನಿಂದ ಪವಿತ್ರನಾಗಿಸಿರುವನು ಶ್ರೀರಾಮನು ವನವಾಸ ಸಮಯದಲ್ಲಿ ಸೀತಾನ್ವೇಷಣೆ ಸಮಯದಲ್ಲಿ ರಾವಣಾಸುರನನ್ನು ಸಂಹರಿಸಿ ಅಯೋಧ್ಯೆಗೆ ಹಿಂತಿರುಗಿದ ಸಮಯದಲ್ಲಿ ಹೂಡಿದ ಸಂದ ರ್ಶಿಸಿದ ಅನೇಕ ಪುಣ್ಯಕ್ಷೇತ್ರಗಳು ತೆಲುಗು ನಾಡಿನಲ್ಲಿದೆ. ಇಂತಹ ಪುಣ್ಯ ಕ್ಷೇತ್ರಗಳಲ್ಲಿ ಪ್ರಮುಖವಾದವು ತಿರುಮಲೆ ತಿರುಪತಿ ದೇವಾಲಯಗಳ ಆಡಳಿತಕ್ಕೊಳಪಟ್ಟಿವೆ.

# ರಾಮಾಯಣದ ಲೋಕದರ್ಶನ

- ಅನಿಲ್ ಎಸ್.ಪಿ. ರೈಕರ್
96320 81958

ಒಂದು ಕಾವ್ಯ ಆ ಕಾಲದ ಕೂಸು. ಆ ಸಮಾಜದ ವಾತಾವರಣದ ಸೃಷ್ಟಿ ಆಗಿರುತ್ತದೆ. ಇಲ್ಲವಾದರೆ ಅದು ಬರಲಿಕ್ಕಿಲ್ಲ. ಇದರಿಂದ ಕಾವ್ಯ ಒಂದು ಪರಂಪರೆಯ ಸೃಷ್ಟಿ ಎಂದು ಹೇಳಬಹುದು. ಆ ಕಾವ್ಯದಲ್ಲಿ ಅಂದಿನ ಕಾಲದ ವಿಚಾರಗಳಿವೆ. ಸರ್ವಕಾಲಿಕವಾದವು ಕೂಡ ಇವೆ. ಇದನ್ನು ತಿಳಿದಾಗ ಕಾವ್ಯದ ಹಿಂದಿನ ಲೋಕದರ್ಶನ ವಿದಿತವಾಗುವುದು. ರಾಮಾಯಣ ಜಗತ್ತನ್ನು ಹೇಗೆ ಚಿತ್ರಿಸಿದೆ ಮತ್ತು ಜಗತ್ತು ರಾಮಾಯಣವನ್ನು ಹೇಗೆ ನೋಡಿದೆ ಎಂಬ ಎರಡೂ ವಿಚಾರ ಲೋಕ ದರ್ಶನವಾಗುತ್ತದೆ. ಆರಂಭದಂತೆ ರಾಮಾಯಣ ಶುರುವಾಗುವುದು ತಪಸ್ಸು ಸ್ವಾಧ್ಯಾಯ ನಿರತವಾದ ನಾರದನನ್ನು ವಾಲ್ಮೀಕಿಗಳು ಕೇಳುವವರು ನಾನು ಒಂದು ಕಾವ್ಯ ಬರೆಯಬೇಕು ಹಾಗೇ ಅರ್ಹರು ಯಾರಿದ್ದಾರೆ? ಎಲ್ಲ ಕಾರ್ಯದಲ್ಲಿ ಅರ್ಹರಿಗೆ,ಒಳ್ಳೆಯರಿಗೆ ಹುಡುಕಾಡುವ ಸ್ಥಿತಿ ಇದೆ. ಸಕಲ ಗುಣಗಳಿಂದ ರಾಮನೇ ಸೂಕ್ತ. ರಾಮಚಂದ್ರ ಪೂರ್ಣ ಚಂದ್ರನಾಗಿ ಬರುವನು.

ಮಹಾಭಾರತ ಜಯವಾದರೆ ರಾಮಾಯಣ ಆಯನ ಒಂದು ನಿರಂತರ ಪ್ರಯಾಣ ಇದು. ಪೂರ್ಣತೆಯ ಕಡೆಗಿನ ಪ್ರಯಾಣವು ಆ ದೆಸೆಯ ಪ್ರಯತ್ನಕ್ಕೆ ಬೆಲೆಯಿದೆ. ದೇವಲೋಕದಿಂದ ಮನುಷ್ಯ ಲೋಕಕ್ಕೆ ರಾಮನು ಇಳಿದು ಬಂದ ಎಂಬುದು ಒಂದು ದೃಷ್ಟಿಕೋನ. ಇದನ್ನು ಅವತರಣ ಎನ್ನುವರು. ಮನುಷ್ಯನು ತಾನೇ ಸಾಧನೆ ಆದರ್ಶಗಳಿಂದ ತ್ಯಾಗದಿಂದಾಗಿ ಬೆಳೆದು ಗುರು-ಹಿರಿಯರ ಆಶೀರ್ವಾದದಿಂದ ದೈವತ್ವಕ್ಕೆ ಏರಿದ ಎಂಬುದು ಇನ್ನೊಂದು ದೃಷ್ಟಿಕೋನವಿದೆ. ಹೀಗೆ ರಾಮ ಹನ್ನೊಂದು ಸಹಸ್ರ ವರ್ಷ ರಾಜ್ಯವಾಳಿದನು ಎನ್ನುವುದಿದೆ. ಮನುಷ್ಯರು ದೇವರಾಗಬಹುದು.

## ಒಂಟಿಮಿಟ್ಟ ಶ್ರೀಕೋದಂಡರಾಮ ಆಲಯ



ತ್ರೇತಾಯುಗದಲ್ಲಿ ದಂಡಕಾರಣ್ಯವೆಂದು ಪ್ರಸಿದ್ಧಿ ಪಡೆದ ಈ ಪ್ರದೇಶದಲ್ಲಿ ಅನೇಕ ಮಹರ್ಷಿಗಳು ತಪ್ಪಸ್ಸು ಕೈಗೊಂಡಿದ್ದರು. ಇವರು ಮಾಡುತ್ತಿದ್ದ ಯಜ್ಞಯಾಗಗಳಿಗೆ ರಾಕ್ಷಸರು ಅಡ್ಡಿ ಉಂಟು ಮಾಡುತ್ತಿದ್ದರು. ಇವರನ್ನು ನಿಗ್ರಹಿಸಲು ಋಷಿಗಳು ಶ್ರೀರಾಮನನ್ನು ಪ್ರಾರ್ಥಿಸಿದಾಗ ಶ್ರೀರಾಮನು ಇಲ್ಲಿಗೆ ಬಂದು ಋಷಿಮುನಿಗಳಿಗೆ ನೆರವಾದುದ್ದರಿಂದ ಶ್ರೀರಾಮನಿಗೆ ಕೋದಂಡರಾಮನೆಂದು ಹೆಸರಾಯಿತಂತೆ ರಾಮನು ಋಷಿಗಳ ಕೋರಿಕೆಯಂತೆ ತನ್ನ ಪ್ರತಿಮೆಗಳನ್ನು ನೀಡಿದನೆಂದು, ಆ ಪ್ರತಿಮೆಗಳನ್ನು ಪೂಜಿಸುತ್ತ ಋಷಿಮುನಿಗಳು ಯಜ್ಞಯಾಗಾದಿಗಳನ್ನು ನಿರ್ವಿಘ್ನವಾಗಿ ನೆಡೆಸುತ್ತಿದ್ದರೆಂದು ಹೇಳಲಾಗುತ್ತಿದೆ.

ಜಾಂಬವಂತನು ಇಲ್ಲಿಗೆ ಬಂದು ವಿಶ್ರಮಿಸುತ್ತಿದ್ದಾಗ ರಾತ್ರಿ ಸ್ವಪ್ನದಲ್ಲಿ ಶ್ರೀರಾಮನು ಕಾಣಿಸಿಕೊಂಡು ನಾನು ಇಲ್ಲಿ ವಿಗ್ರಹ ರೂಪದಲ್ಲಿದ್ದೇನೆಂದು ಹೇಳಿ ತನ್ನ ವಿಗ್ರಹಗಳನ್ನು ಇಲ್ಲಿ ಪ್ರತಿಷ್ಠಾಪಿಸಿಬೇಕೆಂದು ಸೂಚಿಸಿದನಂತೆ. ಅದರಂತೆ ಜಾಂಬವಂತನು ಮರುದಿನ ಶ್ರೀರಾಮನ ವಿಗ್ರಹವನ್ನು ಪ್ರತಿಷ್ಠಾಪಿಸಿದನಂತೆ ಶಿಲ್ಪಕಲಾ ನೈಪುಣ್ಯದಿಂದ ಕೂಡಿದ ಈ ದೇವಾಲಯದ ಗರ್ಭಗೃಹದಲ್ಲಿ ಏಕಶಿಲೆಯಲ್ಲಿ ಶ್ರೀಸೀತಾರಾಮ ಲಕ್ಷ್ಮಣ ಮೂರ್ತಿಗಳನ್ನು ಕೆತ್ತಲಾಗಿದೆ. ಆದ್ದರಿಂದ ಈ ಕ್ಷೇತ್ರಕ್ಕೆ ಏಕಶಿಲಾನಗರವೆಂದು ಹೆಸರು ಬಂದಿದೆ. ಕಡಪದಿಂದ 25 ಕಿ.ಮೀ. ತಿರುಪತಿಯಿಂದ 120 ಕಿ.ಮೀ. ದೂರದ ಲ್ಲಿರುವ ಕಡಪ-ಚೆನ್ನೈ ರಾಷ್ಟ್ರೀಯ ಹೆದ್ದಾರಿಯಲ್ಲಿದೆ. ಒಂಟಿಮಿಟ್ಟ ಪೋತನಾಮಾತ್ಯನು ಭಾಗವತವನ್ನು ಈ ಸ್ಥಳದಲ್ಲಿ ರಚಿಸಿದನೆಂದು ಪ್ರಖ್ಯಾತವಾಗಿದೆ. ಒಂಟಿಮಿಟ್ಟ ಕೋದಂಡ ರಾಮನನ್ನು ದರ್ಶಿಸುವುದರಿಂದ ಭಕ್ತರಿಗೆ ಸ್ವಾಮಿಯ ಕರುಣೆ ಕಟಾಕ್ಷೆಗಳು ಲಭಿಸುತ್ತದೆ.

ದೇವರು ಮನುಷ್ಯರಾಗಬಹುದು. ಇವು ಭಾರತೀಯರ ಎರಡು ಉದಾರ ವಾದ ದೃಷ್ಟಿಗಳು.

ನಾರದನಿಂದ ರಾಮನ ಕತೆ ಕೇಳಿ ಉತ್ತರ ಪಡೆದ ವಾಲ್ಮೀಕಿಗೆ ಕಾವ್ಯ ಪ್ರತಿಭೆ ಒದಗಿ ಬರಲು ಒಟ್ಟಿಗೆ ಇದ್ದ ಎರಡು ಹಕ್ಕಿಗಳಲ್ಲಿ ಒಂದು ಹಕ್ಕಿ ಬೇಡನ ಬಾಣದಿಂದ ಕೆಳಗೆ ಬಿದ್ದು ಅಸುನೀಗಬೇಕಾಯಿತು. ಉಳಿದ ಇನ್ನೊಂದು ಹಕ್ಕಿ ಸತ್ತ ಹಕ್ಕಿಗಾಗಿ ವಿಲಾಪಿಸುವಾಗ, ವಾಲ್ಮೀಕಿಗೆ ಒಳಗೆ ಒಂದು ಉಪೋದ್ಗವಾ ಗುತ್ತದೆ. ರಾಮಾಯಣ ಕರುಣರಸ ಪ್ರಧಾನವಾಗಲು ಇದು ಕಾರಣ. ವಾಲ್ಮೀಕಿ ಒಂದು ವಿಶೇಷ ಸಂದರ್ಭದಲ್ಲಿ ಅಳಲು ಕೇಳಿದ್ದರಿಂದ ಅದು ಅವ ನಿಗೆ ಗೊತ್ತಿಲ್ಲದಂತೆ ಮಾತನಾಡಿಸಿತು. ಹಾಗಾಗಿ ರಾಮಾಯಣ ಸುಖದ ಕಥೆ ಯಲ್ಲ, ಆತಂಕದ ಕಥೆ. ಪಕ್ಷಿ ಶೋಕ ವಾಲ್ಮೀಕಿಗೆ ರಾಮಾಯಣ ನಿರ್ಮಾಣಕ್ಕೆ ಕಾರಣವಾದಂತೆ. ರಾಮರಾಜ್ಯ ಎನ್ನುವುದು ನಾವು ಮುಟ್ಟಬೇಕಾದ ಆದರ್ಶ ವನ್ನು ಹೇಳುತ್ತದೆ. ರಾಮನ ಏಕಮಾತು, ಏಕಸತಿ, ಸತ್ಯವ್ರತಗಳೇ ಆದರ್ಶಗಳು ಹಂಸ ತೂಲಿ ಕಾಲದಲ್ಲಿರುವ ಸುಕುಮಾರ ರಾಜಕುಮಾರನು ಹದಿನಾಲ್ಕು ವರುಷ ಕಾಡಿನಲ್ಲಿರುವುದೆಂದರೆ ಆ ಕಷ್ಟಗಳನ್ನು ನೆನೆಯಬೇಕು. ಸುಖ ದುಃಖ ಗಳ ಗ್ರಹಿಕೆಯನ್ನು ಕುರಿತು ರಾಮಾಯಣ ಹೇಳುತ್ತದೆ.

ದೈವ ಕಾಣದ ಕೈಗಳು ನೀಡಿದ ಕಷ್ಟಗಳು. ಇಲ್ಲಿ ವನವಾಸ, ಸೀತಾಪಹರಣ ಕಷ್ಟ ಇವುಗಳನ್ನು ದೈವವು ತನಗೆ ನೀಡಿದೆ ಎಂದು ರಾಮನೇ ಹೇಳುವನು. ಆದರೆ ಅದಕ್ಕೆಲ್ಲ ತಾನು ಮನುಷ್ಯನಾಗಿ ಇವುಗಳನ್ನು ಎದುರಿಸಿದ ದೇವರಿಗಾಗಿ ಅಲ್ಲ ಎಂದು ಹೇಳುವುದಿದೆ ರಾಮಾಯಣದಲ್ಲಿ ಒಂದೆಡೆಗೆ ಸಿಕ್ಕಾಪಟ್ಟೆ ಪವಾಡ ಸಂಗತಿಗಳಿವೆ. ಪುಷ್ಪಕವಿಮಾನ, ವಾನರರು ಮಾತನಾಡುವುದು. ಹನುಮಂತನ ಸಾಗರಲಂಘನ, ಮನುಷ್ಯ ರಾಕ್ಷಸರ ಹೋರಾಟ ಹೀಗೆ ಕೆಲವು ಅವಾಸ್ತ ಅನಿಸುವ ವಿಚಾರಗಳಿವೆ. ಅಲ್ಲಿ ವ್ಯಕ್ತಿ ಪ್ರೇಮ ಕುಟುಂಬ ಪ್ರೇಮ ವಿಶ್ವ ಪ್ರೇಮಗಳಿವೆ. ಪವಿತ್ರವಾದ ಪ್ರೇಮಕ್ಕೆ ದೊಡ್ಡ ವ್ಯಾಖ್ಯಾನವಾಗಿದೆ. ರಾಮಾಯಣ ಅದನ್ನು ಹಾಗೆ ನೋಡಿದರೆ ಅರ್ಥ ಅಧಿಕವಾಗುವುದು.

### ಭಾರತೀಯ ಬದುಕಿನ ಧರ್ಮಪುರುಷ

ರಾಮಾಯಣವೆಂದರೆ ಶ್ರೀರಾಮನು ರಚಿಸಿದ ಹಾದಿ. ಅದು ಭಾರತೀ ಯರು ತಮ್ಮ ಆದರ್ಶವಾಗಿ ಆಯ್ದುಕೊಂಡ ಅಜರಾಮರ ಜೀವನ ದಾರಿಯೂ ಹೌದು.ಚತುರ್ಮುಖ ಬ್ರಹ್ಮನಿಂದ ಮುನಿ ವಾಲ್ಮೀಕಿಗೆ ದೊರೆತ ಆಸ್ವಾಸನೆಯಿದು. ಯುಗ-ಯುಗಗಳ ಕಾಲ ನಿಲ್ಲುವಂಥದ್ದು ಎಂಬುದನ್ನು ಬ್ರಹ್ಮದೇವನ ಮಾತಿನ ಇಂಗಿತ. ದಾಳಿಕೋರರ ಮೂಲಕ ಬಂದ ಭಾಷೆ ಯಲ್ಲಿಯೂ ರಾಮಾಯಣ ರಚಿತವಾಗಿದೆಯೆಂದರೆ ರಾಮಚರಿತೆಯ ಆಕ ರ್ಷಣೆ ಎಂಥದಿರಬಹುದೆಂದು ಊಹಿಸಬಹುದಾಗಿದೆ. ರಾಮನೆಂಬ ತೇಜಸ್ಸು ಈ ನೆಲದಲ್ಲಿ ಪ್ರಭಾವಿಸಿದ್ದು ಬರಿಯ ಧಾರ್ಮಿಕ ಆಚರಣೆಗಳನ್ನು ಮಾತ್ರವಲ್ಲ, ಆತನು ನಡೆದ ಹಾದಿಯ ಕಥೆಯ ಭಾರತೀಯ ಜೀವನದಲ್ಲಿ ಮೌಲ್ಯಗಳನ್ನು ತುಂಬಿದೆ. ಇದು ಭಾರತೀಯ ಶ್ರದ್ಧಾ, ಪ್ರಜ್ಞಾ ಮತ್ತು ಕ್ರಿಯಾ ಶಕ್ತಿಗಳ ಪುನಃರುತ್ಥಾನ. ಇವೆಲ್ಲವನ್ನೂ ಅವಲಂಭನವಾಗಿ ನಿಂತವ ಮಾತ್ರ ವಿಗ್ರಹವಾನ್-ಧರ್ಮರೂಪೀ ಶ್ರೀರಾಮ ರಾಮ ಜಪ ಕೋಟಿ ರಾಮ ಲೇಖ ಪಾರಾಯಣ. ಹೀಗೆ ನಾನಾ ಆಚರಣೆಗಳ ಮೂಲಕ ರಾಮನೆಂಬುದು ಭಾರತೀಯ ಬದುಕಿನಲ್ಲಿ ಸಹಸ್ರಮಾನಗಳಿಂದಲೂ ಉಸಿರಾಡುತ್ತಿರುವ ಮೌಲ್ಯಮೂರ್ತಿಯಾಗಿದ್ದಾನೆ.

### ಶ್ರೀರಾಮ ಹೃದಯವಂತನಾಗಿದ್ದ

ಕೆಲವು ಗುಣಗಳು ಹಲವರಲ್ಲಿ ಇರುತ್ತದೆ. ಹಲವು ಗುಣಗಳು ಕೆಲವರಲ್ಲಿ ಇರುತ್ತವೆ. ಎಲ್ಲ ಸುಗುಣಗಳು ಒಬ್ಬನಲ್ಲಿಯೇ ಕಾಣಸಿಗುವುದು ಎಲ್ಲೋ ಯುಗಕ್ಕೊಮ್ಮೆ. ಭಾರತದ ಜನ ಸಾಮಾನ್ಯನ ಜೊತೆ ರಾಜ್ಯ ವ್ಯವಸ್ಥೆಯು ನಿಂತು ಸಂಭ್ರಮಿಸುವ ವ್ಯಕ್ತಿತ್ವ ಇದ್ದರೆ ಅದು ರಾಮನದು ಮಾತ್ರ. ನಮ್ಮ ದೇವ ಭೂಮಿ ಭಾರತದ ಹಾಗೂ ಶ್ರೇಷ್ಠ ಸಂಸ್ಕೃತಿ ಕುರಿತಾಗಿ ನಮ್ಮಲ್ಲಿ ಅಭಿಮಾನ ಜಾಗೃತವಾಗಬೇಕು. ಅಯೋಧ್ಯೆ ಹಿಂದೂಗಳ ಪವಿತ್ರ ಸ್ಥಾನ.

### ಶ್ರೀ ರಾಮ ಮಧುರ ಭಾಷಿ

ಕಠೋರ ವಾಕ್ಯಗಳು, ಅಪಶಬ್ದಗಳು ಎಂದು ಶ್ರೀರಾಮನ ಬಾಯಿಯಿಂದ ಬರುತ್ತಿರಲಿಲ್ಲ. ಕೆಡುಕು ಮಾತುಗಳನ್ನಾಡಿದರೂ ರಾಮ ಕೋಪಗೊಳ್ಳುವ ವನಲ್ಲ. ಕೋಪಗೊಂಡರೂ ಕೆಡುಕು ಮಾತುಗಳನ್ನು ಆಡುವವನಲ್ಲ. ತನ್ನ ಮಧುರ ವಾಣಿಯಿಂದ ಕೋಪಗೊಂಡವರನ್ನೂ ಸಂತೈಸುವವನು. ಇದು ಅವನ ಮಲತಾಯಿಯಂದಿರು ಆಡಿದ ಮಾತುಗಳು. ರಾಮನೆಂದರೆ ತನ್ನ ಸುತ್ತೆಲ್ಲ ಆನಂದ ಚೆಲ್ಲುವ ಆನಂದಮೂರ್ತಿ. ಸೀಮೀತ ಸಮಯ ಆನಂದ ವನ್ನು ನೀಡುವವರು ಲೋಕದಲ್ಲಿ ಧಾರಾಳವಾಗಿ ಕಾಣಸಿಗುತ್ತಾರೆ. ಆದರೆ ರಾಮ ಹಾಗಲ್ಲ. ನಿತ್ಯೋತ್ಸವ ಅವನು ನಿತ್ಯಾನಂದದಾಯಿ.

## ಶ್ರೀಪಟ್ಟಾಭಿರಾಮ ಆಲಯ, ವಾಲ್ಮೀಕಿಪುರಂ

ಬಹಳ ಹಿಂದೆ ಒಮ್ಮೆ ಜಾಂಬವಂತನು ಅಯೋಧ್ಯೆಯಲ್ಲಿ ಶ್ರೀರಾಮನನ್ನು ದರ್ಶಿಸಿ ಹಿಂತಿರುಗುವಾಗ ಮಾರ್ಗ ಮಧ್ಯ ಈ ಪ್ರದೇಶಕ್ಕೆ ಬರುವಾಗ ಒಂದು ಹುತ್ತದಿಂದ ಬೆಳಕು ಬರುತ್ತಿರುವು ದನ್ನು ಗಮನಿಸಿದ ಹುತ್ತದಲ್ಲಿದ್ದ ಶ್ರೀರಾಮಚಂದ್ರನ ಮೂರ್ತಿ ಯನ್ನು ಹೊರತೆಗೆದು ಆಲಯವನ್ನು ನಿಲ್ಲಿಸಿ ಪ್ರತಿಷ್ಠಾಪಿಸಿದನಂತೆ. ವಾಲ್ಮೀಕಿಪುರದ ಅಗ್ರಭಾಗದಲ್ಲಿ ವಿಶಾಲವಾದ ಪ್ರಾಂಗಣದಲ್ಲಿನ ದೇವಾಲಯದ ಗರ್ಭಗೃಹದಲ್ಲಿ ಶ್ರೀರಾಮನು ಸೀತಾದೇವಿ ಹಾಗೂ ತನ್ನ ಸಹೋದರರೊಂದಿಗೆ ಕಾಣ ಸಿಗುತ್ತಾನೆ. ಬಲಹಸ್ತ ದಲ್ಲಿ ಗ್ರಾಸಮುದ್ರೆ,ಎಡಗೈಯಲ್ಲಿ ವರದಹಸ್ತ ಕೂಡಿರುವ ಶ್ರೀರಾಮನ ಬಲಭಾಗದಲ್ಲಿ ಸೀತಾದೇವಿಯಿರುವಳು.ಆಕೆಯ ಬಲಕ್ಕೆ ಚಾಮರಧಾರಿ ಭರತನು,ಎಡಕ್ಕೆ ಧನುರ್ಧಾರಿಯಾದ ಲಕ್ಷ್ಮಣನ ಮೂರ್ತಿಗಳಿವೆ. ಆಂಜನೇಯನ ವಿಗ್ರಹ ಪ್ರದಕ್ಷಿಣ ಮಂಟಪದಲ್ಲಿರುವುದು ಇಲ್ಲಿನ ವಿಶೇಷವಾಗಿದೆ.

ತಿರುಪತಿಯಿಂದ 100 ಕಿ.ಮೀ. ಮದನಪಲ್ಲಿಯಿಂದ 20 ಕಿ.ಮೀ. ದೂರದಲ್ಲಿ ವಾಲ್ಮೀಕಿಪುರವಿದೆ. ಪದ ಕವಿತಾ ಪಿತಾಮಹ ಅನ್ನಮಾಚಾರ್ಯನು ಸ್ತುತಿಸಿರುವ ವಾಲ್ಮೀಕಿಪುರಂನ ಶ್ರೀಪಟ್ಟಾ ಭಿರಾಮ ಸ್ವಾಮಿಯನ್ನು ದರ್ಶಿಸುವುದರಿಂದ ಕೋರಿದ ಕೋರಿಕೆ ಗಳೆಲ್ಲ ನೆರವೇರುತ್ತವೆ.



# ಪ್ರೇಮ ಮೂರ್ತಿ ಶ್ರೀ ಭರತನ ಭ್ರಾತೃ ಪ್ರೇಮ

- ಮೂರ್ತಿರಾಮನಾಥಪುರ
9972064322

ಅರ್ಚಕರಿಲ್ಲದೆ ವಿಗ್ರಹಕ್ಕೆ ಮಹತ್ವವಾದರೂ ಎಲ್ಲಿ? ಶ್ರೋತೃಗಳಿಲ್ಲದೆ ಉಪನ್ಯಾಸಕನ (ಬೆಲೆ) ವೈಶಿಷ್ಟ್ಯವಾದರೂ ಹೇಗೆ ತಿಳಿದೀತು? ಶಿಷ್ಯರೇ ಇಲ್ಲದ ಮೇಲೆ ಗುರುಗಳಿಗೆ ಅರ್ಥವೇ ಇಲ್ಲ? ಭಕ್ತ ನಿಲ್ಲದೇ ಭಗವಂತನ ವಿಶೇಷತೆಯೇನು?ಅದರಂತೆಯೇ ಭಕ್ತ ರಾಜ ಭರತನ ಪಾತ್ರವಿಲ್ಲದೆ ಮರ್ಯಾದಾ ಪುರುಷೋತ್ತಮ ಭಗವಾನ್ ಶ್ರೀರಾಮಚಂದ್ರನ ಪೂರ್ಣತ್ವ ಮತ್ತು ಪ್ರಕಾಶತೆ ಬೆಳಗಲಾರದು. ಭರತನ ಅಬಾಧ ಸಮರ್ಪಣೆ,ಅಪೂರ್ವ ನಿಷ್ಠೆ ಹಾಗೂ ಅನನ್ಯ ಪ್ರೇಮಭಕ್ತಿ ಭಾವವೇ ಭಗವಾನ್ ಶ್ರೀರಾಮನ ಅಲೌಕಿಕ, ಅದ್ವಿತೀಯ ಮತ್ತು ಅಭಿರಾಮ ರಾಮತ್ವಕ್ಕೆ ಪೋಷಕ ಪ್ರೇರಕ. ಅವನ ಪೂರ್ಣ ಸಮರ್ಪಣೆಯೇ ಜನಮಾನಸದಲ್ಲಿ ರಾಮತ್ವದ ದಿವ್ಯಭಾವನೆಯನ್ನು ಜಾಗೃತಗೊಳಿಸಿ ರಾಮಮಯವನ್ನಾಗಿಸಿತು. ಶ್ರೀರಾಮ, ಲಕ್ಷ್ಮಣ ಮತ್ತು ಜಾನಕಿ ಕಾಡಿಗೆ ನಿರ್ಗಮಿಸಿದ ನಂತರ ಅಯೋಧ್ಯೆಯ ಪ್ರಜೆಗಳು ಕಿಂಕರ್ತವ್ಯ ವಿಮೂಢರಾಗಿದ್ದಾಗ ಭರತ ಬಂದು ಅವರಲ್ಲಿ ಒಂದು ಹೊಸ ರಾಮ ಚೈತನ್ಯವನ್ನು ಸ್ಫುರಿಸುವಂತೆ ಮಾಡಿದ.

ಪರಮ ಪೂಜ್ಯರಾದ ಕುಲಗುರು ಶ್ರೀ ವಸಿಷ್ಠರು ಬಹಳಷ್ಟು ಒತ್ತಾಯ ಮಾಡಿದರೂ ಸಹ ಭರತನ ಮೂಲಕ ಸರ್ವೋಪರಿ ಐಶ್ವರ್ಯ ಶಾಲಿನಿ,ಅಯೋಧ್ಯೆಯ ದೈದೀಪ್ಯಮಾನ ರಾಜ ಸಿಂಹಾಸನದ ಪರಿತ್ಯಾಗ ಹಾಗೂ ಶ್ರೀರಾಮನ ಬಗೆಗಿನ ಅಸೀಮ ಪ್ರೀತಿ ಜನಮಾನಸದಲ್ಲಿ ರಾಮ ಪ್ರೇಮವನ್ನು ವಿಶೇಷವಾಗಿ ಪಸರಿಸಿತ್ತು. ಎಲ್ಲರ ಹೃದಯದಲ್ಲಿಯೂ ಶ್ರೀರಾಮನನ್ನು ಕಾಣುವ, ಭೇಟಿಯಾಗುವ ತೀವ್ರ ಆಕಾಂಕ್ಷೆ ಜಾಗೃತವಾಗಿತ್ತು. ಸರ್ವರೂ ಭಕ್ತರಾಜನಾದ ಭರತನ ನೇತೃತ್ವದಲ್ಲಿ ಚಿತ್ರಕೂಟದಲ್ಲಿದ್ದ ಶ್ರೀರಾಮನನ್ನು ಭೇಟಿಯಾಗಲು ಹೊರಟರು. ಆ ಸಂದರ್ಭ ಭರತ ಹೋಗುವ ಧಾಟಿಯನ್ನು ಶ್ರೀಗೋಸ್ವಾಮಿಯವರ ಶಬ್ದಗಳಲ್ಲಿ ಕಾಣಬಹುದು.

ಚಲತ ಪಯಾದೇ ಖಾತ ಫಲ ಪಿತಾ ದೀನ್ಹ ತಜಿ ರಾಜು ।
ಜಾತ ಮನಾವನ್ ರಘುಬರಹಿ ಭರತ ಸರಿಸ ಕೋ ಆಜು ॥

ಈ ಮಹಾನ್ ತ್ಯಾಗದ ನಂತರ ಅನುಪಮ ಪ್ರೇಮದ ಸ್ವರೂಪ ದರ್ಶನ ತೀರ್ಥರಾಜ ಪ್ರಯಾಗವಾಸಿಗಳಿಗೆ ಉಂಟಾದುದನ್ನು ನೋಡಿ:

ಭರತ್ ತೀಸರೇ ಪ್ರಹರ್ ಕಹೆ ಕೀನ್ಹ ಪ್ರಬೇಸು ಪ್ರಯಾಗ್ ।
ಕಹತ್ ರಾಮ ಸಿಯ್ ರಾಮ ಸಿಯ ಉಮಗಿ ಉಮಗಿ ಅನುರಾಗ್ ॥

ಪ್ರೇಮಮೂರ್ತಿಯಾದ ಭರತ ರಾಮಸಿಯ, ರಾಮಸಿಯ ಎನ್ನುತ್ತಲೇ ಅನುರಾಗದ ಉತ್ಸಾಹದಲ್ಲಿ ಉಬ್ಬಿ ಹೋಗಿದ್ದಾನೆ. ಭಗವಾನ್ ಶ್ರೀರಾಮನ ರಾಮತ್ವದ ಜಗತ್ ಪ್ರಸಿದ್ಧಿಯಲ್ಲಿ ತಮ್ಮ ಭರತನ ಕೈವಾಡ ಎಷ್ಟಿತ್ತು ಎಂಬುದರ ಮೂಲಕ ಈ ಪ್ರಸಂಗದ ಅರಿವಾಗುತ್ತದೆ. ಶ್ರೀಭರದ್ವಾಜ ಮುನಿಗಳ ಆಶ್ರಮ ಬಂದಿದೆ. ಮುನಿಶ್ರೇಷ್ಠರಾದ ಭರದ್ವಾಜರು ಭರತನನ್ನು ಕಂಡರು. ಆಗ ಅವರ ಬಾಯಿಯಿಂದ ಹೊರಟ ಮಾತುಗಳು-

ಸಬ್ ಸಾಧನ ಕರ್ ಸುಫಲ ಸುಹಾವಾ।
ಲಖನ್ ರಾಮಸಿಯ ದರಸನು ಪಾವಾ ॥

ಅನೇಕ ಯೋಗ, ಸಾಧನೆ,ಆರಾಧನೆ, ಜಪ, ತಪ, ವ್ರತ ಮತ್ತು ಸ್ವಾಧ್ಯಾಯಗಳಿಂದ ದೊರಕಿದ ಸುಂದರ ಫಲವಿದು. ಹಾಗಾಗಿ ಶ್ರೀರಾಮ-ಲಕ್ಷ್ಮಣ-ಸೀತೆಯರ ದರ್ಶನ ಪ್ರಾಪ್ತವಾಯಿತು ನಂತರ : -

'ತೇಹಿ ಫಲ್ ಕರ್ ಫಲು ದರಸ
ತುಮ್ಹಾರಾ ಸಹಿತ ಪಯಾಗ್ ಸುಭಾಗ್ ಹಮಾರಾ॥

ಎನ್ನುತ್ತಾರೆ. ಅದರ ಫಲದಿಂದಾಗಿ, ನಿಮ್ಮ ದರ್ಶನ ಭಾಗ್ಯ ದೊರಕಿತು. ಶ್ರೀ ಪ್ರಯಾಗರಾಜದೊಂದಿಗೆ ನಮಗೆ ಬಹಳವೇ

ಅದೃಷ್ಟವಿದೆ. ಭರತನ ದರ್ಶನದಲ್ಲಿ ಶ್ರೀರಾಮ-ಲಕ್ಷ್ಮಣ-ಜಾನಕಿಯ ದರ್ಶನದ ಹೊರತಾಗಿ ವಿಶೇಷತೆಯಾದರೂ ಏನು ಎಂಬುದೇ ಇಲ್ಲಿ ಪ್ರಶ್ನೆ?ತ್ಯಾಗಿ, ತಪಸ್ವಿಗಳಾದ ಭರದ್ವಾಜ ಮುನಿಗಳು ಅವರನ್ನು ಕಂಡರು. ಆದರೆ ಆ ದರ್ಶನದ ಸಂಪೂರ್ಣ ಸ್ವಾರಸ್ಯ ಹಾಗೂ ಆನಂದ ಭಕ್ತ ಶಿರೋಮಣಿ ಪರಮ ಪ್ರೇಮ ಸ್ವರೂಪಿ ಸಹೋದರ ಭರತನನ್ನು ಕಂಡಿದ್ದರಿಂದ ಅವರಿಗೆ ದೊರಕಿತ್ತು.

ಶ್ರೀರಾಮನ ಭೇಟಿಯಿಂದ ರೋಮಾಂಚನಗೊಂಡು ಅನಿರ್ವಚನೀಯ,ಅಲೌಕಿಕ,ಅನುಪಮ ಬೆಳಕು ಆವರಿಸಿತ್ತು. ಅಂತಹ ಕಾಲದಲ್ಲಿ ಭರತನ ಭೇಟಿಯಾದಾಗ ಅವರಿಗೆ ಶ್ರೀರಾಮಚಂದ್ರನ ಪ್ರೇಮದ ಉಚ್ಚತಮಭಾವ ಹಾಗೂ ಆನಂದದ ಅನುಭವವಾಯಿತು. ಭರತನ ದಿವ್ಯ ಪ್ರೇಮಭಾವ ಅವರ ನಿರ್ಮಲ ಅಂತಃಕರಣದಲ್ಲಿ ಸ್ಥಾಪಿತವಾಗಿ ಏನೂ ತೋಚದಂತಾದರು. ಆ ಭವ್ಯ ಭಾವೋತ್ಕರ್ಷದಲ್ಲಿ ತಮ್ಮ ಭರತನೊಂದಿಗೆ ಶ್ರೀರಾಮ-ಲಕ್ಷ್ಮಣ ಜಾನಕಿಯ ಮಧುರ-ಮನೋಹರ ರೂಪ, ಅದ್ಭುತ ಆನಂದದ ಕಾಂತಿ ಝಗಮಗಿಸುವಂತೆ ಕಂಡಿತು. ನಿಸ್ಸಂದೇಹವಾಗಿ,ಭರತನ ಭವ್ಯ ಭಕ್ತಿ-ಪ್ರೇಮಮಯ ಸ್ವರೂಪವೇ ಒಬ್ಬ ಮಹಾನ್ ತಪಸ್ವಿಯಿಂದ ಹಿಡಿದು ಜನಜಂಗುಳಿಯ ಮನಸ್ಸಿನಲ್ಲಿ ರಾಮಚೈತನ್ಯದ ಸಂಚಾರವನ್ನು ಉಂಟುಮಾಡಿತು, ಅದನ್ನು ಹೀಗೆ ಹೇಳಿದೆ.

ಜಡ್ ಚೇತನ ಮಗ ಜೀವ್ ಘನೇರೇ।
ಜೇಚಿತ್ವ ಪ್ರಭು ಜಿನ್ಹ ಪ್ರಭು ಹೇರೇ ।
ತೇ ಸಬ್ ಭವ ಪರಮ ಪದ ಜೋಗೂ ।
ಭರತ್ ದರಸ ಮೇಟಾ ಭವ ರೋಗೋ॥

ಪ್ರೇಮ ಸ್ವರೂಪಿ ಭರತನ ದರ್ಶನ ಮಾಡಿಯೇ ಜನ ಭವ ರೋಗದಿಂದ ಬಿಡುಗಡೆ ಹೊಂದಿ ಪರಮಪದಕ್ಕೆ ಭಾಜನರಾದರು. ಮಾನಸದಲ್ಲಿಯೇ ಇನ್ನೊಂದು ಕಡೆ ತುಲಸೀದಾಸರು ಹೀಗೆ ಹೇಳಿದ್ದಾರೆ.

ರಾಮಭಗತಿ ರತ ನರ ಅರು ನಾರೀ।
ಸಕಲ ಪರಮ ಗತಿ ಕೇ ಅಧಿಕಾರೀ ॥

ಹಾಗಿದ್ದ ಮೇಲೆ ಈ ರಾಮಭಕ್ತಿ ದೊರಕುವುದಾದರೂ ಹೇಗೆ? ಭಗತಿ ತಾತ ಅನುಪಮ ಸುಖಮೂಲಾ। ಮಿಲಇ ಜೋ ಸಂತ ಹೋ ಈ ಅನುಕೂಲಾ? ಹೀಗಾಗಿಯೇ ಸಂತಶಿರೋಮಣಿ ಭಕ್ತ ಪ್ರವರ ಶ್ರೀಭರತನ ದರ್ಶನದಿಂದ ಜಡ,ಚೇತನ ಎಲ್ಲದರಲ್ಲಿಯೂ ಕೂಡಲೇ ರಾಮಭಕ್ತಿ ಸ್ಥಾಪಿತವಾಯಿತು. ಅವೆಲ್ಲಕ್ಕೂ ಪರಮ ಪದದ ಅಧಿಕಾರ ಸಿಕ್ಕಂತಾಯಿತು. ಹೀಗೆ ಜನಮಾನಸ ಮಂದಿರದಲ್ಲಿ ಭರತ ಶ್ರೀರಾಮನನ್ನು ಪ್ರತಿಷ್ಠಾಪಿಸಿ ಭಗವಾನ್ ಶ್ರೀರಾಮನ ರಾಮತ್ವವನ್ನು ಸಾರ್ಥಕಗೊಳಿಸಿದ. ಹದಿನಾಲ್ಕು ವರ್ಷ ಕಳೆಯಲು ಒಂದು ದಿನ ಉಳಿದಾಗ ಪ್ರಭು ಶ್ರೀರಾಮಭದ್ರ ಅಂಜದಿಯ ಮಗನನ್ನು ತಮ್ಮ ಭರತ ಹೇಗಿದ್ದಾನೆಂದು ತಿಳಿಯಲು ಅವಧಕ್ಕೆ ಕಳಿಸಿಕೊಟ್ಟ. ಹನುಮಾನ್ ಅಲ್ಲಿಗೆ ಹೋಗಿ ಭರತನಿದ್ದ ರೂಪ ನೋಡಿ ಚಕಿತಗೊಂಡ. ಆತನಾದರೂ ಋಷಿ ಸ್ವರೂಪದಲ್ಲಿ ಶ್ರೀರಾಮನ ಪ್ರೀತಿಯೇ ಮೂರ್ತಿವೆತ್ತಂತೆ ವಿರಾಜಮಾನವಾಗಿದ್ದ:

ಬೈಠೆ ದೇಖಿ ಕುಸಾಸನ ಜಟಾ ಮುಕುಟ ಕೃಸಗಾತ ।
ರಾಮರಾಮ ರಘುಪತಿ ಜಪತ ಸ್ರವತ ನಯನ ಜಲಜಾತ ॥

ಇದು ಸಂಪೂರ್ಣ ಭಕ್ತಿಯ ಸ್ವರೂಪವನ್ನು ಶ್ರೀರಾಮಾನುರಾಗಿಗಳಿಗೆ ರಾಮಭಕ್ತಿಯ ಉತ್ಕೃಷ್ಟರೂಪವನ್ನು ತೋರ್ಪಡಿಸುವುದಲ್ಲದೆ ಉತ್ತರೋತ್ತರ ತನ್ನ ಭಕ್ತಿಯನ್ನು ಪ್ರವರ್ಧಮಾನಗೊಳಿಸಲು ಪ್ರೇರಣೆಯನ್ನು ನೀಡುತ್ತದೆ. ಶ್ರೀ ಭರತನನ್ನು ಮೂರ್ತಿಮಾನ್ ಪ್ರೇಮಸ್ವರೂಪ ಎನ್ನಲಾಗಿದೆ. ಭರದ್ವಾಜರ ಶಬ್ದಗಳಲ್ಲಿ ಹೇಳುವುದಾದರೆ,

ತುಮ್ಹ ತೌ ಭರತ ಮೋರಮತ ಎಹೂ ।
ಧರೇ ದೇಹ ಜನು ರಾಮ ಸನೇಹೂ ॥

ಶ್ರೀರಾಮಚರಿತಮಾನಸದ ಈ ಪರಮ ಪವಿತ್ರ ಭರತ-ಚರಿತ್ರ ದರ್ಶನ ಭಕ್ತ ಸುಜನರಿಗೆ ಇದೇ ಪ್ರೇರಣೆಯನ್ನು ನೀಡುತ್ತದೆ.

ಅವಧ್ ರಾಜು ಸುರ ರಾಜು ಸಿಹಾ ಈ ।
ದಶರಥ ಧನುಸುನಿಧನದು ಲಜಾ ಈ ॥
ತೇಹಿ ಪುರ್ ಬಸತ್ ಭರತ ಬಿನು ರಾಗಾ ।
ಚಂಚರೀಕ ಜಿಮಿ ಚಂಪಕ ಬಾಗಾ॥

ಸುರೇಂದ್ರನ ರಾಜ್ಯ ಮತ್ತು ಕುಬೇರನ ಸಂಪತ್ತನ್ನೂ ಸಹ ನಾಚಿಸುವಂತಹ ರಾಜ್ಯ ವೈಭವದ ನಡುವೆ ಭರತ ನಿರ್ಲಿಪ್ತನಾಗಿದ್ದುದು ಹೆಮ್ಮೆ ತರುವಂತದು. ಸಂಪಿಗೆಯ ತೋಟದಲ್ಲಿದ್ದು ದುಂಬಿ ಸಂಪಿಗೆ ಪುಷ್ಪಗಳಿಂದ ದೂರವಿರುವಂತೆ ಭರತನಿದ್ದ. ಅಯೋಧ್ಯೆಯ ಅತಿಶಯ ರಮ್ಯ ರಾಜ್ಯ ಭೋಗಗಳಿಂದ ವಿರಕ್ತನಾಗಿದ್ದು ಅವನು ಸದಾ ಭಗವಾನ್ ಶ್ರೀರಾಮ,ರಾಘವೇಂದ್ರನ ಚಾರುಚರಣಾರವಿಂದಗಳನ್ನು ಚಿಂತನೆಯಲ್ಲಿಯೇ ತಲ್ಲೀನನಾಗಿದ್ದ. ಅಲ್ಲಿದ್ದುಮಧುರ ಭಾವನೆಗಳನ್ನು ಸೂರೆಗೊಂಡು ಶ್ರೀರಾಮನಾಮಾಮೃತದ ನಿರಂತರ ಪಾನದಲ್ಲಿ ಮುಳುಗಿಹೋಗಿದ್ದ, ಹಾಗಾಗಿಯೇ ಭುವನ ಪಾವನ ಶ್ರೀಭರತ ಚರಿತ್ರೆಯ ಅಂತ್ಯದಲ್ಲಿ ಇದರ ಫಲ ಶ್ರುತಿಯನ್ನು ಹೀಗೆ ವರ್ಣಿಸಿದ್ದಾರೆ.

ಭರತ ಚರಿತ ಕರಿ ನೇಮು ತುಲಸೀ ಜೋ ಸಾದರ ಸುನಹಿ ।
ಸೀಯ ರಾಮ ಪದ ಪ್ರೇಮ ಅವಸಿ ಹೋ ಈ ಭವರಸಬಿರತಿ॥

# ಹರಿಕಥಾಮೃತ ಸಾರ ಮಹಿಮೆ ಬಲು ಅಪಾರ

## (ಪಂಚ ಮಹಾಯಜ್ಞ ಸಂಧಿ)

-ಶ್ರೀಮತಿ. ಪ್ರಿಯಾಪ್ರಾಣೇಶ ಹರಿದಾಸ
80504 36752



ಹರಿಕಥಾಮೃತಸಾರದ ಮಂಗಳಾಚರಣ ಸಂಧಿಯಲ್ಲಿ ಭಗವಂತ ಮತ್ತು ದೇವತೆಗಳ ಬಗ್ಗೆ ತಿಳಿದುಕೊಂಡರೆ ಮುಂದೆ ಕರುಣಾಸಂಧಿಯಲ್ಲಿ ಭೀಷ್ಮರು ಪುಂಡಲಿಕ ವಿದುರದ ಉದಾಹರಣೆ ಕೊಟ್ಟು ಭಗವಾನ್ ಕರುಣೆ ಬಗ್ಗೆ ತಿಳಿಸಿದ್ದಾರೆ. ಇನ್ನು ವ್ಯಾಪ್ತಿ ಸಂಧಿಯಲ್ಲಿ ಸರ್ವ ವ್ಯಾಪ್ತನಾದ ಸರ್ವೇಶ್ವರನಾದ ಭಗವಂತನ ಬಗ್ಗೆ ತಿಳಿದಿದ್ದಾರೆ. ವಿಭೂತಿ ಸಂಧಿಯಲ್ಲಿ ಭಗವಂತನ ಅಧಿಷ್ಠಾನ ಬಗ್ಗೆ ತಿಳಿಸಿದ್ದಾರೆ. ಭೋಜನ ಸಂಧಿಯಲ್ಲಿ ಪದಾರ್ಥಗಳಲ್ಲಿನ ಹರಿಯ ರೂಪ ನಾಮಗಳು ಭೋಜನ ಸಮಯದಲ್ಲಿ ಮಾಡಬೇಕಾದ ಶ್ರೀಹರಿಯ ಚಿಂತನೆ ತಿಳಿಸಿದ್ದಾರೆ. ಜೀವಿ ಹುಟ್ಟಬೇಕಾದರೆ ಐದು ತರಹ ಯಜ್ಞ ನಡೆಯುತ್ತದೆ. ಹೀಗಾಗಿ ಇನ್ನು ಮುಂದೆ ಪಂಚಯಜ್ಞ ಮಹಾ ಸಂಧಿಯ ಬಗ್ಗೆ ಓದಿ.....

ಹರಿಕಥಾಮೃತದ 1 ರಿಂದ 5 ರ ವರೆಗೆ ಶ್ರೀ ಹರಿಯ ಗುಣ ಮಾಡಿದ್ದೀರಿ. ಇನ್ನು ಆರನೇ ಸಂಧಿಯಾದ "ಪಂಚಮಹಾಯಜ್ಞ ಸಂಧಿ"ಯಲ್ಲಿ ಒಂದು ಜೀವಿ ಭೂಮಿಗೆ ಬರಬೇಕಾದರೆ ಒಂದು ತಾಯಿ ಗರ್ಭ ಸೇರಿ ಹುಟ್ಟ ಬೇಕಾದರೆ ಐದು ತರಹ ಆಗುವ ಯಜ್ಞವೆ ಈ ಪಂಚ ಮಹಾಯಜ್ಞ.

ಜನನಿಪಿತ ಭೂ ವಾರಿದಾಂಬರ ವೆನಿಪ ಪಂಚಾಗ್ನಿಯಲಿ ನಾರಾಯಣನ
ತ್ರಿಂಶತಿ ಮೂರ್ತಿಗಳ ವ್ಯಾಪಾರ ವ್ಯಾಪ್ತಿಗಳ।
ನೆನೆದು ದಿವಸಗಳೆಂಬ ಸಮಿಧೆಗಳನು ನಿರಂತರ ಹೋಮಿ ಸುತ
ಪಾವನಕೆ ಪಾವನನೆನಿಪ ಪರಮನ ಬೇಡು ಪರದ ಸುಖ ॥೧॥

ತಾಯಿ ತಂದೆ ಭೂಮಿ ಮೋಡ ಆಕಾಶ ಎಂಬ ಐದು ಅಗ್ನಿಗಳಲ್ಲಿ ಶ್ರೀಹರಿಯ ನಾರಾಯಣ 30 ರೂಪಗಳಿಂದ ವ್ಯಾಪಾರಗಳನ್ನು ಮಾಡಿಸಿ ದಿನಗಳೆಂಬ ಕಟ್ಟಿಗೆ ಹಾಕಿ ನಿರಂತರ ಹೋಮ ಮಾಡುತ್ತಾ ನಾವು ಭಗವಂತನನ್ನು ಸ್ಮರಿಸಬೇಕು.1 ರಿಂದ 6ನೆಯ ನುಡಿಯವರೆಗೆ ಜೀವಿಯ ಸೃಷ್ಟಿಯ ಬಗ್ಗೆ ಹೇಳಿದ್ದಾರೆ. ಮೊದಲು ಜೀವಿಯು ಆಕಾಶಕ್ಕೆ ಬಂದಾಗ ಆಕಾಶವೇ ಅಗ್ನಿಕುಂಡ ಸೂರ್ಯನ ಕಟ್ಟಿಗೆ ಹಗಲು ಎಂಬುದೇ ಜ್ವಾಲೆ, ನಕ್ಷತ್ರಗಳೇ ಕಿಡಿಗಳು ಚಂದ್ರನೇ ಅಗ್ನಿ ಚಂದ್ರನೊಳಗೆ ಭಗವಂತನಿರುತ್ತಾನೆ. ಭಕ್ತಿಯಿಂದ ಜ್ಞಾನಿಗಳು ಹೋಮ ಮಾಡುತ್ತಾರೆ. ಆಕಾಶದಲ್ಲಿ ಮೊದಲನೆಯ ಪಂಚಾಗ್ನಿ ಆದ ನಂತರ ಜೀವಿಯು ಮೋಡ (ಪರ್ಜನ್ಯ) ದೊಳಗೆ ಬಂದಾಗ ಮೋಡವೆ ಅಗ್ನಿಕುಂಡ,ಪ್ರವಾಹ ವಾಯುವೆ ಸಮಿತ್ತು (ಕಟ್ಟಿಗೆ) ಗುಡುಗುಗಳೇ ಕಿಡಿಗಳು ಮೇಘಗಳ ಸಾಲುಗಳ ಹೊಗೆ ಮಿಂಚುವೆ ಅರ್ಚಿ (ಸಣ್ಣಜ್ವಾಲೆ) ಸಿಡಿಲವೆ ಕೆಂಡ ಚಂದ್ರನನ್ನು ಪ್ರತಿದಿನ ದೇವತೆಗಳು ಹೋಮ ಮಾಡುತ್ತಾರೆ.

ಎರಡು ಪಂಚಾಗ್ನಿಗಳು ಆದ ನಂತರ ಅಂದರೆ ಜೀವಿಯು ಆಕಾಶದಿಂದ ಮೋಡ ಮಳೆಯ ರೂಪದಿಂದ ಜೀವಿಯು ಭೂಮಿಗೆ ಬರುತ್ತಾನೆ. ಆಗ ಭೂಮಿಯೇ ಅಗ್ನಿ ಕುಂಡ ಸಂವತ್ಸರವೇ ಸಮಿತ್ತು, ಆಕಾಶವೇ, ಹೊಗೆ, ರಾತ್ರಿಯೇ ಜ್ವಾಲೆ, ದಿಕ್ಕುಗಳೇ ಅಂಗಾರ ಅವಾಂತರವೇ ದಿಕ್ಕುಗಳೇ ಕಿಡಿಗಳು,ವರ್ಷವೇ ಆಹುತಿ ಇವುಗಳಲ್ಲಿ ಸರ್ವರೂಪಿ ಭಗವಂತನನ್ನು ಸರ್ವದರಲ್ಲೂ ಚಿಂತಿಸುವುದೇ ಮೂರನೇ ಯಜ್ಞ. ಇಲ್ಲಿ ಜೀವಿಯು ಮಳೆಯ ಮೂಲಕ ಭೂಮಿಗೆ ಬಿದ್ದು, ಭೂಮಿಯಲ್ಲಿ ಬೆಳೆದ ಕಾಳುಗಳಲ್ಲಿ ಸೇರುತ್ತಾನೆ. ಮುಂದೆ ಇನ್ನು ನಾಲ್ಕನೇ ಯಜ್ಞದಲ್ಲಿ ಜೀವನು ಉಣ್ಣುವ ಅನ್ನ ರೂಪದಲ್ಲಿ ತಂದೆಯ ದೇಹದ ಒಳೆಗೆ ಸೇರುತ್ತಾನೆ. ಆಗ ಪುರುಷನೇ ಅಗ್ನಿ ಕುಂಡ ಆಡುವ ಮಾತುಗಳೇ ಸಮಿತ್ತು ಇಂದ್ರಿಯವೇ ಹೊಗೆ, ನಾಲಿಗೆಯೇ ಅರ್ಚಿ, ಕಿವಿಗಳೇ ಕಿಡಿಗಳು, ಕಣ್ಣುಗಳೇ ಅಂಗಾರ ಎಂದು ಚಿಂತಿಸುತ್ತ ಇಂದ್ರಿಯಗಳ ಭೋಗವನ್ನು ಶ್ರೀ ಕೃಷ್ಣನಿಗೆ ಆಹುತಿ ಕೊಡುತ್ತಾ ಪಾಲಿಸುತ್ತಾ ನಡೆಯಬೇಕು. ಇನ್ನು ಐದನೇ ಅಗ್ನಿಯಾದ ತಾಯಿಯಲ್ಲಿ ಜೀವನು ಪ್ರವೇಶಿಸುವ ರೀತಿಯನ್ನು ಹೇಳಿದ್ದಾರೆ.

ಮತ್ತೆ ಯೋಷಾಗ್ನಿಯೊಲು ತಿಳಿವುದು ಪಸ್ಥತತ್ತ್ವವೆ ಸಮಿಧೆ
ಕಾಮೋ ತ್ಪತ್ತಿಪರ ಮಾತುಗಳೆ ಧೂಮವು ಯೋನಿಮಹದರ್ಚಿ।

ತತ್ವವೇಶಾಂಗಾರ ಕಿಡಿಗಳು ಉತ್ಸಹಗಳುತ್ಸರ್ಜನವು
ಪುರುಷೋತ್ತಮನಿಗವದಾನವೆನೆ ಕೈಗೊಂಡು ಮನ್ನಿಸುವ ॥6॥

ಈ ಮೇಲಿನ ಅರ್ಥವೆಂದರೆ ತಾಯಿಯ ದೇಹವೇ ಒಂದು ಅಗ್ನಿಕುಂಡ ಜನನೇಂದ್ರಿಯ ಸಮಿತ್ತು, ಪ್ರೀತಿ ಮಾತುಗಳೇ ಧೂಮ,ಯೋನಿ ಅರ್ಚಿ ಅಲ್ಲಿ ಅಗ್ನಿ ಪ್ರವೇಶಿಸಿ ಬರುವ ಉತ್ಸಾಹವೇ ಕಿಡಿ ಬರುವ ರೆತಸ್ಸೇ ಶ್ರೀಹರಿಗೆ ಆಹುತಿ ಎಂದು ಈ ಕರ್ಮವನ್ನು ಸಹ ಭಗವಂತನಿಗೆ ಸಮರ್ಪಿಸಬೇಕು. ಹೀಗೆ ಪಂಚ ಅಗ್ನಿಗಳದಿಂದ ಜೀವಿಯು ಬರುವಂತಹ ಹುಟ್ಟು. ನಿತ್ಯ ಪಂಚಾಗ್ನಿಯಲ್ಲಿ ಭಗವಂತನ 30 ರೂಪಗಳನ್ನು ಚಿಂತಿಸುತ್ತಾ ಇದ್ದರೆ ಅವನಿಗೆ ಸಂಸಾರದಲ್ಲಿ ಹುಟ್ಟು ಇರಲಾರದು. ಬ್ರಹ್ಮರುದ್ರಾದಿ ಎಲ್ಲ ಜೀವರೊಳಗೆ ಇದ್ದು ಅಚ್ಯುತ, ಅನಂತ, ಗೋವಿಂದ ಎಂಬ ನಾಮದಿಂದ, ಆಧಿಭೂತ, ಆಧ್ಯಾತ್ಮ ಆಧಿದೈವದಲ್ಲಿ ನಾಲ್ಕು ದೇಹಗಳಾದ ಸ್ವರೂಪದೇಹ, ಲಿಂಗದೇಹ ಅನಿರುದ್ಧ ದೇಹ ಸ್ಥೂಲದೇಹ ಹೀಗೆ ನಾಲ್ಕು ದೇಹಗಳಲ್ಲಿ 10326 ರೂಪಗಳಿಂದ ಪರಮಾತ್ಮನು ನಮ್ಮ ದೇಹದಲ್ಲಿರುವನೆಂದು ಜ್ಞಾನಿಗಳು ಚಿಂತಿಸುತ್ತಾರೆ.

ಐದವಿದ್ಯೆಗಳೊಳಗೆ ಇಹ ನಾ ಗಾದಿಗಳಧಿಷ್ಠಾನದಲ್ಲಿಲಕು
ಮೀಧವನು ಕೃದ್ವೋಲ್ಕ ಮೊದಲಾದ್ಯೆದು ರೂಪಗಳತಾ।
ಧರಿಸಿ ಸಜ್ಜನರವಿದ್ಯವ ಛೇದಿಸುವ ತಾಮಸರಿಗಜ್ಞಾ
ನಾದಿಗಳ ಕೊಟ್ಟವರವರ ಸಾಧನವ ಮಾಡಿಸುವ ॥3॥

ಈ ಪದ್ಯದಲ್ಲಿ ಹೇಳಿದೇನೆಂದರೆ ಅಸುರಿ ಜನರಲ್ಲಿ ಇರತಕ್ಕಂತಹ ಅವಿದ್ಯೆಗಳಲ್ಲಿಯೂ ಸಹ (ಪಂಚ ಅವಿದ್ಯೆಗಳು ತಮ್ಮ ಮೋಹ ಮಹಾಮೋಹ ತಾಮಿಸ್ರ ಅಂಧತಾಮಿಸ್ರ)ಪಂಚರೂಪಾತ್ಮಕನಾಗಿ (ಕೃದ್ಯುಲ್ಕ, ಮಹೋಲ್ಕ, ವೀರೋಲ್ಕ, ದ್ಯುಲ್ಕ, ಸಹಸ್ರೊಲ್ಕ)

ಉಪ ಪ್ರಾಣಿಗಳಲ್ಲಿ ಇರುತ್ತಾನೆ. ಹೀಗೆ ಸಜ್ಜನರಿಗೆ ವಿದ್ಯೆಯನ್ನು ಕೊಟ್ಟು ಅಧಮರಿಗೆ ಅಜ್ಞಾನವನ್ನು ಕೊಟ್ಟು ಅವರವರಿಗೆ ಕರ್ಮಾನುಸಾರ ಸಾಧನೆ ಮಾಡಿಸುತ್ತಾನೆ. ಭಗವಂತನು ವಾಸುದೇವ ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧ ಎಂಬ ನಾಲ್ಕು ರೂಪಗಳಿಂದ ನಾಲ್ಕು ಯುಗಗಳಲ್ಲಿ ಇದ್ದು, ಪ್ರೇಯ ಪ್ರೇರಕನಾಗಿ ಧರ್ಮವನ್ನು ಮಾಡಿಸಿ ಭಕ್ತರನ್ನು ರಕ್ಷಿಸಿ ದುಷ್ಟರನ್ನು ಶಿಕ್ಷಿಸಿ ಧರ್ಮವನ್ನು ರಕ್ಷಿಸುತ್ತಿದ್ದಾನೆ. ಪಂಚಭೂತಗಳಿಂದ ಕೂಡಿದ ನಮ್ಮ ದೇಹದಲ್ಲಿ ಪೂರ್ಣನಾಗಿ ನಾರಾಯಣ ರೂಪದಲ್ಲಿ ಇದ್ದಾನೆ.

ಕುತ್ತಿಗೆಯಿಂದ ಉದರದವರಿಗೆ ಮಾಯಾಪತಿ, ವಾಸುದೇವನಾಗಿ ಬಲದಲ್ಲಿ ಕೃತಿಪತಿ ಪ್ರದ್ಯುಮ್ನನಾಗಿ ಎಡದಲ್ಲಿ ಶಾಂತಿಪತಿ ಅನಿರುದ್ಧನಾಗಿ, ಕಟಿಯಿಂದ ಪಾದದವರಿಗೆ ಜಯಾಪತಿ, ಸಂಕರ್ಷಣನಾಗಿ ಪಂಚರೂಪಗಳನ್ನು ನಮ್ಮ ದೇಹ ದಲ್ಲಿ ನಾವು ಚಿಂತನೆ ಮಾಡುತ್ತಾ ಇರ ಬೇಕು. ಹೀಗೆ ಹಸ್ತದಲ್ಲಿ ಪದ್ಮನಾಭ, ಭೂಮಿಯಲ್ಲಿ ಋಷಿಕೇಶ, ನಾಲಿಗೆ ಯಲ್ಲಿ ವಾಮನ ಚರ್ಮದಲ್ಲಿ ತ್ರಿವಿಕ್ರಮ, ಕಣ್ಣಿನಲ್ಲಿ ಮಧುಸೂದನ ಕಿವಿಯಲ್ಲಿ ವಿಷ್ಣು ವಿದಾನಂದು ಕೇಶವಾದಿ 24 ನಾಮಗಳನ್ನು ಚಿಂತಿಸಬೇಕು.

ಇನ್ನು ಪಂಚಭೂತಗಳಲ್ಲಿ ಕೃಷ್ಣನಾಗಿ ಭೂಮಿಯಲ್ಲಿ, ಹರಿಯಾಗಿ ನೀರಿನಲ್ಲಿ, ಪರಶುರಾಮನಾಗಿ ಅಗ್ನಿಯಲ್ಲಿ, ಗಾಳಿಯಲ್ಲಿ ಉಪೇಂದ್ರನಾಗಿ, ಆಕಾಶದಲ್ಲಿ ಜನಾರ್ದನನ್ನಾಗಿ, ಗಂಧದಲ್ಲಿ ಅಚ್ಯುತರೂಪದಿಂದ ರಸದಲ್ಲಿ ನರಸಿಂಹನಾಗಿ, ಸ್ಪರ್ಶದಲ್ಲಿ ಅನಿರುದ್ಧ ರೂಪದಿಂದ, ಶಬ್ದದಲ್ಲಿ ಪ್ರದ್ಯುಮ್ನ ನಾಮಕನಾಗಿ ಇದ್ದಾನೆ. ಒಟ್ಟಾರೆ 24 ತತ್ವಗಳಲ್ಲಿ 24 ತತ್ವ ಅಭಿಮಾನಿ ದೇವತೆಗಳ ಅಂತರಗತನಾಗಿ 1152 ರೂಪಗಳಿಂದ ಹರಿಯು ಸರ್ವ ವ್ಯಾಪ್ತನಾಗಿ ಸಕಲ ಜೀವರಲ್ಲಿ ಕ್ರೀಡಿಸುವನು. ನಮ್ಮ ಏಕಾದಶ ಇಂದ್ರಿಯಗಳಲ್ಲಿ 11 ರೂಪಗಳಿಂದ ಕೊರೆನಾಡಿನಲ್ಲಿ ಇರುವ ಭಗವಂತ ಪುರಿನಾಡಿಯಲ್ಲಿರುವ ಪುರುಷೋತ್ತಮನು ನಮ್ಮ ಸ್ವರೂಪ ದೇಹದಲ್ಲಿ ಇದ್ದಾನೆ. ವಿಶ್ವ, ತೈಜಸ್, ಪ್ರಾಜ್ಞ ತುರ್ಯನಾಮಕನಾಗಿ ಲಿಂಗ ಶರೀರದಲ್ಲಿ ಇದ್ದಾನೆ.

ಕೇಶವಾಗಿ ಸುಮೂರ್ತಿ ದ್ವಾದಶ ಮಾಸ ಪುಂಡ್ರಗಳಲ್ಲಿ ವೇದ
ವ್ಯಾಸನನಿರುದ್ಧಾದಿ ರೂಪಗಳಾರು ಋತುಗಳಲಿ।
ವಾಸವಾಗಿಹನೆಂದು ತ್ರಿಂಶತಿ ವಾಸರದಿ ಸತ್ಕರ್ಮಧರ್ಮ
ನಿರಾಶೆಯಿಂದಲಿ ಮಾಡು ಕರುಣವ ಬೇಡು ಕೊಂಡಾಡು ॥ 28॥

ಈ ನುಡಿಯಲ್ಲಿ ಮಾಸದಲ್ಲಿನ ಹರಿಯ ಚಿಂತನೆಯ ಬಗ್ಗೆ ಹೇಳಿದ್ದಾರೆ. ಕೇಶವಾದಿ 24 ಅನಿರುದ್ಧಾದಿ 5 ರೂಪಗಳು ವೇದವ್ಯಾಸ ರೂಪವನ್ನು ಹಿಡಿದು ಒಟ್ಟಾರೆ 30 ರೂಪಗಳನ್ನು ಮಾಸದ 30 ದಿನದಲ್ಲಿ ಚಿಂತಿಸಬೇಕು. ಕೇಶವನಾಮದಲ್ಲಿನ ಹನ್ನೆರಡು ರೂಪಗಳು 12 ಮಾಸಗಳಿಗೆ 5 ಹರಿಯ ಪಂಚರೂಪಗಳು ಮತ್ತು ವೇದವ್ಯಾಸರನ್ನು 6 ಋತುಗಳಲ್ಲಿ ಚಿಂತಿಸಬೇಕು ಎಂದು ಹೇಳಿದ್ದಾರೆ.

ಶ್ರೀ ಹರಿಯು ಸಮಸ್ತ ಜಡ ಚೇತನಗಳಲ್ಲಿಯೂ ಪ್ರೇರಕನಾಗಿ ಇದ್ದಾನೆ. ಪುರುಷ ಶರೀರದಲ್ಲಿ ವಾಸುದೇವ ಮತ್ತು ಅನಿರುದ್ಧ ರೂಪದಿಂದ ಇದ್ದರೆ, ಸ್ತ್ರೀ ಶರೀರದಲ್ಲಿ ಸಂಕರ್ಷಣ ಮತ್ತು ಪ್ರದ್ಯುಮ್ನ ರೂಪದಿಂದ ಇದ್ದಾನೆ. ಬ್ರಹ್ಮಾದಿ ದೇವತೆಗಳಲ್ಲಿಯೂ ವ್ಯಾಪಾರಗಳನ್ನು ಮಾಡಿಸಿ ಜ್ಞಾನಾನಂದನಾದ ಪರಿಪೂರ್ಣನಾಗಿ ಇರುತ್ತಾನೆ.

ಜಿನವಿಮೋಹಕ ಬುದ್ಧ ಪಾಯುಗ ದನುಜ ಮರ್ಧನ ಕಲ್ಕಿ ಮೇಡ್ರದಿ
ಇನಿತು ದಶರೂಪಗಳ ದಶ ಕರಣಂಗಳಲಿ ತಿಳಿದು ಅನುಭವಿಪ ವಿಷಯಗಳ
ಕೃಷ್ಣಾರ್ಪಣ ವೆನಲು ಕೈಗೊಂಬ ಜನಾರ್ದನ ವರ ಜಗನ್ನಾಥ ವಿಠಲ
ವಿಶ್ವ ವ್ಯಾಪಕನು॥35॥

ಭಗವಂತನ 10 ಇಂದ್ರಿಯಗಳಲ್ಲಿ ಅವನನ್ನು ಚಿಂತಿಸಿ ಮಾಡುವ ಕರ್ಮ ಕೃಷ್ಣಾರ್ಪಣೆ ಎಂದು ಸಮರ್ಪಣೆ ಮಾಡಬೇಕು.ಒಟ್ಟಾರೆ ಸಂಧಿಯಲ್ಲಿ ಹೇಳಿದ್ದೇನೆಂದರೆ ಬ್ರಹ್ಮಾದಿ ಚೇತನಗಳಲ್ಲಿಯೂ, ಪಂಚಭೂತ ಪಂಚತನ್ಮಾತ್ರಗಳಲ್ಲಿಯೂ ಜಡ ವಸ್ತುವಿನಲ್ಲಿ ಅಣುತೃಣಾದಿಯಲ್ಲಿಯೂ ಭಗವಂತನ 30 ರೂಪಗಳನ್ನು ಚಿಂತಿಸಿ ನಡೆದರೆ ಭಗವಂತ ನಮ್ಮನ್ನು ರಕ್ಷಿಸುತ್ತಾನೆ ಎಂದು ಹೇಳಿದ್ದಾರೆ. ಮುಂದಿನ ಪಂಚತನ್ಮಾತ್ರ ಸಂಧಿಯಲ್ಲಿ ಪಂಚಭೂತ ಪಂಚತನ್ಮಾತ್ರಗಳ ಬಗ್ಗೆ ಹೇಳಿದ್ದಾರೆ. ಶ್ರೀಹರಿ ಮಹಿಮೆಯನ್ನು ತಿಳಿಸುತ್ತಾ ಹರಿಕಥಾಮೃತಸಾರ ಪಾನವನ್ನು ಮಾಡುತ್ತಾ ಕಲಿಯುಗದಲ್ಲಿ ಪಾವನರಾಗೋಣ.

- ಮುಂದುವರೆಯುತ್ತದೆ

ಸಾಲಿಗ್ರಾಮವು ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಒಂದು ಪ್ರಮುಖ ಗ್ರಾಮ. ಕಾವೇರಿ ನದಿಯ ಬಲ ದಂಡೆಯ ಮೇಲೆ ತಾಲ್ಲೂಕು ಕೇಂದ್ರದಿಂದ 18 ಕಿ.ಮೀ. ದೂರ ದಲ್ಲಿದೆ. ಸಾಲಿಗ್ರಾಮವು ಕೂಡ ಪ್ರಮುಖ ವೈಷ್ಣವ ಕ್ಷೇತ್ರವಾ ಗಿದ್ದು,ಆಚಾರ್ಯ ಶ್ರೀರಾಮಾನುಜಾಚಾರ್ಯರ ತಪೋ ಭೂಮಿ. ಸಾಲಿಗ್ರಾಮವು ಗಂಗರಸರ ದ್ವಿತೀಯ ರಾಜಧಾನಿ ಯಾಗಿತ್ತು. ಹನ್ನೊಂದನೆಯ ಶತಮಾನದ ಶಾಸನದಲ್ಲಿ ಸಾಲಿ ಗಾಮೆ ಎಂದು ಕರೆದಿದ್ದು,ಕೆಲವು ಶಾಸನಗಳಲ್ಲಿ ಸಾಲಗಾಮೆ ಎಂದು ಸಾಲಿಗ್ರಾಮವನ್ನು ಕರೆದಿದೆ. ಆಚಾರ್ಯರು ರಾಮ ನಾಥಪುರದ ವಹ್ನಿ ಪುಷ್ಕರಣಿಯಲ್ಲಿ ಮಿಂದು ಸಾಲಿಗ್ರಾಮಕ್ಕೆ ಬರುತ್ತಾರೆ. ಅಲ್ಲಿ ಗೌತಮ ಋಷಿಗಳಿಂದ ಪ್ರತಿಷ್ಠಿತವಾದ ಯೋಗ ನರಸಿಂಹನನ್ನು ದರ್ಶಿಸಿ,ತನ್ನ ಆರಾಧ್ಯ ದೈವಕ್ಕೆ ಹಲವಾರು ದಿನಗಳ ಕಾಲ ಪೂಜೆ ಸಲ್ಲಿಸುತ್ತಾರೆ. ಸಾಲಿಗ್ರಾಮದಲ್ಲಿ ರಾಮಾ ನುಜಾಚಾರ್ಯರಿಗೆ ಆಂಧ್ರಪೂರ್ಣ (ವಟುಕ ನಂಬಿ) ಎಂಬ ಶಿಷ್ಯನು ದೊರೆಯುತ್ತಾನೆ. ಮುಂದೆ ಈತನೇ ತನ್ನ ಗುರುಗಳ ಜೀವನ ಚರಿತ್ರೆಯನ್ನು ಸಾರುವ "ಯತಿರಾಜ ವೈಭವ" ಎಂಬ ಗ್ರಂಥವನ್ನು ರಚಿಸಿದ್ದಾನೆ.

ಸಾಲಿಗ್ರಾಮದಲ್ಲಿ ಶ್ರೀರಾಮಾನುಜರು ವಾಸ್ತವ್ಯವಿದ್ದುದರ ಬಗ್ಗೆ ಸಾಕಷ್ಟು ಆಧಾರಗಳಿವೆ.ರಾಮಾನುಜರ ಗುಡಿಯ ತೊಲೆಯ ಮೇಲಿನ ಶಾಸನವು "ಎಂಬಾರುಂ ಆಳನುಂ ಆಚಾಮಂ" ದಾನ ನೀಡಿದಂತೆ ತಿಳಿಸುತ್ತದೆ. ಪ್ರಸಿದ್ಧ ಸಂಶೋಧಕರಾದ ಶ್ರೀ ಬಿ.ಆರ್.ಗೋಪಾಲ್‌ರವರು ತಮ್ಮ ಪುಸ್ತಕ Ramanuja in Karnataka ದಲ್ಲಿ ಶಾಸನದಲ್ಲಿ ಬರುವ "ಆಳನ್"ನನ್ನು ಆಂಡವನ್ ಆಗಿ ಓದಿ ಅವನನ್ನು ದಾಶರಥಿ ಅಥವಾ ಮುದಲಿಯಾಣ್ಣವನ್ ಎಂದು ಗುರುತಿಸಿ ರಾಮಾನುಜರ ನೇರ ಶಿಷ್ಯಪರಂಪರೆಗೆ ಸೇರುವ ಗೋವಿಂದ ಆನಂದಆಳ್ವಾರ್ ಮತ್ತು ಕಡಂಬಿ ಆಳ್ವಾನ್ ಇರಬಹುದು ಎಂಬ ಅಭಿಪ್ರಾಯ ಪಡುತ್ತಾರೆ.

(ಹೆಚ್ಚಿನ ವಿವರಗಳಿಗೆ ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ ಲೇ.ಡಾ.ಸಿ.ಯು. ಮಂಜುನಾಥ್‌ರವರ ಪುಸ್ತಕ ನೋಡಿ) ರಾಮಾನುಜರ ಜೀವನ ಚರಿತ್ರೆಯನ್ನು ತಿಳಿಸುವ ಮತ್ತೊಂದು ಗ್ರಂಥ ಗುರು ಪರಂಪರೆಯಲ್ಲಿ ಸಾಲಿಗ್ರಾಮಕ್ಕೆ ಮೊದಲು "ಸಿಂಗವರ್ ಕೋಯಿಲ್" ಎಂಬ ಹೆಸರಿದ್ದಿತೆಂದು ಅದಕ್ಕೆ ರಾಮಾನುಜರು ಬಂದ ನಂತರ ಸಾಲಿಗ್ರಾಮ ಎಂದು ಹೆಸರಿಟ್ಟರೆಂದು ಶ್ರೀ ಕೆ.ಬಿ. ರಾಮಸ್ವಾಮಿಯವರು ಅಭಿಪ್ರಾಯಪಡುತ್ತಾರೆ. (Sri Vaishnavas in hoysala period :- Hoysala dynasty,ಲೇ. ಶ್ರೀ ಕೆ.ಬಿ.ರಾಮಸ್ವಾಮಿ)

**ಶ್ರೀ ಯೋಗನರಸಿಂಹ ದೇವಾಲಯ :**

ಸಾಲಿಗ್ರಾಮದಲ್ಲಿರುವ ಪ್ರಮುಖ ದೇವಾಲಯ ಶ್ರೀಯೋಗನರಸಿಂಹ ದೇವಾಲಯ. ದೇವಾಲಯವು ಗರ್ಭಗೃಹ ಅಂತರಾಳ, ನವರಂಗ, ಪ್ರದಕ್ಷಿಣಾಪಥ, ಪ್ರವೇಶದ್ವಾರ ಮತ್ತು ರಾಜಗೋಪುರಗಳನ್ನೊಳಗೊಂಡಿವೆ.ದೇವಾಲಯದ ಹೊರಭಿತ್ತಿಯು ಅರೆಕಂಬಗಳಿಂದ ಕೂಡಿದ್ದು ಸರಳವಾಗಿದೆ. ದೇವಾಲಯವನ್ನು ಜೀರ್ಣೋದ್ಧಾರ ಮಾಡುವಾಗ ಸ್ವಲ್ಪ ಭಿನ್ನವಾದ ಮೂಲ ಯೋಗನರಸಿಂಹ ಸ್ವಾಮಿಯ ಮೂರ್ತಿಯನ್ನು ದೇವಾಲಯದ ಗರ್ಭಗುಡಿಯ

ಹಿಂದಿನ ಪ್ರಾಕಾರದಲ್ಲಿ ಸಂರಕ್ಷಿಸಿರುವುದು ಅಭಿನಂದನೀಯ. ಪ್ರಸ್ತುತ ನೂತನ ಮೂರ್ತಿಯನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಎರಡೂ ಯೋಗನರಸಿಂಹನ ಮೂರ್ತಿಗಳೂ ಅಂದವಾಗಿವೆ.

ದೇವಾಲಯದ ವಾಸ್ತುವಿನ ಮೇಲೆ ಚೋಳ ಶೈಲಿಯ ಪ್ರಭಾವವನ್ನು ವಿದ್ವಾಂಸರು ಗುರುತಿಸುತ್ತಾರೆ. ಗರ್ಭಗುಡಿಯ ಹಿಂದಿರುವ ಮೂರ್ತಿಯು ಒಂದು ಸುಂದರವಾದ ಹೊಯ್ಸಳ ಆರಂಭ ಕಾಲದ ಕಲಾಕೃತಿ. ದೇವನು ಯೋಗಪಟ್ಟಿಯನ್ನು ಧರಿಸಿ ಕುಳಿತಿದ್ದು. ಪ್ರಭಾವಳಿಯಲ್ಲಿ ದಶಾವತಾರದ ಚಿಕಣಿ ಶಿಲ್ಪಗಳಿವೆ. ದೇವನು ಧರಿಸಿರುವ ಕಿರೀಟವು ಕೊಳಗದ ಮಾದರಿಯಲ್ಲಿದ್ದು ಚೋಳ ಶೈಲಿಯನ್ನು ಹೋಲುತ್ತದೆ.

ನವರಂಗದ ಬಲಬದಿಯಲ್ಲಿ ಲಕ್ಷ್ಮೀ ದೇವಿಯ ಗುಡಿಯಿದೆ. ಇಲ್ಲಿ ಒಂದು ವೇದಿಕೆಯ ಮೇಲೆ ನಮ್ಮಾಳ್ವಾರ್, ಪೊಯ್‌ಗೈ ಆಳ್ವಾರ್, ಪೋದತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈಯಾಳ್ವಾರ್, ಕುಲಶೇಖರಆಳ್ವಾರ್, ಪೆರಿಯಾಳ್ವಾರ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ಮಧುರಕವಿಆಳ್ವಾರ್, ಕೂರತ್ತಾಳ್ವಾರ್, ಶ್ರೀರಾಮಾನುಜರು ಮುಂತಾದ ವಿಷ್ಣುಪಾರಮ್ಯವನ್ನು ಸಾರುತ್ತಿದ್ದ ಆಳ್ವಾರರುಗಳ ವಿಗ್ರಹಗಳಿವೆ. ಸಾಲಿಗ್ರಾಮದ ಶ್ರೀ ಯೋಗ ನರಸಿಂಹ ದೇವಾಲಯದ ಮಹಾದ್ವಾರದ ಬಳಿಯಿರುವ ಕ್ರಿ.ಶ. 1574 ರ ಶಾಸನದಲ್ಲಿ ಸ್ಥಳೀಯ ಪಾಳೆಯಗಾರ ಲಕ್ಷ್ಮೀಕಾಂತನ ಮಗನು ನರಸಿಂಹನ ನಿತ್ಯಪೂಜೆಗಾಗಿ ಸಾಲಿಗ್ರಾಮದ ಕಾಲುವೆಯ ಕೆಳಗಿನ ಗದ್ದೆಯನ್ನು ಭೂ ದಾನವಾಗಿ ನೀಡಿರುವ ದಾಖಲೆ ದೊರೆಯುತ್ತದೆ.

ಸಾಲಿಗ್ರಾಮದಲ್ಲಿ ಶ್ರೀರಾಮಾನುಜರ ಪಾದುಕೆಯಿರುವ ದೇವಾಲಯ, ಶ್ರೀಪಾದತೀರ್ಥ ಎಂಬ ಸಣ್ಣ ಪುಷ್ಕರಣಿ

ಯಿದೆ. ಶ್ರೀರಾಮಾನುಜರ ಪಾದುಕೆಯ ಸುತ್ತಲೂ ಆಚಾರ್ಯರ ಎಂಟು ಜನ ಶಿಷ್ಯರ ಮೂರ್ತಿಗಳನ್ನು ಇರಿಸಿದ್ದಾರೆ. ಸಾಲಿಗ್ರಾಮದ ಊರಿನಲ್ಲಿ ಶಂಭುಲಿಂಗೇಶ್ವರ ದೇವಾಲಯ ಪಾರ್ಶ್ವನಾಥ ಮತ್ತು ಅನಂತನಾಥ ಬಸದಿಗಳು ಇವೆ.

ಸಾಲಿಗ್ರಾಮದ ಶ್ರೀಯೋಗನರಸಿಂಹ ಸ್ವಾಮಿಯ ಬ್ರಹ್ಮ ರಥೋತ್ಸವವು ಪಾಂಚರಾತ್ರಾಗಮ ರೀತ್ಯ ವೈಶಾಖ ಮಾಸದಲ್ಲಿ ಶುದ್ಧ ಪಂಚಮಿಯಂದು ಆರ್ದ್ರಾ ನಕ್ಷತ್ರದಲ್ಲಿ ಶ್ರೀರಾಮಾನುಜಾಚಾರ್ಯರ ಜನ್ಮದಿನದಂದೇ ಬಹಳ ವೈಭವವಾಗಿ ನೆರವೇರುತ್ತದೆ. ಉತ್ಸವವು ಒಂಬತ್ತು ದಿನಗಳ ಕಾಲ ವೈಭವವಾಗಿ ಜರುಗುತ್ತದೆ.

ಮೊದಲಿಗೆ ವಡಹನಂಬಿ ಆಚಾರ್ಯರ ತಿರುನಕ್ಷತ್ರ, ವೈಶಾಖಶುದ್ಧ ಪ್ರಥಮ ದಿನ ಧ್ವಜಾರೋಹಣ, ಸಾಯಂಕಾಲಭೇರಿತಾಡನ, ಯೋಗ ಶಾಲ ಪ್ರವೇಶ, ದ್ವಿತೀಯಾ ದಿನ ಹೂವಿನ ಚಪ್ಪರದ ಉತ್ಸವ, ತೃತೀಯಾ ದಿನ ಪ್ರಹ್ಲಾದ ಪರಿಪಾಲನೋತ್ಸವ, ಕಲ್ಯಾಣೋತ್ಸವ, ಚೌತಿಯಲ್ಲಿ ಗರುಡೋತ್ಸವ ಮತ್ತು ಗಜೇಂದ್ರ ಮೋಕ್ಷಗಳು ನಡೆದು ವೈಶಾಖ ಶುದ್ಧ ಪಂಚಮಿಯ ದಿನ ಶ್ರೀರಾಮಾನುಜರ ತಿರುನಕ್ಷತ್ರದಂದು ಬ್ರಹ್ಮ ರಥೋತ್ಸವವು ಸಹಸ್ರಾರು ಜನ ಭಕ್ತರ ಸಮ್ಮುಖದಲ್ಲಿ ಸರ್ಕಾರಿ ಸೇವೆಯಿಂದ ಬಹು ವಿಜೃಂಭಣೆಯಿಂದ ನೆರವೇರುತ್ತದೆ. ನಂತರ ಷಷ್ಠಿಯಿಂದ ಮೊದಲಿಯಾಂಡಾನ್ ತಿರುನಕ್ಷತ್ರ, ಶಯನೋತ್ಸವ, ಅಶ್ವವಾಹನೋತ್ಸವ, ಸಪ್ತಮಿಯಲ್ಲಿ ಬೆಳಗ್ಗೆ ತೀರ್ಥೋತ್ಸವ, ರಾತ್ರಿ ಧ್ವಜ ಅವರೋಹಣ, ಪೂರ್ಣಾಹುತಿಯೊಂದಿಗೆ ಅದ್ದೂರಿಯು ವೈಭವದ ರಥೋತ್ಸವವು ಮುಕ್ತಾಯಗೊಳ್ಳುತ್ತದೆ. ಮಾರನೆಯ ದಿನ ಅಂದರೆ ವೈಶಾಖಶುದ್ಧ ಅಷ್ಟಮಿಯಂದು ಪುಷ್ಯ ನಕ್ಷತ್ರದಲ್ಲಿ ದ್ವಾದಶಾರಾಧನೆ, ಮಹಾಕುಂಭ ಪ್ರೋಕ್ಷಣೆ, ಉಭಯ ವೇದ ಶಾತ್ತುಮುರೈ, ಕೊನೆಯಲ್ಲಿ ಹನುಮಂತೋತ್ಸವಗಳು ಪಾಂಗಿತವಾಗಿ ನೆರವೇರುತ್ತವೆ.

**ಹೀಗೆ ಬನ್ನಿ:** ಮೈಸೂರು ಕೆ.ಆರ್.ನಗರ - ಕೊಣನೂರು ರಸ್ತೆಯಲ್ಲಿ ಸಾಲಿಗ್ರಾಮ ಸಿಗುತ್ತದೆ. ಸಾಲಿಗ್ರಾಮವು ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿಗೆ ಸೇರಿದ್ದು ತಾಲ್ಲೂಕು ಕೇಂದ್ರ ದಿಂದ 24 ಕಿ.ಮೀ. ದೂರದಲ್ಲಿದೆ. ಮಿರ್ಲೆಯಿಂದ ಸಾಲಿಗ್ರಾಮವು 10 ಕಿ.ಮೀ. ದೂರದಲ್ಲಿದೆ.

# ರಾಮಾಯಣದಲ್ಲಿ ಗ್ರಾಮವಾಸ್ತವ್ಯದ ಪರಿಕಲ್ಪನೆ

- ಬೇಲೂರು ರಾಮಮೂರ್ತಿ
9886061400

ಇಂದಿನ ರಾಜಕಾರಣಿಗಳು ಮಾಡುತ್ತಿರುವ ಗ್ರಾಮವಾಸ್ತವ್ಯದ ಪರಿಕಲ್ಪನೆ ರಾಮಾಯಣದಲ್ಲಿಯೇ ಇದರ ಬಗ್ಗೆ ಉಲ್ಲೇಖವಿದೆ. ಶ್ರೀರಾಮಚಂದ್ರ ಪ್ರಪ್ರಥಮವಾಗಿ ಗ್ರಾಮವಾಸ್ತವ್ಯ ಮಾಡಿದ ಯುವರಾಜ.

ವಿಶ್ವಾಮಿತ್ರರು ದಶರಥ ಮಹಾರಾಜನ ಬಳಿಗೆ ಬಂದು ತಾವು ಮಾಡುತ್ತಿರುವ ಯಾಗಕ್ಕೆ ಮಾರೀಚ ಮತ್ತು ಸುಬಾಹು ಎನ್ನುವ ರಾಕ್ಷಸರಿಂದ ಉಪಟಳವಿದೆ. ಅದರ ಪರಿಹಾರಕ್ಕೆ ನೀನು ನಿನ್ನ ಮಕ್ಕಳಾದ ರಾಮಲಕ್ಷ್ಮಣರನ್ನು ಕಳಿಸಿಕೊಡು ಎಂದು ತಮ್ಮ ಜೊತೆ ಕರೆದುಕೊಂಡು ಹೋಗುತ್ತಾರೆ. ಅದುವರೆವಿಗೂ ರಾಮಲಕ್ಷ್ಮಣರು ಅರಮನೆ,ಅರಮನೆಯ ಉದ್ಯಾನ, ಈಜುಕೊಳ, ಸೇವಕರು, ರಾಜಕುಮಾರಿಯರು, ವೈಭೋಗ ಮುಂತಾದುವುಗಳನ್ನು ಕಂಡಿದ್ದರೇ ಹೊರತು ಸ್ವಚ್ಛಂದ ಅರಣ್ಯವನ್ನು ಕಂಡವರಲ್ಲ. ಸಾಮಾನ್ಯ ಜನರನ್ನು,ರೈತಾಪಿಜನರನ್ನು ಕಂಡವರಲ್ಲ. ರೈತರ ಬದುಕಿನ ರೀತಿನೀತಿಗಳನ್ನು ತಿಳಿದಿರಲಿಲ್ಲ. ಹಳ್ಳಿಯ ಜನರ ಮುಗ್ಧತೆ, ನ್ಯಾಯಪರತೆ, ಪ್ರೀತಿ, ಅಕ್ಕರೆ ಇವುಗಳನ್ನು ಸವಿದವರಲ್ಲ. ಕಾಡನ್ನು ಕಂಡ ರಾಮನ ಮೊದಲ ಉದ್ಗಾರವೇ ಇಂತಹ ಸುಂದರವಾದ ಫಲಗಳು ತುಂಬಿದ ಮರಗಳನ್ನು, ನೀರು ಕೊಳಗಳನ್ನು ನಾನು ಹಿಂದೆಂದೂ ನೋಡಿಲ್ಲ ಎನ್ನುವುದು ಆಗ ವಿಶ್ವಾಮಿತ್ರರು,

''ನಗರಾದಿಷು ರಮ್ಯತ್ವಂ ಕೃತ್ರಿಮಂ! ನ ಚ ಸರ್ವಭೋಗ್ಯಂ! ತತೋ ನ ಯಥಾ ರ್ಥಮ್' ಎನ್ನುತ್ತಾರೆ- ಅಂದರೆ, ನಗರದ ರಮ್ಯತೆಯೇ ಕೃತಕ, ಯಥಾರ್ಥವಲ್ಲ, ಸರ್ವಭೋಗ್ಯವೂ ಅಲ್ಲ, ಬೇಲಿಯ ಒಳಗೆ ರಕ್ಷಿತವಾದ ಉದ್ಯಾನವನಗಳು,ಕೃತಕ ಮರಗಳು, ಕೆಲವರಿಗೆ ಮಾತ್ರ ಸುಖವನ್ನೀಯುವುದು. ನಗರ ಆದರೆ ಹಳ್ಳಿಗಳ ರೀತಿ ನೀತಿ ಹಾಗಲ್ಲ. ನಿಸರ್ಗದತ್ತವಾದ ಸೌಲಭ್ಯಗಳನ್ನು ಸ್ವೀಕರಿಸಿ ಕಾಡಿನಲ್ಲಿ ಬೆಳದ ಗಿಡ ಮರಗಳು ತಮ್ಮಲ್ಲಿ ಬೆಳೆದ ಹೂವು,ಹಣ್ಣುಗಳನ್ನು, ಪಶುಪಕ್ಷಿ, ಪ್ರಾಣಿ, ಮನುಷ್ಯರಿಗೆಲ್ಲಾ ವಿಕ್ರಯ ಭಾವವಿಲ್ಲದೇ ಹಂಚುತ್ತವೆ. ನಗರದ ಜನ ಎಲ್ಲವನ್ನೂ ಲಾಭಾಂಶದಿಂದ ನೋಡಿದರೆ, ಕಾನನವಾಸಿಗಳು, ಹಳ್ಳಿಗರು ತಮ್ಮ ಹೊಲಕ್ಕೆ ಮೇಯಬರುವ ಪ್ರಾಣಿಗಳನ್ನು ಓಡಿಸಲಾರರು. ವಿಶ್ವಾಮಿತ್ರರು ನಗರ ಮತ್ತು ಗ್ರಾಮಾಂತರ ಪ್ರದೇಶಗಳ ನೈಜ ಸಂಸ್ಕೃತಿಗಳ ವಿಶ್ಲೇಷಣೆ ಮಾಡುತ್ತಾ ನಾನು ರಾಮ ಲಕ್ಷ್ಮಣರನ್ನು ಕಾಡಿಗೆ ಕರೆ ತಂದಿದ್ದು ಬರೇ ಶಸ್ತ್ರ ಶಿಕ್ಷಣಕ್ಕಲ್ಲ. ಯಾಗದ ರಕ್ಷಣೆಗೂ ಅಲ್ಲ. ಬದಲಿಗೆ ಅವರು ಪರಿಪೂರ್ಣ ಮಾನವ ರಾಗಬೇಕಾದರೆ ಅವರಿಗೆ ನಗರಾಂತರದ ಪರಿಚಯವೂ ಆಗ ಬೇಕೆಂದು ಹೇಳುತ್ತಾರೆ. ಅವರ ಮಾತನ್ನು ಅನುಮೋದಿಸಿದ ಲಕ್ಷ್ಮಣ ಹೀಗನ್ನುತ್ತಾನೆ.

ಪುರೇಷು ಕೃತ್ರಿಮಂ ಸರ್ವಂ
ತತ್ಸಮತ್ಸರಮಾವಿಲಮ್
ಅತ್ರ ವಾಸ್ತವಿಕಂ ಪ್ರೇಮ್ಣಾ ರಮ್ಯಂ ಪ್ರಕೃತಿ ಶೋಭೀತಮ್



ಅಂದರೆ ಮತ್ಸರ ತುಂಬಿದ ನಗರಗಳಲ್ಲಿ ಕೃತಕತೆಯೇ ಪ್ರಧಾನವಾದರೆ ಪ್ರಕೃತಿಶೋಭಿತ ಅರಣ್ಯದಲ್ಲಿ ಎಲ್ಲವೂ ಸಹಜ ಎನ್ನುತ್ತಾನೆ. ವಿಶ್ವಾಮಿತ್ರರು ತಪೋವನದ ಪಕ್ಕದಲ್ಲಿರುವ ಹಳ್ಳಿಗಳನ್ನು ರಾಮಲಕ್ಷ್ಮಣರು ನೋಡಬೇಕೆಂದು ಅವರನ್ನು ಅಲ್ಲಿಗೆ ಕರೆದೊಯ್ಯುತ್ತಾರೆ. ಈ ಹಳ್ಳಿಗಳು ಪಟ್ಟಣಗಳ ಬಳಿಯ ಹಳ್ಳಿಗಳಂತೆ ವ್ಯವಹಾರ ಭೂಮಿಗಳಲ್ಲ. ಇಲ್ಲಿಯ ಗ್ರಾಮಸ್ಥರು ವನ್ಯಮೃಗಗಳಂತೆಯೇ ಸಾಧು ಪ್ರವೃತ್ತಿಯವರು. ಸರಳ ಜೀವಿಗಳು, ಯಾರೂ ಧರ್ಮೋಪದೇಶ ಮಾಡದಿದ್ದರೂ ಅವರಿಗೆ ಧರ್ಮ ಏನೆಂದು ಗೊತ್ತು. ಹೀಗಾಗಿ ಅವರು ಧರ್ಮವನ್ನು ಎಂದಿಗೂ ಅತಿಕ್ರಮಿಸುವವರಲ್ಲ. ಹಳ್ಳಿಗರಲ್ಲಿ ಕಲಹವೂ ಇಲ್ಲ. ಆಸೆಯೂ ಇಲ್ಲ. ಗ್ರಾಮೀಣ ಹೆಂಗಸರು ಸರ್ವದಾ ಅತಿಥಿ ಸತ್ಕಾರ ಪ್ರಿಯರು.ತಮಗೆ ಅಪಕಾರ ಮಾಡಿದವರನ್ನೂ ಕ್ಷಮಿಸಿ ಅತಿಥ್ಯ ನೀಡಿ ಸಂತೋಷಪಡಿಸಿ ಬಿಡುತ್ತಾರೆ. ಅಂತಹವರನ್ನು ನೀವು ನೋಡಲೇಬೇಕು ಎಂದು ವಿಶ್ವಾಮಿತ್ರರು ರಾಮಲಕ್ಷ್ಮಣರನ್ನು ಹಳ್ಳಿಗಳಿಗೆ ಕರೆದೊಯ್ಯುತ್ತಾರೆ. ದಾರಿಯುದ್ದಕ್ಕೂ ತೆನೆ ಬಾಗಿದ

ಹೊಲಗಳನ್ನು ತೋರಿಸಿ, ಕೃಷಿ ಭೂಮಿಯನ್ನು ಪೂಜಿಸಿ ಬೆಳೆ ತೆಗೆದು ಉಣ್ಣುವ ಸರಳ ಜೀವಿ ಕೃಷಿಕ ತನ್ನ ಭಾಗ್ಯ ದೇವೇಂದ್ರನ ಭೋಗಕ್ಕಿಂತಲೂ ಪರಮ ಎಂದು ಕೊಳ್ಳುತ್ತಾನೆ ಎಂದು ಹೇಳುತ್ತಾರೆ.

ದೇವರು ಇತ್ತದ್ದನ್ನುಂಡು ದಣಿವರಿಯದೇ,ಒಲಿದು, ನಲಿದು, ಸಿಕ್ಕಿದಷ್ಟರಲ್ಲಿ ತೃಪ್ತಭಾವರಾಗಿ ಸರ್ವಜೀವರ ಉಳಿ ವಿಗೆ ಮುಖ್ಯ ಕಾರಣರಾದವರು ಕೃಷಿಕರು. ಅವರಿಗೆ ಹೊಲವೇ ಕರ್ಮ ಭೂಮಿ. ಮಡದಿ ಮಕ್ಕಳೇ ವಿಶ್ವ, ಅತಿಥಿ ಪೂಜೆಯೇ ಧರ್ಮ, ಗೋವುಗಳೇ ಬಂಧುಬಳಗವು ಎಂದು ಕೃಷಿಕರ ಪ್ರಪಂಚದ ಪರಿಚಯ ಮಾಡಿಕೊಡುತ್ತಾರೆ. ಈ ಕೃಷಿಕರು ನಗರಕ್ಕೆ ಬಂದು ವಾಸ ಮಾಡಿದರೆ ಅವರ ಸರ್ವಗುಣಗಳೂ ನಷ್ಟವಾಗಿ ಅವರು ಕೂಡಾ ಕೃಷಿಕರ್ಮಗಳನ್ನು ಮರೆತು ನಗರದ ಅಮಾನವೀಯ ಅಹಂಕಾರ ಅವರಲ್ಲಿ ಮೂಡಿ ತಾವೇ ದೊಡ್ಡವರು ಎಂದು ಬೀಗುತ್ತಾ ನಗರದ ಎಲ್ಲ ದೋಷಗಳೂ ಅವರಲ್ಲಿ ಮನೆ ಮಾಡುವಂತೆ ಮಾಡಿಕೊಳ್ಳುತ್ತಾರೆ. ವಾಸ್ತವವಾಗಿ ಕೃಷಿಕರು ನಗರ ಜೀವನವನ್ನು ಇಷ್ಟ ಪಡುವವರಲ್ಲ. ಒಂದು ವೇಳೆ ನಗರಕ್ಕೆ ಬಂದರೂ ತಮ್ಮ ಹಳ್ಳಿಗೆ ಹಿಂದಿರುಗುವ ತವಕದಲ್ಲಿತ್ತಾರೆ.

ತನ್ನ ಶಿಷ್ಯರು ಪರಿಪೂರ್ಣರಾಗಬೇಕು ಎನ್ನುವ ಹಂಬಲದ ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ಗ್ರಾಮವಾಸ್ತವ್ಯವನ್ನು ಏರ್ಪಡಿಸುತ್ತಾರೆ. ಮಹಾರಾಜನಾಗಲೀ,ಪೌರರಾಗಲೀ, ಕೃಷಿಕರನ್ನು ಕಡೆಗಣಿಸದೇ ನೋಡಿಕೊಳ್ಳಬೇಕು ಎನ್ನುತ್ತಾರೆ ವಿಶ್ವಾಮಿತ್ರರು. ಓರ್ವ ಒಳ್ಳೆಯ ರಾಜನಿಗೆ ಗ್ರಾಮವಾಸ್ತವ್ಯ ನಿಜ ವಾದ ಶಿಕ್ಷಣವನ್ನು ಕೊಡುತ್ತದೆ ಎನ್ನುವುದು ವಿಶ್ವಾಮಿತ್ರರ ನೀತಿ ಪಾಠ. ತನ್ನ ಕರುಗಳಿಗೆ ಹಾಲುಣಿಸಲು ಓಡೋಡಿ ಬರುವ ಹಸುಗಳನ್ನೂ, ತನ್ನ ಕಂದಮ್ಮಗಳನ್ನು ಪ್ರೀತಿಯಿಂದ ನೆಕ್ಕುವ ಹಸುಗಳನ್ನು, ತನ್ನ ತಾಯಿಯನ್ನು ಕಂಡಾಗ ಕುಣಿದು ಕುಪ್ಪಳಿಸುವ ಕರುಗಳನ್ನೂ ಅವುಗಳ ನೆಗೆತವನ್ನೂ ಕಂಡು ರಾಮ ಲಕ್ಷ್ಮಣರು ಆನಂದಿಸುತ್ತಾರೆ. ಈ ಮೂಕಸಂಗ್ರಾಮದಲ್ಲಿ ಅದೆಂಥಾ ಪ್ರೀತಿಯಿದೆ, ಸೆಳೆತವಿದೆ, ಸಮೂಹ ಸುಖವಿದೆ ಎನ್ನುವುದನ್ನು ತೋರಿಸುತ್ತಾರೆ. ಗ್ರಾಮಸ್ಥರಿಗೆ ಅತಿಥಿಗಳೇ ದೇವರು, ಅಪರಿಚಿತರಾದರೂ ಅವರನ್ನು ಮನೆಗೆ ಕರೆದು ಆತಿಥ್ಯ ಕೊಡುವವರು ಹಳ್ಳಿಗರು.

ಹಳ್ಳಿಗಳ ವಾತಾವರಣದಲ್ಲಿ ಯಾವ ಆಯುಧದ ಅವಶ್ಯಕತೆಯೂ ಇಲ್ಲದ್ದರಿಂದ ರಾಮ ಲಕ್ಷ್ಮಣರು ಬಿಲ್ಲು ಬಾಣಗಳನ್ನು ಹಿಡಿದಿರುವುದನ್ನು ಕಂಡು ಅವರು ಅಚ್ಚರಿಪಡುತ್ತಾರೆ. ಈ ಕಾಡಿನಲ್ಲಿ ಯಾರೂ ಪ್ರಾಣಿಗಳನ್ನು ಕೊಲ್ಲ ಕೂಡದು ಎನ್ನುವ ಅಲಿಖಿತ ನಿಯಮವನ್ನು ರಾಮಲಕ್ಷ್ಮಣರಿಗೆ ತಿಳಿಸುತ್ತಾರೆ. ತಮ್ಮ ಬೆಳೆಗಳನ್ನು ನಾಶ ಪಡಿಸುವ ಪ್ರಾಣಿಗಳನ್ನು ಹಳ್ಳಿಗರು ಹಿಂಸಿಸುವುದಿಲ್ಲ. ಬದಲಿಗೆ ಬರೇ ಮಣ್ಣು ಹೆಂಟೆಗಳನ್ನು ಎಸೆದು, ಸದ್ದು ಗದ್ದಲ ಮಾಡಿ ಓಡಿಸುತ್ತಾರೆ.

ಓಡುವ ಈ ಮೃಗಗಳನ್ನು ನೋಡುವುದೇ ಒಂದು ಅಂದ ಎನ್ನುವ ಹಳ್ಳಿಗರು ಹಳ್ಳಿಯ ಪ್ರತಿಯೊಂದು ದೃಶ್ಯವನ್ನು ಕಂಡು ಸಂತೋಷಪಡುತ್ತಾರೆ.

ವಿಶ್ವಾಮಿತ್ರರು ವಿನಾಕಾರಣ ರಾಮಲಕ್ಷ್ಮಣರನ್ನು ಕೃಷಿ ವಲಯಕ್ಕೆ ಕರೆದು ತರಲಿಲ್ಲ. ಈ ಹಳ್ಳಿಗರು ಅಲ್ಪ ಸಂಪತ್ತಿನಿಂದ ಹೇಗೆ ಸಂತೋಷಪಡುತ್ತಾರೆ ಎನ್ನುವುದನ್ನು ಪ್ರತ್ಯಕ್ಷವಾಗಿ ತೋರಿಸಲು ಮತ್ತು ರಾಮಲಕ್ಷ್ಮಣರ ವ್ಯವಹಾರ ಜ್ಞಾನ ಬೆಳೆಸಲು ಮತ್ತು ಅವರಲ್ಲಿ ಹೆಚ್ಚು ಹೆಚ್ಚು ಮಾನವತಾವಾದವನ್ನು ತುಂಬಲು. ಪೌರರಂತೆ ತಮ್ಮ ಕೆಲಸಗಳನ್ನು ಚಾತುರ್ಯದಿಂದ ನಿರ್ವಹಿಸದ ಹಳ್ಳಿಗರು ಪ್ರಾಮಾಣಿಕವಾಗಿ, ನೇರವಾಗಿ ನಡೆಸುವ ಹಳ್ಳಿಗರ ಬದುಕನ್ನು ಅರ್ಥ ಮಾಡಿಸುವುದಕ್ಕಾಗಿ ರಾಮ ಲಕ್ಷ್ಮಣರನ್ನು ಹಳ್ಳಿಗೆ ಕರೆತಂದಿದ್ದರು.

ಇನ್ನು ಹಳ್ಳಿಗರ ಮಾತೂ ಬಹಳ ಮಧುರ. ಅವರ ನೋಟ, ಮಾತು ಎಲ್ಲದರಲ್ಲೂ ಮುಗ್ಧತೆ ಎದ್ದು ಕಾಣುತ್ತದೆ. ಅಪರಿಚಿತರನ್ನೂ, ಸಂಶಯದಿಂದ ನೋಡದವರು ಅವರು, ಗಂಡನನ್ನು ಗಂಡ ಎನ್ನಲಾರದ ಮುಗ್ಧರು ಹಳ್ಳಿಯ ಹೆಂಗಸರು. ರಾಮ ಲಕ್ಷ್ಮಣರು ಒಬ್ಬಳು ಮುದುಕಿಯನ್ನು ಮಾತಾಡಿಸಿದಾಗ ಅವಳು, ಮಮ ಪುತ್ರಾಣಾಂ ಪಿತಾ ಪುತ್ರವಧೂಮಾನೇತು ಮನ್ಯಂ ಗ್ರಾಮಗತಃ ಎನ್ನುತ್ತಾಳೆ - ಅಂದರೆ, ನನ್ನ ಮಗನ ತಂದೆ (ಅಂದರೆ ಅವಳ ಗಂಡ) ಪುತ್ರನ ಮಡದಿಯನ್ನು (ಸೊಸೆಯನ್ನು)ಕರೆತರಲು ಅನ್ಯ ಗ್ರಾಮಕ್ಕೆ ಹೋಗಿದ್ದಾರೆ. ಮಗ ಹೊಲದಲ್ಲಿರುವ ಸಸ್ಯಗಳನ್ನು ರಕ್ಷಿಸುತ್ತಿದ್ದಾನೆ, ಮೊಮ್ಮಕ್ಕಳು ಮನೆಗೆಲಸದಲ್ಲಿ ಮಗ್ನರು ಎಂದು ತನ್ನ ಕುಟುಂಬದ ವರ್ಣನೆ ಮಾಡುತ್ತಾಳೆ. ಪ್ರಕೃತಿಯ ಮಡಿಲಲ್ಲಿ ಬದುಕುವ ಮುದುಕಿ, ತಮ್ಮ ಮನಬಂದಂತೆ ಮರದ ಎಲೆಗಳನ್ನು ಮೆಲ್ಲುವ ಕಾಡು ಮೃಗಗಳು ಮತ್ತು ಅರಣ್ಯ ಕೊಡುವ ಫಲಗಳನ್ನು ಪುಷ್ಪಗಳನ್ನು ಆಸ್ತಿಯ ಹಕ್ಕಿನ ಜಂಜಾಟವಿಲ್ಲದೇ ಎಲ್ಲರೂ ಅನುಭವಿಸುವಂತಹ ಸಮಾನತೆ ಇರುವ ಹಳ್ಳಿಗಳಲ್ಲಿ

ಬದುಕು ರೋಚಕ. ಇದು ಸಮಾನತೆಯ ಸಂದೇಶ ವನ್ನು ಸಾರುತ್ತದೆ. ಇಂತಹ ಸಂದೇಶ ನಗರಗಳಲ್ಲಿ ಕಾಣುವುದಿಲ್ಲ. ಎಲ್ಲವನ್ನು ಸಂಪತ್ತಿನಿಂದಲೇ ಅಳೆ ಯುವ ನಗರದ ಜನ ಕಲ್ಮ ಶರು ಎನ್ನುತ್ತಾರೆ. ಇನ್ನು ಹಳ್ಳಿಗಳ ದೃಶ್ಯಗಳ ವರ್ಣ ನೆಯೇ ಅದ್ಭುತ. ರಾಮ ಲಕ್ಷ್ಮಣರು ಪ್ರಪ್ರಥಮವಾಗಿ ಹಳ್ಳಿಗೆ ಬಂದಾಗ ಹೊಲ ದಲ್ಲಿ ಬೆಳೆದು ನಿಂತಿರುವ ಪೈರುಗಳನ್ನು ಕಂಡು ವಿಸ್ಮಿತ ವಾಗುತ್ತಾರೆ. ತಮ್ಮನ್ನು ಹೆತ್ತು ಹೊತ್ತಿರುವ ಭೂ ದೇವಿಗೆ ಕಾಣಿಕೆಯೋ ಎಂಬಂತೆ ತಮ್ಮಲ್ಲಿ ಹೊತ್ತು ನಿಂತಿರುವ ಪೈರುಗಳನ್ನು ಭೂಮಿಗೆ ಬಾಗಿಸುತ್ತಿರುವ ಪೈರಿನ ಸಮೂಹ ಸಮ್ಮೋಹನಗೊಳಿಸುತ್ತದೆ.

ಇಡೀ ವಿಶ್ವವೇ ತಮ್ಮ ಬಂಧುಗಳು ಎಂದು ನಂಬಿರುವ ಕೃಷಿಕರು ದೇವರು ಕೊಟ್ಟ ಫಲದಲ್ಲೇ ಸಂತೃಪ್ತರಾಗಿ ತಮ್ಮ ಶ್ರಮವನ್ನೂ ಲೆಕ್ಕಿಸದೇ ಬದುಕು ತ್ತಿದ್ದಾರೆ ಎಂದು ಶತಶತಮಾನಗಳಿಂದ ಕೃಷಿಕರು ಬೆಳೆದು ಬರುತ್ತಿರುವ ಸಂಸ್ಕಾರವನ್ನು ವಿಶ್ವಾಮಿತ್ರರು ರಾಮಲಕ್ಷ್ಮಣರಿಗೆ ವಿವರಿಸು ತ್ತಾರೆ,ಮುಂದೆ ರಾಮನೂ ರಾಜನಾದಾಗ ಮನುಷ್ಯನ ಮೂಲ ಭೂತ ಅವಶ್ಯಕತೆಯಾದ ಹಸಿವನ್ನು ಇಂಗಿಸುವ ರೈತನನ್ನು, ಕೃಷಿಕನನ್ನು ಬಹಳ ಗೌರವದಿಂದ ಅಕ್ಕರೆಯಿಂದ, ಪ್ರೀತಿಯಿಂದ ನೋಡಿಕೊಳ್ಳಲಿ ಎನ್ನುವುದು ವಿಶ್ವಾಮಿತ್ರರ ಉದ್ದೇಶ.

ಇದು ರಾಮನಿಗೆ ಮಾತ್ರ ಅನ್ವಯಿಸುವಂಥದಲ್ಲ. ಬದಲಿಗೆ ಯಾವ ಯಾವ ರಾಜ್ಯದಲ್ಲಿ ಯಾರು ಯಾರು ಅಧಿಕಾರದ ಚುಕ್ಕಾಣಿ ಹಿಡಿದಿರು ತ್ತಾರೋ ಅವರೆಲ್ಲರೂ ಕಡ್ಡಾಯವಾಗಿ ಪಾಲಿಸ ಬೇಕಾದ ಒಂದು ಕ್ರಮ.

ಶ್ರೀಮಧ್ವಾಚಾರ್ಯರ ಗುರುಪರಂಪರೆಯಲ್ಲಿ ಬಂದ ಕವೀಂದ್ರತೀರ್ಥರು. ಆದರ್ಶಯತಿಗಳಾಗಿ, ಮಧ್ವಸಿದ್ಧಾಂತ ಪ್ರಚಾರ ಮಾಡಿದ ಮಹನೀಯರು! ಶ್ರೀ ವಿದ್ಯಾಧಿರಾಜರ ಪ್ರಿಯ ಶಿಷ್ಯರಾಗಿ ಅವರ ಅನೇಕ ಸುಧಾರಣೆಗಳನ್ನು ಮುಂದುವರೆಸಿದರು. ಕೆಲವೇ ವರ್ಷಗಳು ಕವೀಂದ್ರತೀರ್ಥರು ಪೀಠದಲ್ಲಿದ್ದರೂ, ಇವರು ಕೈಗೊಂಡ ಸಾಮಾಜಿಕ ಕಾರ್ಯದ ಯೋಜ ನೆಗಳು, ಹಲವಾರು ವರ್ಷಗಳಿಂದ ಇಂದಿಗೂ ಮಾದರಿ ಎನಿಸಿದೆ. ಇವರ ಸಹೋದರರಾದ ಶ್ರೀ ರಾಜೇಂದ್ರತೀರ್ಥರು, ವಿದ್ಯಾಧಿರಾಜರ ಶಿಷ್ಯರಾಗಿ ಕವೀಂದ್ರತೀರ್ಥರು ಆಶ್ರಮ ಸ್ವೀಕಾರ ಮಾಡುವ ಮೊದಲೇ, ಆಶ್ರಮ ಸ್ವೀಕಾರ ಮಾಡಿದ್ದರು ಆದರೆ, ಅವರ ಆರೋಗ್ಯ ಸರಿಹೊಂದುವ ಸಮಯಕ್ಕೆ ಶ್ರೀವಿದ್ಯಾಧಿರಾಜರ ಆದೇಶ ಮತ್ತು ಅನುಗ್ರಹ ಪಡೆದು ಕವೀಂದ್ರತೀರ್ಥರು ಅತಿ ವೈಭವದಿಂದ ವೇದಾಂತ ಸಾಮ್ರಾಜ್ಯ ಆಳಿದ ಕೀರ್ತಿ ಇವರ ಹೆಗ್ಗಳಿಕೆ ಸಮಾಜದ ಸುಧಾರಣೆಗಾಗಿ ಸದಾ ಸ್ಮರಿ ಸುತ್ತಾ ಜನರ ಉದ್ಧಾರಕ್ಕಾಗಿ,ತಮ್ಮ ಪೀಠ ಸದುಪಯೋಗ ಮಾಡಿಕೊಂಡ ಮಹಾನ್ ಯತಿಗಳು. ಶ್ರೀ ವಿದ್ಯಾಧಿರಾಜರ ಬಹುತೇಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಅವರ ಸಮಾಜಮುಖ ಕಾರ್ಯಗಳ ಕನ ಸನ್ನು ನನಸು ಮಾಡಿದರು. ಅನೇಕ ಸುಧಾರಣೆಯ ಕಾರ್ಯಗಳನ್ನು ಪೂರೈಸಿ ಕವೀಂದ್ರತೀರ್ಥರು ಸತ್ಕೀರ್ತಿಗೆ ಪಾತ್ರರಾದವರು.

ಇವರು ಪೂರ್ವಾಶ್ರಮದಲ್ಲಿ ವಿದ್ವಾನ್ ವಿಷ್ಣುದಾಸಾಚಾರ್ಯರು ಎಂದು ನಾಮಾಂಕಿತರಾಗಿ, ನ್ಯಾಯ, ವೇದಾಂತ ವಿದ್ಯೆಯಲ್ಲಿ ಅಪರಿಮಿತ ಸಾಧನೆ ಮಾಡಿ,ಪ್ರಕಾಂಡ ಪರಮಹಂಸ ಪಂಡಿತರಾಗಿ,ಅನೇಕ ಮಹಾನ್ ಪಂಡಿ ತರನ್ನು ರೂಪಿಸಿ, ಸಮಾಜಕ್ಕೆ ಸನಾತನ ಧರ್ಮರಕ್ಷಣೆ ಮಾಡಲು ಇವರು ನೀಡಿದ ಕೊಡುಗೆ ಅನನ್ಯ ಶ್ರೀಕವೀಂದ್ರತೀರ್ಥರು ಅಪರೂಪದ ಗ್ರಂಥ ವಾದ ರತ್ನಾವಳೀ ರಚಿಸಿ ಸಮಾಜಕ್ಕೆ ನೀಡಿದ ಮಹನೀಯರು. ಶ್ರೀ ಕವೀಂದ್ರತೀರ್ಥರು ಬಹುಕಾಲ ಸ್ಮರಿಸುವ ಸಮಾಜಮುಖ ಸೇವೆಯನ್ನು ಸಮಾಜಕ್ಕೆ ನೀಡಿ, ಕೀರ್ತಿ ಸಂಪಾದಿಸಿ ಮಾದರಿ ಎನಿಸಿ, ಸಾಧನಾ ಜೀವನವನ್ನು ಸಮಾಪ್ತಿಗೊಳಿಸಿ,ಪಾಂಡಿತ್ಯ ಮತ್ತು ಆಡಳಿತ ಸಾಮರ್ಥ ವನ್ನು ಪಡೆದು ತಮ್ಮ ಪೀಠವನ್ನು ಶ್ರೀವಾಗೀಶತೀರ್ಥರಿಗೆ ಒಪ್ಪಿಸಿದರು.

ಪರಮಹಂಸ ಮಧ್ವಪೀಠವನ್ನು ಅಲಂಕರಿಸಿ ಕ್ರಿ.ಶ. 1398 ರಂದು, ಹಂಪಿ-ಆನೆಗುಂದಿ ನವವೃಂದಾವನದ ಕ್ಷೇತ್ರದಲ್ಲಿ, ಚೈತ್ರ ಶುದ್ಧ ನವಮಿ, (ಶ್ರೀರಾಮನವಮೀ) ತಿಥಿಯಂದು, ಶ್ರೀ ರಾಮದೇವರನ್ನು ಭಕ್ತಿಯಿಂದ ಪೂಜಿಸಿ ಬೃಂದಾವನ ಪ್ರವೇಶ ಮಾಡಿದರು. ನವಬೃಂದಾವನದಲ್ಲಿ ಪ್ರತಿ ವರ್ಷ ಇವರ ಆರಾಧನೆ ಜರುಗುತ್ತದೆ.

ವಿಂದ್ರಾರೂಢಪಾದಾಸಕ್ತಂ ರಾಜೇಂದ್ರ ಮುನಿಸೇವಿತಂ
ಶ್ರೀ ಕವೀಂದ್ರಮುನಿಂ ವಂದೇ ಭಜತಂ ಚಂದ್ರಸನ್ನಿಭಂ॥

– ಶ್ರೀಧರ ರಾಯಸಂ

# ಮಾಸ ಮಹಿಮೆ

- ಶ್ರೀಮತಿ. ಕೆ.ವಿ. ಪದ್ಮಾವತಿ
99722 22791



ನಮ್ಮಲ್ಲಿ ವರ್ಷವನ್ನು ಹನ್ನೆರಡು ಮಾಸಗಳಾಗಿ ವಿಂಗಡಿಸಲಾಗಿದೆ. ಪ್ರತಿ ಮಾಸವೂ ತನ್ನದೇ ವೈಶಿಷ್ಟ್ಯವನ್ನು ಹೊಂದಿದೆ ನಮ್ಮ ಲೌಕಿಕ,ಅಲೌಕಿಕ ಬದುಕಿನೊಂದಿಗೆ ಬೆಸೆದುಕೊಂಡಿದೆ. ನಮ್ಮ ಜೀವನದಲ್ಲಿ ಮಾಸ ಪರಿಕಲ್ಪನೆ ಹಾಸು ಹೊಕ್ಕು. ಮಾಸಗಳ ವಿವೇಚನೆಗಳಿಲ್ಲದೆ ನಮ್ಮ ದೈನಂದಿನ ಕಾರ್ಯಗಳು ನಡೆಯಲಾರವು. ಪುರಾಣಗಳಲ್ಲಿಯೂ ಈ ಕುರಿತ ಉಲ್ಲೇಖಗಳಿವೆ. ನಮ್ಮಲ್ಲಿ 12 ಮಾಸಗಳಿದ್ದು, ಪ್ರತಿಯೊಂದಕ್ಕೂ ತನ್ನದೇ ಆದ ವೈಶಿಷ್ಟ್ಯಗಳಿವೆ. ಉತ್ತಮ ಮತ್ತು ಆರೋಗ್ಯಪೂರ್ಣ ಜೀವನಕ್ಕೆ ಮಾಸಗಳು ನೀಡಿರುವ ಸಂದೇಶಗಳು ಉಪಯುಕ್ತ. ಈ ಉತ್ಸವಗಳ ಹಿಂದೆ ಆಧ್ಯಾತ್ಮಿಕವೆಷ್ಟೋ ಅಷ್ಟೇ ವೈಜ್ಞಾನಿಕ ಮಹತ್ವಗಳೂ ಇರುವುದು ವಿಶೇಷ. ವರ್ಷದ ಹನ್ನೆರಡು ಮಾಸಗಳು ಹಾಗೂ ಅವುಗಳ ಮಹತ್ವದ ಕಿರುನೋಟವನ್ನು ತಿಳಿಸಿದ್ದಾರೆ.

### ಚೈತ್ರ - ಚಿಗುರಿನ ಮಾಸ

ವರ್ಷ ಆರಂಭವಾಗುವುದೇ ಚೈತ್ರ ಮಾಸದಿಂದ. ಈ ಮಾಸದಲ್ಲಿ ಬರುವ ಯುಗಾದಿ ಭಾರತೀಯರಿಗೆ ಹೊಸ ವರ್ಷ. ಶಿಶಿರದಲ್ಲಿ ಎಲೆ ಕಳಚಿದ ಮರಗಿಡಗಳು ಈ ಮಾಸದಲ್ಲಿ ಪುನಃ ಚಿಗು ರೊಡೆದು ತುಂಬಿಕೊಳ್ಳತೊಡಗುತ್ತವೆ. ಭಗವಂತನ ಪೂಜೆಗೆ ಬೇಕಿರುವ ಎಲೆ,ಹೂ, ನೀರು ಮತ್ತು ಹಣ್ಣು ಈ ನಾಲ್ಕು ವಸ್ತುಗಳು ಸಮೃದ್ಧಿಯಾಗಿ ದೊರೆಯುತ್ತವೆ. ಕಣ್ಣಿಗೆ ಆಹ್ಲಾದಕರ. ದೇಹಕ್ಕೆ ಆರೋಗ್ಯ ನೀಡುವ ಕಾಲವಿದು. ತ್ರೇತಾಯುಗದಲ್ಲಿ ಭಗವಂತ ಶ್ರೀರಾಮಚಂದ್ರನಾಗಿ ಭೂಮಿ ಮೇಲೆ ಅವತಾರ ಮಾಡಿದ ಮಾಸವಿದು. ರಾಮ ಭಕ್ತ ಹನುಮಂತ ಜನಿಸಿದ್ದು ಈ ಮಾಸದ ವಿಶೇಷ ದಿನಗಳು.

### ತಣ್ಣೀರ ಸ್ನಾನಕ್ಕೆ - ವೈಶಾಖ

ಮಾಸ ನಿಯಾಮಕ ಮಧುಸೂದನನ ಮಾಸವಿದು. ಬಿಸಿಲಿನ ತಾಪದಿಂದ ತತ್ತರಿಸುವುದರಿಂದ ವೈಶಾಖ ಮಾಸದ ತಣ್ಣೀರಿನ ಸ್ನಾನಕ್ಕೆ ಮಹತ್ವ ನೀಡಲಾಗಿದೆ. ವೈಶಾಖದ ಉರು ಬಿಸಿಲಿನಲ್ಲಿ ಈ ಪದ್ಧತಿ ಶುರುವಾಗಿದ್ದು ಸಹಜವೇ ವಿಶಾಖ ನಕ್ಷತ್ರದಿಂದ ಕೂಡಿದ ಹುಣ್ಣಿಮೆಯ ಮಾಸವೇ ವೈಶಾಖಮಾಸ. ವಿ ಎಂದರೆ ವಿಷ್ಣು, ಶಾಖ ಎಂದರೆ ಟೊಂಗೆ ಎಂದರ್ಥ. ವಿಷ್ಣು ಎಂಬ ವೃಕ್ಷದ ಶಾಖೋಪಶಾಖೆಗಳು ತುಂಬಿ ತುಳುಕುವ ಮಾಸವಿದು. ಮಹಾ ವಿಷ್ಣುವಿನ ಅವತಾರಗಳಾದ ಪರಶುರಾಮ, ನರಸಿಂಹ ವೇದ ವ್ಯಾಸ ಹಾಗೂ ಕೂರ್ಮ- ಈ ನಾಲ್ಕು ಅವತಾರಿಗಳು ಪ್ರಕಟಗೊಂಡ ಮಾಸವಿದು. ಶ್ರೀನಿವಾಸ ಕಲ್ಯಾಣದ ಪರ್ವ ಕಾಲವೂ ಹೌದು. ಸಮುದ್ರ ಮಥನದ ಅಕ್ಷಯ ತೃತೀಯವೂ ಇದೇ ಮಾಸದಲ್ಲಿ ಬರುತ್ತದೆ.

### ಜ್ಯೇಷ್ಠ - ಹುಣ್ಣಿಮೆ ವಿಶೇಷ

ಹೆಸರೇ ಸೂಚಿಸುವಂತೆ ಇದು ದೊಡ್ಡ ಮಾಸ. ಅದರರ್ಥ. ಹೆಚ್ಚು ದಿನ ಎಂದಲ್ಲ. ಈ ಮಾಸದ ನಿಯಾಮಕ ತ್ರಿವಿಕ್ರಮ. ತ್ರಿವಿಕ್ರಮನ ಸಂಬಂಧ ಇರುವುದರಿಂದ ದೊಡ್ಡದೆನಿಸಿ ಕೊಂಡಿದೆ. ತ್ರಿವಿಕ್ರಮ ಎಂದರೆ ಮೂರರಲ್ಲೂ ವಿಕ್ರಮ ಸಾಧಿಸಿದವ ಮೂರು ವೇದಗಳಲ್ಲಿ ಇವನದೇ ಮಹಿಮೆ, ವೇದ ಪುರಾಣ ಮತ್ತು ಇತಿಹಾಸಗಳಲ್ಲೂ ತ್ರಿವಿಕ್ರಮನದ್ದೇ ವಿಕ್ರಮ, ಜಾಗೃತ್, ಸ್ವಪ್ನ ಮತ್ತು ಸುಷುಪ್ತಿ ಈ ಮೂರು ಅವಸ್ಥೆಗಳಲ್ಲೂ, ಸಕಲ ಜೀವರಾಶಿಗಳಿಗೂ ಸ್ವತಂತ್ರ ನಿಯಾಮಕನಾದ ತ್ರಿವಿಕ್ರಮ ಮಾಸವಿದು. ಗಂಗಾ ಜಯಂತಿಯು

ಜ್ಯೇಷ್ಠ ಮಾಸದ ಜ್ಯೇಷ್ಠತೆ ಒಂದು ಪ್ರಧಾನ ನಿಮಿತ್ತ. ಆಧ್ಯಾತ್ಮಿಕ, ಆಧಿ ಭೌತಿಕ,ಆಧಿದೈವಿಕ ಮೂರು ತಾಪಗಳ ತಾಪತ್ರಯವನ್ನು ಪರಿಹರಿಸುವ ಗಂಗೆಯನ್ನು ಹರಿಸಿದ ತ್ರಿವಿಕ್ರಮನ ಮಾಸವಿದು. ಜ್ಯೇಷ್ಠ ಮಾಸದಲ್ಲಿ ಎರಡೆರಡು ಹುಣ್ಣಿಮೆ ಹಬ್ಬಗಳು ಬರುತ್ತವೆ. ಕಾರಹುಣ್ಣಿಮೆ, ಭೂಮಿ ಹುಣ್ಣಿಮೆಗಳು ಅತ್ಯಂತ ವಿಶಿಷ್ಟ ಹಬ್ಬಗಳು, ವಟಸಾವಿತ್ರಿ ಹುಣ್ಣಿಮೆ ವಿಶೇಷ.

### ಆಷಾಢ - ಮಳೆ ಮಾಸ

ಆಷಾಢದಿಂದ ಕಾರ್ತಿಕ ಮಾಸದವರೆಗೆ ಚಾತುರ್ಮಾಸ್ಯದ ಪರ್ವಕಾಲ. ಇದು ಮಳೆ ರಚ್ಚೆ ಹಿಡಿದಂತೆ ಸುರಿಯುವ ಮಾಸ. ವರ್ಷದ ಮಿಕ್ಕೆಲ್ಲ ದಿನಗಳ ಕಷ್ಟ ಸುಖಗಳು ಈ ಮಾಸದ ಮಳೆಯನ್ನೇ ಅವಲಂಬಿಸಿರುತ್ತದೆ ಎಂದರೆ ತಪ್ಪಿಲ್ಲ. ಆಷಾಢ ಏಕಾದಶಿಯಂದು ಭಗವಂತ ಪವಡಿಸಿದರೆ, ಕಾರ್ತೀಕ ಮಾಸದ ದ್ವಾದಶಿಯಂದೇ ಭಗವಂತನ ಉತ್ಥಾನ. ಹೀಗೆ ನಾಲ್ಕು ತಿಂಗಳು ಭಗವಂತ ನಿದ್ರಿಸುವ ಕಾಲ.ಅದು ಭಗವಂತನ ಯೋಗ ನಿದ್ರೆ. ಈ ನಾಲ್ಕು ತಿಂಗಳಲ್ಲಿ ಸೇವಿಸುವ ಆಹಾರದಲ್ಲೂ ನಿಯಂತ್ರಣ. ಒಂದೊಂದು ತಿಂಗಳಲ್ಲಿ ಒಂದೊಂದು ಪದಾರ್ಥ ನಿಷೇದಿಸಲಾಗಿದೆ. ನಿಷೇಧಿತ ಪದಾರ್ಥಗಳಲ್ಲಿ ಆ ಅವಧಿಯಲ್ಲಿ ತಮೋಗುಣ ಇರುತ್ತದೆ. ಆಹಾರದಲ್ಲಿನ ತಮೋಗುಣ ಮನಸ್ಸಿನೊಳಗೆ ಪ್ರವೇಶಿಸಿ ಮನಸ್ಸೂತಮೋಗುಣವಾಗುತ್ತದೆ. ಈ ಪದ್ಧತಿ ವೈಜ್ಞಾನಿಕ ದೃಷ್ಟಿಕೋನ ಹೊಂದಿದೆ. ಈ ಮಾಸದಲ್ಲಿ ಬರುವ ಏಕಾದಶಿ ತಪ್ತಮುದ್ರಾಧಾರಣೆಗೆ ಯೋಗ್ಯ ಈ ಮಾಸದ ನಿಯಾಮಕ ದೇವತೆ ಶ್ರೀಧರ. ಶಾಖ ವ್ರತಾರಂಭ, ಶಯನಿ ಏಕಾದಶಿ, ಗುರು ಪೂರ್ಣಿಮಾ, ಜಯತೀರ್ಥರ ಆರಾಧನೆ ಈ ಮಾಸದ ವಿಶೇಷ ದಿನಗಳು.

### ಶ್ರಾವಣ - ಶ್ರವಣ ಭಕ್ತಿಗೆ ಕಾಲ

ಹೃಷೀಕೇಶನಿಂದ ನಿಯಮಿಸಲ್ಪಟ್ಟ ಪವಿತ್ರ ಮಾಸವಿದು. ಪವಿತ್ರ ಗ್ರಂಥಿಗಳನ್ನೊಳಗೊಂಡ ರಕ್ಷಾಬಂಧನ ಈ ಮಾಸದಲ್ಲಿನ ಮಹತ್ವದ ದಿನ. ಭಗವಂತ ಯಾವ ಹಗ್ಗದಿಂದ ಬಲಿ ಮೊದಲಾದವರನ್ನು ಬಂಧಿಸಿದ್ದನೋ ಅದೇ ರಕ್ಷಾಬಂಧನದಿಂದ ನಾವು ಭಗವಂತನನ್ನು ಬಂಧಿಸಿ ನಮ್ಮ ಹೃದಯದಲ್ಲಿ ಸ್ಥಾಪಿಸಿಕೊಳ್ಳ

ಬೇಕು ಎಂಬರ್ಥ. ಇಂದ್ರಿಯಗಳ ನಿಯಂತ್ರಣ ಹಾಗೂ ಭಗವಂತನ ಮಹಿಮೆಗಳ ನಿರಂತರ ಶ್ರವಣಾದಿಗಳು ಈ ಮಾಸದ ಪ್ರಧಾನ ಅಂಗ. ಅದಕ್ಕೆಂದೆ ಇದಕ್ಕೆ ಶ್ರಾವಣ ಮಾಸ ಎನ್ನುತ್ತಾರೆ. ಹಯಗ್ರೀವ ದೇವರು ಅವತರಿಸಿದ್ದು, ಶ್ರೀಕೃಷ್ಣ ಜನಿಸಿದ್ದು ಇದೇ ಮಾಸದಲ್ಲಿ. ನಾಗರಪಂಚಮಿ, ಮಂತ್ರಾಲಯದ ಶ್ರೀರಾಘವೇಂದ್ರಸ್ವಾಮಿಗಳ ಆರಾಧನೆಯ ಪರ್ವಕಾಲವಿದು. ಮಳೆ ಬಿಡುತ್ತ ಬಂದು, ವಾತಾವರಣ ಉಲ್ಲಸಿತವಾಗಿ ಹಬ್ಬಗಳು ಕಳೆಗಟ್ಟುತ್ತವೆ ಈ ಮಾಸದಲ್ಲಿ.

### ಭಾದ್ರಪದ ಆಧ್ಯಾತ್ಮದ ಸಾಧನೆಯ ಪರ್ವಕಾಲ

ಭದ್ರವಾದ ಪದಗಳಿಗೆ ಸಂಬಂಧಿಸಿದ ಮಾಸವೇ ಭಾದ್ರ ಪದ. ಲೌಕಿಕ ಮಾರ್ಗದಲ್ಲಿ ಸಾಂಗವಾಗಿ ಸಾಗಬೇಕಾದರೆ ಪದವನ್ನು (ಹೆಜ್ಜೆ) ಭದ್ರವಾಗಿರಿಸಿಕೊಳ್ಳಬೇಕು. ಆಧ್ಯಾತ್ಮ ಮಾರ್ಗದಲ್ಲಿ ಸಾಗಬೇಕಾದರೆ ಪದ (ಶಬ್ದ)ಗಳಾ ಭದ್ರತೆ ಅಗತ್ಯ.ಭಕ್ತ ಹಾಗೂ ಭಗವಂತನಿಗೆ ಮಾಧ್ಯಮ ಈ ಮಾಸ. ಏಳು ದಿನ ಪರ್ಯಂತ ಅನುದಿನ ಶುಕಾಚಾರ್ಯರಿಂದ ಭಾಗವತವನ್ನು ಕೇಳಿ ಅರ್ಜುನನ ಮೊಮ್ಮಗ ಪರೀಕ್ಷಿತ ರಾಜ ಆಧ್ಯಾತ್ಮದ ಶೃಂಗವನ್ನೇರಿದ ಪರ್ವಕಾಲವಿದು.

ವಿಷ್ಣು ವಾಮನ ರೂಪ ತಾಳಿ, ಬಲಿಯನ್ನು ಪಾತಾಳಕ್ಕೆ ತುಳಿದ ಹಾಗೂ ವಿಘ್ನ ನಿವಾರಕ ವಿಘ್ನೇಶ್ವರ ಅವತರಿಸಿದ ಮಾಸವಿದು ಅನಂತ ಫಲ ನೀಡುವ ಅನಂತಪದ್ಮನಾಭ ವ್ರತ,ಗಣೇಶಚತುರ್ಥಿ, ಭೂವರಾಹ

ಜಯಂತಿ, ಋಷಿಪಂಚಮಿ, ವಾಮನ ಜಯಂತಿ, ಪಕ್ಷಮಾಸ, ಸರ್ವಪಿತೃ ಅಮಾವಾಸ್ಯೆ ಈ ಮಾಸದ ವಿಶೇಷ ದಿನಗಳು.

### ಅಶ್ವಯುಜ-ಸುಖದ ಕಾಲ

ಯಾವ ತಿಂಗಳ ಹುಣ್ಣಿಮೆ ದಿನ ಅಶ್ವಿನಿ ನಕ್ಷತ್ರ ಕಂಗೋಳಿಸುವುದೋ ಅದುವೇ ಅಶ್ವಿನಿಮಾಸ. ಶರತ್ ಋತುವಿನ ಪೂರ್ವಾರ್ಧ ಈ ಮಾಸ ದವಸ ಧಾನ್ಯಗಳು ಹುಲುಸಾಗಿ ಬೆಳೆದು ಕಟಾವಿಗೆ ಸಿದ್ಧವಾಗುವುದೇ ಈ ಋತುವಿನಲ್ಲಿ ದವಸ ಧಾನ್ಯಗಳನ್ನು ಹೊತ್ತ ಶರದ್ ಋತುವಿನ ಮಹಾಕಾಲವನ್ನೇ ದೇವತೆಗಳು ಹವಿಸ್ಸನ್ನಾಗಿ ಚಿಂತನೆ ಮಾಡಿ ಭಗವಂತನನ್ನು ಆರಾಧಿಸಿದ ಮಾಸವಿದು.

ಈ ಮಾಸದ ಪ್ರಾರಂಭದ 10ದಿನಗಳು ದಸರಾ ಸಂಭ್ರಮ. ನವರಾತ್ರಿ,ವಿಜಯದಶಮಿ,ಮಧ್ವಜಯಂತಿ, ಕೋಜಾಗರಿ ಲಕ್ಷ್ಮೀ ಪೂಜೆ, ದೀಪಾವಳಿ ಅಮಾವಾಸ್ಯೆ ಈ ಮಾಸದ ವಿಶೇಷ ದಿನಗಳು.

### ಕಾರ್ತೀಕ - ಬೆಳಕಿನ ದಿನಗಳು

ಕೃತ್ತಿಕಾ ನಕ್ಷತ್ರದಿಂದ ಕೂಡಿರುವ ಹುಣ್ಣಿಮೆ ಇರುವ ಮಾಸಕ್ಕೆ ಕಾರ್ತೀಕ ಮಾಸ ಎನ್ನುತ್ತಾರೆ. ಕೃತ್ತಿಕಾ ಎಂದರೆ ಕತ್ತರಿ. ಅದಕ್ಕಾಗಿಯೇ ಭರಣಿ, ಕೃತ್ತಿಕಾ ನಕ್ಷತ್ರ ದೂರವಿರಿಸಿಕೊಂಡೇ ಮಂಗಲಕಾರ್ಯ ನಡೆಸುತ್ತಾರೆ. ಕತ್ತಲೆಯನ್ನು ಕತ್ತರಿಸುವ ಸಾಮರ್ಥ್ಯ ಈ ಮಾಸಕ್ಕಿದೆ. ಈ ಮಾಸದಲ್ಲಿ ದೀಪೋತ್ಸವಕ್ಕೆ ಮಹತ್ವ. ಬೆಳಕಿನ ಸಂಕೇತವಾಗಿರುವ ದೀಪಾವಳಿ ಪಾಡ್ಯ ಮತ್ತು ತುಳಸಿ ವಿವಾಹ ಇದೇ ಮಾಸದಲ್ಲಿ ಬರುತ್ತವೆ. ಬಲಿಪಾಡ್ಯ,ಗೋಪೂಜೆ,ಚಾತುರ್ಮಾಸ್ಯ ವ್ರತ ಸಮಾಪ್ತಿ, ವೈಕುಂಠಚತುರ್ದಶಿ, ಪ್ರಭೋಧಿನಿ ಏಕಾದಶಿ, ಧನ್ವಂತರಿ ಜಯಂತಿ, ಕಾರ್ತಿಕ ಪೂರ್ಣಿಮಾ ಈ ಮಾಸದಲ್ಲಿ ವಿಶೇಷ ದಿನಗಳು.

### ಮಾರ್ಗಶಿರ - ಅಗ್ರ ಮಾಸ

ಶಿರಸ್ಸು ಹುಡುಕಾಟದಲ್ಲಿ ತೊಡಗುವ ಮಾಸವಿದು. ತಲೆ - ಮನಸ್ಸು ಒಂದಾಗುವ ಕಾಲ. ಮೃಗಶಿರಾ ನಕ್ಷತ್ರದ ದೇವತೆ ಚಂದ್ರ ಹಾಗೂ ಮನಸ್ಸಿನ ದೇವತೆ ಮನಃ ಪೂರ್ವಕವಾಗಿ ತಲೆ ಇಟ್ಟು ಚಿಂತಿಸಬೇಕಾದ ತತ್ತ್ವದ ಅನ್ವೇಷಣೆ ಕಾಲವಿದು. ಶ್ರೀಕೃಷ್ಣನಿಂದ ಭಗವದ್ಗೀತೆ ಬೋಧಿಸಲ್ಪಟ್ಟ ಮಾಸ. ಭಗವದ್ಗೀತೆಯಲ್ಲಿ ಸ್ವಯಂ ಭಗವಂತನೇ ನಾನು ಮಾಸಗಳಲ್ಲಿ ಮಾರ್ಗಶಿರ ಮಾಸವಾಗಿದ್ದೇನೆ ಎಂದು ಘೋಷಿಸಿಕೊಂಡಿದ್ದಾನೆ. ಅವಧೂತ ಗುರುದತ್ತಾತ್ರೇಯ ಅವತರಿಸಿದ ಮಾಸವಿದು.

### ಪುಷ್ಯ - ಬೆನ್ನು ಬಾಗಿಸುವ ಮಾಸ

ಯಾವುದು ಪುಷ್ಟಿ ನೀಡುವುದೋ ಅದುವೇ ಪುಷ್ಯಮಾಸ. ಆತ್ಮದ ಪುಷ್ಟಿಗೆ ಹೆಚ್ಚಿನ ಪ್ರಚೋದಕವಾಗಿದೆ. ಧನುರ್ಮಾಸ ಪೂಜೆ ಈ ಮಾಸದ ವೈಶಿಷ್ಟ್ಯ. ಚಳಿಯಲ್ಲಿ ತಣ್ಣೀರಲ್ಲಿ ಮುಳುಗಬೇಕು. ನಿದ್ದೆಗೆಡಬೇಕು. ದೇವರಿಗೆ ಹುಗ್ಗಿ ನೈವೇದ್ಯ ಸಮರ್ಪಿಸಬೇಕು. ಧನುರ್ಮಾಸದಲ್ಲಿ ಪೂಜೆಯದೇ ವೈಶಿಷ್ಟ್ಯ. ಚಳಿಗೆ ಬೆನ್ನು ಬಿಲ್ಲಿನಂತೆ ಬಾಗುತ್ತದೆಯೆಂದೇ ಈ ಹೆಸರು ಬಂದಿದೆ. ಇದು ಜಾತ್ರೆಗಳ ಮಾಸ.

### ಮಾಘಸ್ನಾನವ ಮಾಡಿ

ಮಾಘ ಮಾಸ ಸ್ನಾನಕ್ಕೆ ಪ್ರಶಸ್ತವಾದ ಮಾಸ. ಕೊರೆಯುವ ಚಳಿಯಲ್ಲೂ ಬ್ರಾಹ್ಮಿ ಮುಹೂರ್ತದಲ್ಲಿ ಪುಣ್ಯ ನದಿಗಳಲ್ಲಿ ಸ್ನಾನ ಮಾಡುವ ಪದ್ಧತಿ ಇದೆ. ತನುವಿನಿಂದ ಮಾಡಿದ ಪಾಪಗಳು, ಮನಸ್ಸಿನಿಂದ ಮಾಡಿದ ಪಾಪಗಳ ಕೊಳೆಯನ್ನು ಈ ಮಾಸದಲ್ಲಿ ಮಾಡಿದ ಸ್ನಾನ ಕಳೆಯುತ್ತದೆ. ಶ್ರೀ ಮಧ್ವಾಚಾರ್ಯರು ಬದರಿ ಪ್ರವೇಶ ಮಾಡಿದ ಮಾಸವಿದು. ವಸಂತ ಪಂಚಮಿ, ರಥ ಸಪ್ತಮಿ, ವ್ಯಾಸಪೂರ್ಣಿಮೆ,ಮಹಾಶಿವರಾತ್ರಿ ಈ ಮಾಸದಲ್ಲಿ ವಿಶೇಷ ದಿನಗಳು.

### ಫಾಲ್ಗುಣ ಮಾಸ

ಈ ಮಾಸವನ್ನು ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಈ ಮಾಸ ಅನಂತ ಫಲ ನೀಡುತ್ತದೆ. ಅರ್ಜುನ ಜನಿಸಿದ ಮಾಸವಿದು. ವ್ಯಾಸರಾಜರ ಹಾಗೂ ವಾದಿರಾಜರ ಆರಾಧನೆ,ರಾಘವೇಂದ್ರರ ಪಟ್ಟಾಭಿಷೇಕ, ರಾಯರ ಜನ್ಮದಿನ, ಹೋಳಿ ಹಬ್ಬ ಇವು ಮಾಸ ವಿಶೇಷಗಳು.

**ಕ್ರಿಸ್ತಾಬ್ದ 2024 ತಿಂಗಳ ರಜಾದಿನಗಳು**

1. ಸೂರ್ಯ
2. ಎಕ್ಕದ ಎಲೆ
3. ಮಾಘಮಾಸವು
4. ಯೋಗಾನರಸಿಂಹ ದೇವಾಲಯ
5. ನಾರದರು
6. ಚಿತ್ರಭಾನುಸಂವತ್ಸರ,ಪುಷ್ಯ ಬಹುಳ ಅಷ್ಟಮಿ
7. ಹದಿನೈದು
8. ಜಯದೇವ, ಸತ್ಯವತಿ
9. ಸೂರ್ಯನಾರಾಯಣ
10. ಸೂರ್ಯ
11. ಗೋವಿಂದ ರಾಜ
12. ಎರಡು
13. ಶಂಕಣು
14. ಲಾಲಾಬಹದ್ದೂರ್ ಶಾಸ್ತ್ರೀ
15. ರತ್ನದ ಮೂಗುತಿ

**16.02.2024 ರಂದು ತಿರುಮಲೆಯಲ್ಲಿ ನಡೆದ ರಥಸಪ್ತಮಿ ಸಂದರ್ಭವಾಗಿ ಶ್ರೀಮಲೆಯಪ್ಪ ಸ್ವಾಮಿ ಸಪ್ತವಾಹನಗಳಲ್ಲಿ ಮೆರವಣಿಗೆ ಹೊರಟ ದೃಶ್ಯಮಾಲಿಕೆ.**

# 01.03.2024 ರಿಂದ 10.03.2024 ರ ವರೆಗೆ ನಡೆದ ಶ್ರೀಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ



## 29.02.2024 ರಿಂದ 08.03.2024 ರ ವರೆಗೆ ನಡೆದ ಶ್ರೀನಿವಾಸಮಂಗಾಪುರಂ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳ ದೃಶ್ಯಮಾಲಿಕೆ.

**ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ರವರು**



17.02.2024 ರಿಂದ 22.02.2024 ರ ವರೆಗೆ ನಡೆದ ಶ್ರೀಗೋವಿಂದರಾಜ ಸ್ವಾಮಿಯವರ ಆಲಯದ ಪುಷ್ಕರಿಣಿಯಲ್ಲಿ ನಡೆದ ತೆಪ್ಪೋತ್ಸವಗಳ ದೃಶ್ಯಮಾಲಿಕೆ

08.02.2024 ರಿಂದ 10.02.2024ರ ವರೆಗೆ ತಿ.ತಿ.ದೇ ದಾಸ ಸಾಹಿತ್ಯ ಪ್ರಾಜೆಕ್ಟ್ ಮುಖಾಂತರ ತಿರುಮಲೆಯಲ್ಲಿ ನಡೆದ ಶ್ರೀಪುರಂದರ ದಾಸರ ಆರಾಧನೆ ಮಹೋತ್ಸವ ದೃಶ್ಯ.

09.03.2024 ರಂದು ತಿರುಪತಿ, ಶ್ರೀ ಕಪಿಲೇಶ್ವರ ಸ್ವಾಮಿಯವರ ಆಲಯದಲ್ಲಿ ನಡೆದ ಶಿವಪಾರ್ವತಿಯರ ಕಲ್ಯಾಣೋತ್ಸವದ ದೃಶ್ಯಮಾಲಿಕೆ

10-03-2024 ರಂದು ತಿ.ತಿ.ದೇ., ವತಿಯಿಂದ ಶ್ರೀ ಜ್ಞಾನಪ್ರಸೂನಾಂಬ ಶ್ರೀ ಕಾಳಹಸ್ತೀಶ್ವರ ಸ್ವಾಮಿಯವರಿಗೆ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ರವರು

04.03.2024 ರಂದು ಶ್ರೀ ಶೈಲ ಮಲ್ಲನ್ನ ಸ್ವಾಮಿಯವರಿಗೆ ತಿ.ತಿ.ದೇ.ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ ಐ.ಡಿ.ಈ.ಎಸ್.ರವರು.

# ಪ್ರಖ್ಯಾತ ಶ್ರೀರಾಮ ಕ್ಷೇತ್ರ ದರ್ಭ ಶಯನ

– ಡಾ॥ ಸುಮನ ಬದರೀನಾಥ್
94820 94855

ಶ್ರೀಮನ್ನಾರಾಯಣನ ಅರ್ಚಾವತಾರವಾದ ಶ್ರೀಸೀತಾ ರಾಮ ಸ್ವಾಮಿಯ ದಿವ್ಯ ದೇಗುಲಗಳು ಉತ್ತರದಲ್ಲಿ ಅಯೋಧ್ಯೆ ಯಿಂದ ದಕ್ಷಿಣದಲ್ಲಿ ರಾಮೇಶ್ವರದವರೆಗೆ ಭಾರತ ದೇಶದ ಉದ್ದ ಗಲಕ್ಕೂ ಹರಡಿವೆ. ಅಯೋಧ್ಯೆ, ಚಿತ್ರಕೂಟ, ಹಂಪಿ, ಪಂಚವಟಿ, ದರ್ಭಶಯನ,ರಾಮೇಶ್ವರ ಮುಂತಾದ ಕ್ಷೇತ್ರಗಳು ರಾಮಾಯಣದ ಕಾಲದಿಂದಲೂ ಪ್ರಸಿದ್ಧವಾಗಿದ್ದರೆ,ಭದ್ರಾಚಲ,ಒಂಟಿಮಿಟ್ಟ, ಚುಂಚ ನಕಟ್ಟೆ,ಕುಂಭಕೋಣಂ ಮುಂತಾದ ಸ್ಥಳಗಳು ಅಲ್ಲಿರುವ ಶ್ರೀರಾಮ ದೇವಾಲಯಗಳಿಂದ ಪ್ರಖ್ಯಾತವಾಗಿವೆ.

ತಿರುಪ್ಪುಲ್ಲಾನಿ ಎಂದೂ ಹೆಸರಿರುವ ಪ್ರಸಿದ್ಧವಾದ ಶ್ರೀರಾಮ ಕ್ಷೇತ್ರ ದರ್ಭಶಯನ ಭಾರತದೇಶದ ದಕ್ಷಿಣದ ತುತ್ತ ತುದಿಯಲ್ಲಿ ತಮಿಳುನಾಡಿನಲ್ಲಿದೆ. ರಾಮೇಶ್ವರದ ಯಾತ್ರೆ ಮಾಡುವವರೆಲ್ಲರೂ ನೋಡಲೇಬೇಕಾದ ಯಾತ್ರಾಸ್ಥಳವಾಗಿದೆ. ಸಾಮಾನ್ಯವಾಗಿ ನಾವು ದರ್ಶನ ಮಾಡುವಾಗ ಕೋದಂಡರಾಮನನ್ನು , ಪಟ್ಟಾಭಿ ರಾಮನನ್ನು ಸಂದರ್ಶಿಸುತ್ತೇವೆ. ಆದರೆ ದರ್ಭಶಯನನಲ್ಲಿ ಶ್ರೀರಾಮ ಸ್ವಾಮಿಯು ಶ್ರೀರಂಗನಾಥನಂತೆ ಮಲಗಿರುವ ಭಂಗಿ ಯಲ್ಲಿ ಕಂಡು ಬರುತ್ತಾನೆ. ಶ್ರೀರಾಮನು ಶಯನಭಂಗಿಯಲ್ಲಿರುವ ದೇಗುಲ ಇಡೀ ಭಾರತದೇಶದಲ್ಲಿಯೇ ಮತ್ತೆಲ್ಲೂ ಕಂಡು ಬರು ವುದಿಲ್ಲ. ಅಂತಹ ಅಪರೂಪದ ದೇವಸ್ಥಾನವಿದಾಗಿದೆ.

ದರ್ಭಶಯನ ರಾಮನಾಥಪುರದಿಂದ ಸುಮಾರು 10 ಕಿ.ಮೀ. ದೂರದಲ್ಲಿದೆ. ತ್ರೇತಾಯುಗ,ದ್ವಾಪರಯುಗ, ಕಲಿ ಯುಗ ಮೂರು ಯುಗಗಳಲ್ಲೂ ಪ್ರಸಿದ್ಧವಾದ, ಸುದೀರ್ಘ ವಾದ ಇತಿಹಾಸವಿರುವ ಪುಣ್ಯಕ್ಷೇತ್ರ, ವಿಶಾಲವಾದ ಭವ್ಯ ವಾದ ದೇವಾಲಯ. ಈ ದೇವಾಲಯದಲ್ಲಿ ಭಗವಂತನ ಎರಡು ಸನ್ನಿಧಿಗಳಿವೆ. ಆದಿ ಜಗನ್ನಾಥ ಹಾಗೂ ಶ್ರೀರಾಮ ಸ್ವಾಮಿ,ಎರಡೂ ಸನ್ನಿಧಿಗಳೂ ಅತ್ಯಂತ ಸುಂದರವಾಗಿ ಭಕ್ತಿ ಭಾವ ಪ್ರಚೋದಕವಾಗಿ ಇವೆ.

ದರ್ಭಶಯನಗೆ ಸುದೀರ್ಘವಾದ ಸ್ಥಳಪುರಾಣವಿದೆ. ಪ್ರಾಚೀನ ಕಾಲದಲ್ಲಿ ಪುಲ್ಲವ, ಕಲವ, ಕಣ್ವ ಎಂಬ ಮೂರು ಋಷಿಗಳು ಈ ಸ್ಥಳದಲ್ಲಿ ಕಠಿನ ತಪಸ್ಸನ್ನಾಚರಿಸಿ ಮಹಾ ವಿಷ್ಣುವನ್ನು ಪ್ರಸನ್ನಗೊಳಿಸಿಕೊಂಡರು. ವಿಷ್ಣುವು ಪುಲ್ಲವ ಋಷಿಯ ಪ್ರಾರ್ಥನೆಗನುಗುಣವಾಗಿ ಇಲ್ಲಿಯೇ ನೆಲಸುವೆ ನೆಂದು ವರವಿತ್ತನು. ಅದರಿಂದ ಈ ಸ್ಥಳಕ್ಕೆ ಪುಲ್ಲಾರಣ್ಯ ವೆಂಬ ಹೆಸರಾಯಿತು. ಶ್ರೀರಾಮನು ಲಂಕೆಗೆ ಹೊರಡುವ ಮುನ್ನ ಆದಿ ಜಗನ್ನಾಥನಿಗೆ ಪೂಜೆ ಸಲ್ಲಿಸಿದನೆಂದೂ ಆದಿಜಗ ನ್ನಾಥನು ಅವನಿಗೆ ಅಜೇಯನಾದ ಬಿಲ್ಲನ್ನು ಇತ್ತನೆಂದೂ ಸ್ಥಳ ಪುರಾಣ ಹೇಳುತ್ತದೆ. ಆದಿಜಗನ್ನಾಥನಿಗೆ ಇಲ್ಲಿ ಮೊದಲ

ಪೂಜೆ ಸಲ್ಲುತ್ತದೆ. ದರ್ಭಶಯನ ಪ್ರಸಿದ್ಧವಾದ ಶ್ರೀರಾಮಕ್ಷೇತ್ರವಾಗಿದೆ. ಬೃಹತ್ತಾದ ಪುರುಷ ಪ್ರಮಾಣದ ಶ್ರೀರಾಮನ ವಿಗ್ರಹವು ದರ್ಭೆಗಳ ಹಾಸಿಗೆಯ ಮೇಲೆ ಮಲಗಿರುವ ಭಂಗಿಯಲ್ಲಿದೆ. ಹಾವಿನ ಹೆಡೆ ಛತ್ರಿಯೋಪಾದಿಯಲ್ಲಿದೆ. ಸ್ಥಳ ಪುರಾಣದಂತೆ ಶ್ರೀರಾಮನು ಸಮುದ್ರರಾಜನನ್ನು ದಾರಿ ಬಿಡಲು ಪ್ರಾರ್ಥಿಸಿ ಮೂರು ದಿನ ನೆಲದ ಮೇಲೆ ದರ್ಭೆಗಳನ್ನು ಹಾಸಿ ನಿರಶನ ಮಾಡುತ್ತಾ ಮಲಗುತ್ತಾನೆ. ಸಮುದ್ರರಾಜನು ಒಲಿಯದಿರಲು ಬಾಣಗಳಿಂದ ಸಮುದ್ರ ವನ್ನು ಶೋಷಿಸುವೆನೆಂದು ಘರ್ಜಿಸುತ್ತಾನೆ. ಸಮುದ್ರರಾಜನು ಶರಣಾಗಿ ಸೇತುವೆಯನ್ನು ಕಟ್ಟುವಂತೆ ವಿಜ್ಞಾಪಿಸಿಕೊಳ್ಳುತ್ತಾನೆ. ಶ್ರೀರಾಮನು ವಾನರೆಲ್ಲರ ಸಹಾಯದಿಂದ ಸಮುದ್ರಕ್ಕೆ ಸೇತುವೆಯನ್ನು ನಿರ್ಮಿಸುತ್ತಾನೆ. ಶ್ರೀರಾಮನು ದರ್ಭೆಯ ಮೇಲೆ ಮಲಗಿದ ಸ್ಥಳವೇ ದರ್ಭಶಯನವೆಂದು ಪ್ರಖ್ಯಾತವಾಯಿತು.

ದೇವಾಲಯ ವಿಶಾಲವಾಗಿಯೂ ಭವ್ಯವಾಗಿಯೂ ಇದೆ. ಇಲ್ಲಿನ ಶಿಲ್ಪಕಲೆ ಬಹು ಸುಂದರವಾಗಿದೆ. ದೇವಸ್ಥಾನದ ಸುತ್ತಮುತ್ತಲೂ ಹಂಸತೀರ್ಥ, ಚಕ್ರತೀರ್ಥ, ಅಗಸ್ತ್ಯತೀರ್ಥ,ಹಿರಣ್ಯ ತೀರ್ಥ ಮುಂತಾದ ಅನೇಕ ತೀರ್ಥಗಳಿವೆ. ಅವುಗಳಲ್ಲಿ ಚಕ್ರ ತೀರ್ಥವು ಹೆಚ್ಚು ಪ್ರಸಿದ್ಧವಾದುದು. ಈ ತೀರ್ಥದಲ್ಲಿ ಭಗವಂತನ ಆಯುಧವಾದ ಸುದರ್ಶನ ಚಕ್ರದ ಸಾನ್ನಿಧ್ಯವಿದೆಯೆಂದು ಹೇಳುತ್ತಾರೆ. ಬೇಸಿಗೆಯಲ್ಲಿ ಈ ಕೊಳದ ನೀರು ಕೆಂಪು ಬಣ್ಣ ತಾಳುತ್ತದೆ, ಹಾಗೂ ದಡದ ಮೇಲೆ ಉಪ್ಪಿನಂತಹ ವಸ್ತು ಶೇಖರಗೊಳ್ಳುತ್ತದೆ. ಇದರಲ್ಲಿ ಔಷಧೀಯ ಗುಣಗಳಿರುತ್ತದೆಂದು ಸಾವಿರಾರು ಜನ ಬಂದು ಈ ವಸ್ತುವನ್ನು ಸಂಗ್ರಹಿಸುತ್ತಾರೆ. ಸ್ಥಳ ವೃಕ್ಷ ವಿಶಾಲವಾಗಿ ಹಬ್ಬಿ ಬೆಳೆದಿರುವ ಅಪರೂಪದ ಜಾತಿಯ ಅಶ್ವತ್ಥ ವೃಕ್ಷ ಎಲ್ಲವೂ ದರ್ಶನೀಯವಾಗಿವೆ. ವಿಭೀಷಣನು ಶ್ರೀರಾಮಚಂದ್ರನಿಗೆ ಶರಣಾಗತನಾದ ಸ್ಥಳವು ಇದೇ ಆಗಿದ್ದು ಇದಕ್ಕೆ ಶರಣಾಗತಿ ಸ್ಥಳ ಎಂದೂ ಕರೆಯುತ್ತಾರೆ. ಪ್ರಪತ್ತಿಯನ್ನು ಆಚರಿಸುವವರಿಗೆ ಈ ಸ್ಥಳ ಬಹು ಮಹತ್ವ ಪೂರ್ಣವಾದುದು ಎಂದು ಹೇಳುತ್ತಾರೆ.

ಶ್ರೀರಾಮನು ಪುಷ್ಪಕವಿಮಾನದಲ್ಲಿ ಅಯೋಧ್ಯೆಗೆ ಹಿಂತಿರುಗಿ ಹೋಗುತ್ತಿರುವಾಗ ದರ್ಭಶಯನದಲ್ಲಿ ವಿಮಾನ ಇಳಿಸಿ ಸೀತೆಗೆ ಈ ಸ್ಥಳವನ್ನು ತೋರಿಸಿದನಂತೆ ಸೀತೆಯಿಂದ (ಲಕ್ಷ್ಮೀ ದೇವಿಯಿಂದ) ಅನುಗ್ರಹಿಸಲ್ಪಟ್ಟ ಕಾರಣ ಈ ಕ್ಷೇತ್ರ ಮತ್ತು ಮಹಿಮೆ ಪಡೆದು, ದರ್ಶನೀಯವಾಯಿತು.

ಶ್ರೀರಾಮಸ್ವಾಮಿಯು ಸೇತುವೆಯನ್ನು ಕಟ್ಟಲು ಪ್ರಾರಂಭಿಸಿದ ಸ್ಥಳವೇ ಆದಿಸೇತು ಅಥವಾ ಸೇತುಕ್ಕರೈ ಎಂದು ಪ್ರಸಿದ್ಧವಾಯಿತು. ಈಗಲೂ ಇಲ್ಲಿ ಸೇತುವೆಯ ಅವಶೇಷಗಳನ್ನು ಕಾಣಬಹುದು. ಆದಿಸೇತುವಿನ ದರ್ಶನ ಬಹು ಪುಣ್ಯಪ್ರದವಾದುದು. ಸೇತುಬಂಧವೆಂದು ಖ್ಯಾತವಾದ ಈ ಸ್ಥಳ ಅತ್ಯಂತ ಪವಿತ್ರವಾಗಿದ್ದು ಎಲ್ಲಾ ಪಾತಕಗಳನ್ನು ನಾಶ ಮಾಡುತ್ತದೆ. ಸೇತುಕ್ಕರೈ ರಾಮನಾಥಪುರದಿಂದ ದಕ್ಷಿಣಕ್ಕೆ ಸುಮಾರು 12 ಕಿ.ಮೀ.ದೂರದಲ್ಲಿದೆ. ದರ್ಭಶಯನದಿಂದ 2 ಕಿ.ಮೀ. ದೂರದಲ್ಲಿದೆ. ಸೇತುಕ್ಕರೈನಲ್ಲಿ ಸಮುದ್ರ ತೀರದಲ್ಲಿ ಒಂದು ಸಣ್ಣ ಆಂಜನೇಯನ ಗುಡಿಯಿದೆ. ಇಲ್ಲಿ ಸಮುದ್ರದಲ್ಲಿ ಸ್ನಾನ ಮಾಡುವುದು ಬಹು ಶ್ರೇಷ್ಠ.

ದರ್ಭಶಯನದಲ್ಲಿ ರಥೋತ್ಸವಗಳಾದಾಗ ಉತ್ಸವ ಮೂರ್ತಿಗಳನ್ನು ಇಲ್ಲಿಗೆ ಕರೆತರುತ್ತಾರೆ. ದರ್ಭಶಯನದಲ್ಲಿ ವರ್ಷದಲ್ಲಿ ಎರಡು ಬಾರಿ ರಥೋತ್ಸವಗಳು ನಡೆಯುತ್ತವೆ. 1.ತಮಿಳು ವರ್ಷದ ಆದಿಯಲ್ಲಿ ಶ್ರೀರಾಮನಿಗಾಗಿ 2.ತಮಿಳು ವರ್ಷದ ಕೊನೆಯಲ್ಲಿ ಆದಿಜಗನ್ನಾಥನಿಗಾಗಿ, ಎರಡೂ ಸಮಯಗಳಲ್ಲೂ ಉತ್ಸವ ಮೂರ್ತಿಗಳನ್ನು ಸಮುದ್ರತೀರಕ್ಕೆ ಕರೆತರುತ್ತಾರೆ.

ಫುಲ್ಲವ ಋಷಿಗೆ ಭಗವಂತ ದರ್ಶನವಿತ್ತುದರ ಸಂಕೇತವಾಗಿ ಫಾಲ್ಗುಣಮಾಸದಲ್ಲಿ ಬ್ರಹ್ಮೋತ್ಸವ ಜರಗುತ್ತದೆ.ಎಲ್ಲ ಉತ್ಸವಗಳೂ ವಿಜೃಂಭಣೆಯಿಂದ ನಡೆದು ಸಾವಿರಾರು ಭಕ್ತ ಜನ ಸೇರುತ್ತಾರೆ. ವಾದಿರಾಜರು, ವಿಜಯದಾಸರು, ಪುರಂದರದಾಸರೇ ಆದಿಯಾಗಿ ಹರಿದಾಸವರೇಣ್ಯರು ದರ್ಭ ಶಯನಕ್ಕೆ ಭೇಟಿಕೊಟ್ಟು ಕ್ಷೇತ್ರ ಮೂರ್ತಿಯನ್ನು ಸ್ತುತಿಸಿರುತ್ತಾರೆ. ಶ್ರೀರಾಮ ಭಕ್ತರೆಲ್ಲರೂ ಒಮ್ಮೆ ಸಂದರ್ಶಿಸಲೇಬೇಕಾದ ಪವಿತ್ರ ಶ್ರೀರಾಮಕ್ಷೇತ್ರ ದರ್ಭಶಯನ.

# ಶ್ರೀ ರಾಮನವಮಿ

ಡಾ॥ ಎ. ಕುಮುದ
97319 03752



ಶ್ರೀಮಧ್ವಾಚಾರ್ಯರು ಭಕ್ತರಿಗೆ ಜ್ಞಾನವನ್ನೂ ಆ ಭಕ್ತರಿಗೆ ಮೋಹವನ್ನೂ ಕೊಡುವ ಶ್ರೀರಾಮನಾಗಿ ಅವತಾರ ಮಾಡಿದ ಶ್ರೀ ಹರಿಯ ಅದ್ಭುತ ಲೀಲೆಯನ್ನು ರಾಮಾಯಣದ ಬಾಲಕಾಂಡದಲ್ಲಿ ಕಾಣಬಹುದು.

ದಶರಥನು ಸೂರ್ಯವಂಶದ ಇಕ್ಷ್ವಾಕು ವಂಶದ ಅಜಮಹಾರಾಜನ ಮಗ. ಆಗ್ನೇಯ ಕೋಸಲವನ್ನು ಪಾಲಿಸುತ್ತ ಅಯೋಧ್ಯೆಯಲ್ಲಿ ಸರಯೂ ನದೀತೀರದ ಪಟ್ಟಣವನ್ನು ರಾಜಧಾನಿಯಾಗಿ ಮಾಡಿಕೊಂಡು ಇಡೀ ಭೂಮಂಡಲದ ಏಕಛತ್ರಾಧಿಪತಿಯಾಗಿ ರಾಜ್ಯಭಾರ ಮಾಡುತ್ತಿದ್ದನು.

ಆದರೆ ಚಂದ್ರನಲ್ಲಿ ಕಲೆ ಇದ್ದಂತೆ ದಶರಥನಿಗೆ ಅಪುತ್ರತೆಯೇ ಒಂದು ದೋಷವಾಗಿತ್ತು. ಚಿಂತಾಜನಕನಾದ ದಶರಥನು ಸುಮಂತ್ರನೇ ಮೊದಲಾದ ಮಂತ್ರಿಗಳೊಡನೆ ಸಮಾಲೋಚಿಸಿ ಸಂತಾನ ಪ್ರಾಪ್ತಿಗಾಗಿ ವಿಶ್ವನಾಥನಾದ ಶ್ರೀಹರಿಯನ್ನೇ ಅಶ್ವಮೇಧಯಾಗದಿಂದ ಆರಾಧಿಸಲು ನಿಶ್ಚಯಿಸಿದನು.

ದಶರಥರಾಜನು ಮಾಡಿದ ಯಜ್ಞದಲ್ಲಿ ಪ್ರಜ್ವಲಿಸಿದ ಅಗ್ನಿಯಿಂದ ಶ್ರೀಹರಿಯ ಆದೇಶದಂತೆ ಬ್ರಹ್ಮಲೋಕದ ಒಬ್ಬ ಮಹಾತೇಜಸ್ವಿಯು ಪಾಯಸ ತುಂಬಿದ ಚಿನ್ನದ ಪಾತ್ರೆಯನ್ನು ದಶರಥನಿಗೆ ನೀಡಿ ಇದರಿಂದ ಪುತ್ರಸಂತಾನವಾಗುವುದೆಂದು ಹೇಳಿ ಅದೃಶ್ಯನಾದನು. ದಶರಥನು ಆ ಪಾಯಸವನ್ನು ತನ್ನ ಮೂವರು ಪತ್ನಿಯರಿಗೂ ಹಂಚಿದನು.

ರಾಮಾವತಾರವು ದಶಾವತಾರದಲ್ಲಿ ಏಳನೆಯದು. ಶ್ರೀರಾಮನು ರಾಕ್ಷಸರ ನಿಗ್ರಹಕ್ಕಾಗಿ ದಶರಥನ ಜ್ಯೇಷ್ಠಪತ್ನಿ ಕೌಸಲ್ಯೆಯ ಗರ್ಭದಲ್ಲಿ ಮನುಷ್ಯ ರೂಪದಿಂದ ಅವತರಿಸಿದನು. ಶಬ್ದ ಪ್ರಪಂಚದಲ್ಲಿ ಅತಿ ಮಧುರವೂ,ಸರಳವೂ,ಆಹ್ಲಾದಕರವೂ, ಪಾವನವೂ, ಸಕಲ ಸಂಕಷ್ಟಗಳನ್ನೂ ಪರಿಹರಿಸಿ ಪರಮ ಪುರುಷಾರ್ಥಗಳನ್ನು ಕೊಡಲು ಸಮರ್ಥವೂ ಆದ ಶಿಶುವು ಜನಿಸಿತು. ಶಿಶುವು ವೈವಸ್ವತ ಮನ್ವಂತರದ ತ್ರೇತಾಯುಗದಲ್ಲಿ ಉತ್ತರಾಯಣದಲ್ಲಿ ಚೈತ್ರಮಾಸ ಶುಕ್ಲಪಕ್ಷದ ನವಮಿ ಹಗಲು ಪುನರ್ವಸು ನಕ್ಷತ್ರದಲ್ಲಿ ಗುರು ಮತ್ತು ಚಂದ್ರರ ಉದಯ ಕಾಲದ ಕರ್ಕಟಕ ಲಗ್ನದಲ್ಲಿ ಸೂರ್ಯನು ಮೇಷರಾಶಿಯಲ್ಲಿದ್ದಾಗ ಅನೇಕ ವ್ರತನಿಷ್ಠಳಾಗಿದ್ದ ಕೌಸಲ್ಯೆಯಲ್ಲಿ ಅವತರಿಸಿತು.

ವೈವಸ್ವತಾಂತರೆ ಪ್ರಾಪ್ತೆ ತ್ರೇತಾಯಾಮುತ್ತರಾಯಣೇ
ಚೈತ್ರನವಮ್ಯಾಂ ಪ್ರಾಕಕ್ಷೇ ದಿವಾ ಪುಣ್ಯೇ ಪುನರ್ವಸೌ॥
ಉದಯೇ ಗುರುಗೌರಾಂಶ್ಚೋರ್ಲಗ್ನೇ ಕರ್ಕಾಟಕಾಹ್ವಯೇ
ಮೇಷಂ ಪೂಷಣಿ ಸಂಪ್ರಾಪ್ತ ಸ್ವೋಚ್ಚಸ್ಥೇ ಗ್ರಹಪಂಚಕೇ॥

ಆ ವಿರಾಸೀತ್ ಸ್ವಕಲಯಾ ಕೌಸಲ್ಯಾಯಾಃ
ಪರಃ ಪುಮಾನ್
ದಿವ್ಯ ವ್ರತೈರ್ವಿಶುದ್ಧಾಯಾಃ ಸಾಕ್ಷಾತ್‌ತತ್ಪ್ರಮತೇರಿವ ॥
(ಬಾಲಕಾಂಡ 3 ನೇ ಸರ್ಗ)

ವಸಿಷ್ಠ ಮಹರ್ಷಿಗಳು ಮನಸಾ ಯೋಚಿಸಿ "ರಾಮ" ಎಂಬ ನಾಮಧೇಯವನ್ನು ಶಿಶುವಿಗೆ ನಾಮಕರಣ ಮಾಡಿದರು. ಪಾವನವಾದ "ರಾಮನಾಮ"ದ ವಿಶೇಷತೆಯನ್ನು ಈ ಕೆಳಗಿನ ಕೃತಿಯಿಂದ ತಿಳಿಯೋಣ.

ರಾಮ ಎಂಬುವ ಎರಡು ಅಕ್ಷರದ ಮಹಿಮೆಯನು

ಪಾಮರರು ತಾವೇನು ಬಲ್ಲರಯ್ಯಾ ॥ಪ॥
"ರಾ" ಎಂದ ಮಾತ್ರದೊಳು ರಕ್ತ ಮಾಂಸದೊಳಿದ್ದ
ಆಯಸ್ತಿಗತವಾದ ಅತಿ ಪಾಪವನ್ನೂ
ಮಾಯವನು ಮಾಡಿ ಮಹರಾಯ ಮುಕ್ತಿಯ ಕೊಡುವ
ದಾಯವನು ವಾಲ್ಮೀಕಿ ಮುನಿರಾಯ ಬಲ್ಲ ॥೧॥

ಮೂಳೆ ಮಾಂಸಗಳಿಗೆ ಅಂಟಿಕೊಂಡಿರುವ ಪಾಪವು "ರಾ" ಎಂಬ ಅಕ್ಷರ ಶಬ್ದಮಾತ್ರದಿಂದಲೇ ಪರಿಹಾರವಾಗುವುದು. ಹಿಂದೆ ಪರಮ ಪಾಪಿಷ್ಠನಾದ ಬೇಡನು ದುಮಾರ್ಗದಿಂದ ಜೀವನ ನಡೆಸುತ್ತಿದ್ದನು. ನಾರದರ ಉಪದೇಶವಾದ "ರಾಮನಾಮ"ಜಪದಿಂದ ಆದಿಕವಿ ವಾಲ್ಮೀಕಿ ಎನಿಸಿ "ಮುಕ್ತಿ" ಎಂಬ ಸಂಪತ್ತನ್ನು ಹೊಂದಿದನು.

ಮತ್ತೆ "ಮಾ"ಎಂದೆನಲು ಹೊರಬಿದ್ದ ಪಾಪಗಳು ಒತ್ತಿ ಒಳಪೊಗದಂತೆ ಕವಾಟವಾಗಿ "ಮಾ" ಎಂದು ಉಚ್ಚರಿಸಿದಾಗ ಹೊರಬಿದ್ದ ಪಾಪಗಳು ಪುನಃ ಒಳಗೆ ಹೋಗದಂತೆ ಎರಡು ತುಟಿಗಳು ಬಂಧಿಸುತ್ತವೆ, ಎಂದು ಪುರಂದರದಾಸರು ನಿರೂಪಿಸಿದ್ದಾರೆ.

ದಶರಥ ಮಹಾರಾಜನು ಮಕ್ಕಳಿಗೆ ವೇದಪಾರಂಗತರಾದ ಬ್ರಾಹ್ಮಣರಿಂದ ಅನ್ನಪ್ರಾಶನ,ಮುಂತಾದ ಜಾತಕರ್ಮಗಳನ್ನು



ಮಾಡಿದನು. ಶ್ರೀರಾಮನು ಕಿರುನಗೆಯಿಂದ ಅನೇಕ ರೀತಿಯ ಲೀಲೆಗಳಿಂದಲೂ ಕುಡಿನೋಟವನ್ನು ಬೀರುತ್ತಾ ತಂದೆ ತಾಯಿಗಳ ಆನಂದವನ್ನು ಇಮ್ಮಡಿಗೊಳಿಸುತ್ತಿದ್ದನು. ಸರಸ್ವತಿಯ ವಾಣಿಯನ್ನು ಮೀರಿಸುವ ಚಾರು ವಚನಗಳಿಂದ ತನ್ನ ಭಕ್ತ ಸಮೂಹಕ್ಕೆ ರಮಾರಮಣನೂ ಮಂಗಳಾಂಗನೂ ಆದ ಶ್ರೀರಾಮನು ಪರಮಾನಂದವನ್ನುಂಟು ಮಾಡಿದನು. ಒಮ್ಮೆ ರಾಮನು ತನ್ನ ಬಾಲ್ಯಾವಸ್ಥೆಯಲ್ಲಿ ಆಕಾಶದಲ್ಲಿ ಚಂದ್ರನು ತನಗೆ ಆಟವಾಡಲು ಬೇಕೆಂದು ಬಹಳವಾಗಿ ರಚ್ಚೆ ಹಿಡಿದನೆಂಬ ಪ್ರತೀತಿಯಿದೆ.

ಪ್ರಾಪ್ತ ವಯಸ್ಕಕನಾದ ರಾಮನನ್ನು ವಿಶ್ವಾಮಿತ್ರ ಮಹರ್ಷಿಯು ತನ್ನ ಯಾಗದ ಸಂರಕ್ಷಣೆಗಾಗಿ ಕರೆದುಕೊಂಡು ಹೋಗುವರು. ಆ ಸಮಯದಲ್ಲಿ ಬಲ, ಅತಿಬಲಾ ಎಂಬ ಮಂತ್ರವಿದ್ಯೆಗಳನ್ನು ವಿಶ್ವಾಮಿತ್ರರಿಂದ ಸ್ವೀಕರಿಸಿದನು. ಅನಂತರ ಸುಂದನ ಪತ್ನಿ ತಾಟಕಾ ಎಂಬ ಅಸುರಿಯನ್ನು ಸಂಹರಿಸಿದನು. ಹಾಗೇ ಮಾರೀಚ ಮತ್ತು ಸುಬಾಹುಗಳೆಂಬುವರನ್ನೂ ಸಂಹರಿಸಿ ಮಹರ್ಷಿಗಳ ಯಜ್ಞವನ್ನು ಸುಲಲಿತಗೊಳಿಸಿದನು. ನಂತರ ಸೀತಾ ಸ್ವಯಂವರಕ್ಕಾಗಿ ವಿಶ್ವಾಮಿತ್ರರು ವಿದೇಹಕ್ಕೆ ಕರೆದೊಯ್ದರು. ಮಿಥಿಲೆಯ ಹಾದಿಯಲ್ಲಿನ ಉಪವನದ ಬಳಿ ಗೌತಮರ ಪತ್ನಿ ಅಹಲ್ಯೆಯ ಶಾಪ ವಿಮೋಚನೆ ಮಾಡಿದನು. ಅನಂತರ ಮಿಥಿಲೆಗೆ ಹೋಗಿ ಅಲ್ಲಿ ಜನಕ ಮಹಾರಾಜನಿಗೆ ಶಿವನಿಂದ ದೊರೆತ ಶಿವಧನುಸ್ಸನ್ನು ಹೆದೆಯೇರಿಸಿ ಸ್ವಯಂವರದಲ್ಲಿ ಸೀತೆಯನ್ನು ವರಿಸಿದನು ಶ್ರೀರಾಮ. ಈ ರೀತಿಯಾಗಿ ರಾಮಚಂದ್ರನ ಲೀಲಾವಿನೋದಗಳು ಮನಸ್ಸಿಗೆ ಪರಮಾನಂದವನ್ನುಂಟು ಮಾಡುತ್ತದೆ.

ಶ್ರೀರಾಮನ ಜನ್ಮ ದಿನವಾದ ಚೈತ್ರ ಶುದ್ಧನವಮಿಯಂದು ರಾಮೋತ್ಸವವನ್ನಾಗಿ ಅತಿ ವಿಜೃಂಭಣೆಯಿಂದ ಆಚರಿಸಲಾಗುವುದು. ಕೆಲವೆಡೆ ಯುಗಾದಿ ಪಾಡ್ಯದಿಂದಲೂ, ಕೆಲವರು ರಾಮನವಮಿಯಿಂದಲೂ ಒಂಬತ್ತು ದಿನಗಳ ಕಾಲ ಸಂಭ್ರಮದಿಂದ ಆಚರಿಸಲಾಗುವುದು. ಇದನ್ನು ಶ್ರೀರಾಮ ಜಯಂತ್ಯುತ್ಸವ ಎಂದೂ ಕರೆಯಬಹುದು.



# ತಂಜೈಮಾಮಣಿ ಕೋವಿಲ್

ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ

ಚೋಳರ ನಾಡಾದ ತಂಜಾವೂರಿನ ಉತ್ತರದಲ್ಲಿ ತಿರುವಯ್ಯಾರಿಗೆ ಹೋಗುವ ಮಾರ್ಗದಲ್ಲಿ ಮೂರು ಕಿ.ಮೀ. ದೂರದಲ್ಲಿ ದಕ್ಷಿಣ ಪೆನ್ನಾ ನದೀತೀರದಲ್ಲಿ ಮೂರು ದೇವಾಲಯಗಳು ಸೇರಿ ಒಂದೇ ದಿವ್ಯ ದೇಶವೆಂದು ಕೀರ್ತಿಸಲ್ಪಡುತ್ತಿರುವ ಕ್ಷೇತ್ರವೇ ಈ ತಂಜೈಮಾಮಣಿಕೋವಿಲ್! ಇದು ತಂಜೈಮಾಮಣಿಕೋವಿಲ್, ವಿಣ್ಣಾಂತುಂಕರೈ ನದೀ ತೀರದಲ್ಲಿ ಮಣಿಕ್ಕುನ್ನಮ್, ತಂಜೈಯಾಳಿನಗರ್ ಎಂಬ ಮೂರು ದೇವಾಲಯಗಳು ಆಳ್ವಾರರಿಂದ ದಿವ್ಯದೇಶವೆಂದು ಮಂಗಳಾಶಾಸನದಲ್ಲಿ ಕರೆಯಲ್ಪಡುತ್ತಿದೆ.

ಮೊಟ್ಟಮೊದಲು ತಂಜೈಮಾಮಣಿಕೋವಿಲ್ ! ಇಲ್ಲಿ ನೆಲೆಸಿರುವ ಸ್ವಾಮಿಯ ಮೂಲ ಮೂರ್ತಿ ನೀಲಮೇಘ ಪೆರುಮಾಳ್ ಪೂರ್ವದಿಕ್ಕಿನಲ್ಲಿ ನಿಂತಿರುವ ಭಂಗಿಯಲ್ಲಿ ಶೆನ್ಕಮಲ ತಾಯರ್‌ನೊಂದಿಗೆ ನೆಲೆಸಿದ್ದಾರೆ. ಇಲ್ಲಿನ ಕನ್ಯಾ ಪುಷ್ಕರಿಣಿಯನ್ನು ಅಮೃತತೀರ್ಥವೆಂದು ಕರೆಯುತ್ತಾರೆ. ಸುಂದರವಾದ ವಿಮಾನಗೋಪುರದೊಂದಿಗೆ ಸ್ವಾಮಿಯು ದರ್ಶನವನ್ನು ನೀಡುತ್ತಿದ್ದಾರೆ. ಪರಾಶರ ಮಹರ್ಷಿಯು ಈ ಸ್ವಾಮಿಯ ಕುರಿತು ತಪಸ್ಸನ್ನು ಮಾಡಿ, ಅವರ ದರ್ಶನವನ್ನು ಪಡೆದು ಅನುಗ್ರಹವನ್ನು ಪಡೆದಿದ್ದಾರೆ.

ಇನ್ನು ಎರಡನೆಯದಾಗಿ ಮಣಿಕ್ಕುನ್ನಂ!ಈ ದೇವಾಲಯದಲ್ಲಿರುವ ಮೂಲ ವಿಗ್ರಹ ಮಣಿಕ್ಕುನ್ನಮ್ ಪೆರುಮಾಳ್ ಅಂಬುಜವಲ್ಲಿ ಅಮ್ಮನವರೊಂದಿಗೆ ಇದ್ದು, ಶ್ರೀರಾಮತೀರ್ಥ ತೀರದಲ್ಲಿ ಮಣಿಯೊಂದಿಗೆ ಕೂಡಿದ ವಿಮಾನದೊಂದಿಗೆ ಪೂರ್ವದಿಕ್ಕಿನಲ್ಲಿ ನಿಂತಿರುವ ಭಂಗಿಯಲ್ಲಿ ದರ್ಶನವನ್ನು ನೀಡುತ್ತಿದ್ದಾನೆ. ಮಾರ್ಕಂಡೇಯ ಮಹರ್ಷಿಯು ಭಗವಂತನ ಅನುಗ್ರಹವನ್ನು ಬಯಸಿ ತಪಸ್ಸನ್ನು ಮಾಡಿ ಸ್ವಾಮಿಯವರ ಅನುಗ್ರಹವನ್ನು ಪಡೆದಿದ್ದಾರೆ.

ಮಾರ್ಕಂಡೇಯ ಮಹರ್ಷಿ ಭಗವಂತನನ್ನು ತನ್ನ ತಪಸ್ಸಿನ ಮೂಲಕ ಪ್ರಸನ್ನಗೊಳಿಸಿಕೊಂಡರೋ ಆ ಸ್ಥಳ ಪುರಾಣ ಹೀಗಿದೆ. ವ್ಯಾಸಮಹರ್ಷಿಯ ತಂದೆಯಾದ,ಶಕ್ತಿ ಕುಮಾರವಾದ ಪರಾಶರ ಮಹರ್ಷಿ ಭಗವಂತನ ಅನುಗ್ರಹ ವನ್ನು ಪಡೆಯುವುದಕ್ಕಾಗಿ ಈ ದಿವ್ಯ ದೇಶಕ್ಕೆ ಬಂದರು. ಎಷ್ಟೇ ಕಷ್ಟಗಳು ಎದಿರಾದರೂ, ಅಡ್ಡಿ ಆತಂಕಗಳು ಎದಿರಾದರೂ ತಮ್ಮ ಮನೋಭೀಷ್ಟವು ನೆರವೇರುವವರೆಗೂ ತಪಸ್ಸನ್ನು ನಿಲ್ಲಿಸಬಾರದೆಂಬ ದೃಢ ವಿಶ್ವಾಸದಿಂದ ತಮ್ಮ ಆರೋಗ್ಯ ಕ್ಷೀಣಿಸುತ್ತಿದ್ದರೂ ತಪಸ್ಸನ್ನು ಮಧ್ಯದಲ್ಲೇ ಬಿಡಲಿಲ್ಲ.

ಅದಕ್ಕಾಗಿ ದೇವಲೋಕದಿಂದ ಅಮೃತ ವನ್ನು ತಂದು ಈ ಪುಷ್ಕರಿಣಿಯಲ್ಲಿ ಸೇರಿಸಲಾಯಿತು. ಅದರ ಫಲವಾಗಿ ಪ್ರತಿ ನಿತ್ಯವೂ ಈ ಪುಷ್ಕರಿಣಿಯಲ್ಲಿ ಸ್ನಾನವನ್ನು ಮಾಡುವುದು, ಹಾಗೇ ಅವರ ತಪಸ್ಸು ನಿರಾಂತಕವಾಗಿ ಮುಂದುವರೆಯಿತು. ಹೀಗೇ ಹಲವಾರು ವರ್ಷಗಳು ಕಳೆದು ಹೋದುವು. ಪರಾಶರ ಮಹರ್ಷಿ ತಪಸ್ಸಿನಲ್ಲಿ ಮಗ್ನವಾಗಿದ್ದರು. ಆ ಸಂದರ್ಭದಲ್ಲಿ ಎಲ್ಲಾ ಕಡೆಯಲ್ಲೂ ಕ್ಷಾಮ ಉಂಟಾಯಿತು. ಹೆಚ್ಚೂ ಕಡಿಮೆ ಹನ್ನೆರಡು ವರ್ಷಗಳ ಕಾಲ ಪ್ರಜೆಗಳೆಲ್ಲರೂ ಬಹಳ ಕಷ್ಟಪಟ್ಟರು. ವಿಚಿತ್ರವೆಂಬಂತೆ ಪರಾಶರ ಮಹರ್ಷಿ ತಪಸ್ಸು ಮಾಡುತ್ತಿದ್ದ ಪ್ರದೇಶ

ಮಾತ್ರ ಸುಭಿಕ್ಷವಾಗಿತ್ತು. ಅಲ್ಲಿರುವ ಪ್ರಜೆಗಳೆಲ್ಲರೂ ಹಸಿವೆ ಬಾಯಾರಿಕೆಗಳಿಗೆ ತುತ್ತಾಗದಂತೆ ಸಂತೋಷವಾಗಿದ್ದರಂತೆ.

ಈ ವಿಷಯವನ್ನು ತಿಳಿದ ತಂಜಗಂ,ದಂಡಕಂ, ದಾರಕ ಎಂಬ ಮೂವರು ರಾಕ್ಷಸರು ಈ ಮಹರ್ಷಿ ತಪಸ್ಸು ಮಾಡುತ್ತಿದ್ದ ಪ್ರದೇಶಕ್ಕೆ ಬಂದು ಅಲ್ಲಿರುವ ಪುಷ್ಕರಿಣಿಯಲ್ಲಿ ಸ್ನಾನ ಮಾಡಿದ ರಂತೆ. ಕೂಡಲೆ ಮತ್ತಷ್ಟು ಬಲವನ್ನು ಹೊಂದಿ ಮರಣವೇ ಇಲ್ಲದಂತಹಾ ಜೀವನ ಬೇಕೆಂದು ಪರಶಿವನನ್ನು ಕುರಿತು ತಪಸ್ಸು ಮಾಡಿದರು. ಅವರ ತಪಸ್ಸಿಗೆ ಮೆಚ್ಚಿದ ಶಿವನು ಪ್ರತ್ಯಕ್ಷನಾಗಿ ಯಾವ ವರಬೇಕೆಂದು ಕೇಳಿದ. ಆಗ ಅವರು ನಮಗೆ ಮರಣವೇ ಇಲ್ಲದಂತಹಾ ವರವನ್ನು ನೀಡು ಎಂದು ಬೇಡಿ ಕೊಂಡರು. ಆಗ ಶಿವನು ಅವರಿಗೆ,"ನೀವು ಕೇಳಿರುವ ವರ ವನ್ನು ಕೊಡಬಲ್ಲವನು ವಿಷ್ಣುವೊಬ್ಬನೇ ಎಂದು ಹೇಳಿದ. ಆಗ ಮೂವರು ರಾಕ್ಷಸರು ತಪಸ್ಸನ್ನು ಮುಂದುವರೆಸಿದರಂತೆ, ಆಗ ಪುನಃ ಶಿವನು ಪ್ರತ್ಯಕ್ಷ ನಾಗಿ ನನ್ನಿಂದ ನಿಮಗೆ ಮರಣವು ಸಂಭವಿಸುವುದಿಲ್ಲ ಎಂದು ವರನೀಡಿದನಂತೆ. ಆ ವರದಿಂದಾಗಿ ಆ ಮೂವರು ರಾಕ್ಷಸರು ದುರಹಂಕಾರದಿಂದ ಮೆರೆಯುತ್ತಾ ಮಹರ್ಷಿಗಳನ್ನು, ದೇವತೆ ಗಳನ್ನು, ಪ್ರಜೆಗಳನ್ನು ಹಿಂಸಿಸಲಾರಂಭಿಸಿದರಂತೆ. ಅವರಿಂದ ಹಿಂಸೆಗೆ ಒಳಗಾದವರಲ್ಲಿ ಪರಾಶರ ಮಹರ್ಷಿಗಳೂ ಇದ್ದರು.

ಅಮೃತಮಯವಾದ ಆ ಪುಷ್ಕರಿಣಿಯ ನೀರನ್ನು ಕುಡಿ ದದ್ದರಿಂದ ಇವರಿಗೆ ಇಷ್ಟೊಂದು ಬಲವು ಹೆಚ್ಚಾಗಿದೆ. ಅದಕ್ಕೆ ಕಾರಣ ತಾವೇ ಎಂದು ನೊಂದುಕೊಂಡರಂತೆ. ಆಗ ಭಗ ವಂತನಲ್ಲಿ ಮೊರೆಯಿಟ್ಟಾಗ ಭಗವಂತನು ತನ್ನ ಭಕ್ತನ ಕಷ್ಟ ವನ್ನು ಗರುಡನನ್ನು ಕರೆದು ಆ ಮೂವರು ರಾಕ್ಷಸರನ್ನೂ ಸಂಹ ರಿಸಬೇಕೆಂದು ಆದೇಶಿಸಿದ. ಆಗ ಗರುಡನು ಆ ಮೂವರೊಂದಿಗೆ ಹೋರಾಡಿದರೂ ಆ ಮೂವರನ್ನೂ ಕೊಲ್ಲದಾದ ಅದಕ್ಕೆ ಕಾರಣ ವೇನೆಂದು ತಿಳಿದುಕೊಂಡಾಗ ಆ ಪುಷ್ಕರಿಣಿಯ ನೀರನ್ನು ಅವರು ಉಪಯೋಗಿಸುತ್ತಿರುವುದರಿಂದ ಈ ರೀತಿ ನಡೆದಿದೆ ಎಂದು ತಿಳಿ ಯಿತು. ಆಗ ಗರುಡನು ತನ್ನಿಂದ ಆ ಮೂವರು ರಾಕ್ಷಸರನ್ನು ಕೊಲ್ಲಲಾಗಲಿಲ್ಲವೆಂದು ನೊಂದು ಕೊಂಡನು. ಆಗ ಪರಾಶರ ಮಹರ್ಷಿ ಪುನಃ ಭಗವಂತನಲ್ಲಿ ಶರಣು ಬೇಡಿದಾಗ ದಿವ್ಯ ತೇಜೋಮಯನಾದ ಭಗವಂತನು ಪ್ರತ್ಯಕ್ಷನಾಗಿ ಹಲವಾರು ಬಾರಿ ಆ ತಂಜಕನನ್ನು ಸಂಹರಿಸಿದ ಆದರೆ ತಂಜಕನು ಪುನಃ ಪ್ರಾಣದೊಂದಿಗೆ ಮೇಲೆದ್ದು ಬರುತ್ತಿದ್ದ. ಈ ರಹಸ್ಯವನ್ನು ತಿಳಿದು ಕೊಂಡ ಭಗವಂತನು ಹಂಸ ರೂಪವನ್ನು ಧರಿಸಿ ಆ ನೀರಿ ನೊಂದಿಗೆ ಅಮೃತವನ್ನು ಬೇರೆ ಮಾಡಿ ಕುಡಿದ. ಆಗ ಆ ನೀರಿ ನಲ್ಲಿ ಅಮೃತ ಬೇರ್ಪಟ್ಟಿತು. ಈ ವಿಷಯವನ್ನು ತಿಳಿಯದ ತಂಜಕನು ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಮೇಲೆ ಬಂದ. ಭಗ ವಂತನ ಕೈಯಲ್ಲಿ ಸಂಹರಿಸಲ್ಪಟ್ಟ. ನಂತರ ತಂಜಕನು, ತನಗೆ ಮುಕ್ತಿಯನ್ನು ಪ್ರಸಾದಿಸಬೇಕೆಂದು ಬೇಡಿಕೊಂಡ. ಭಗವಂತನು ಅವನನ್ನು ಅನುಗ್ರಹಿಸಿದ. ಈ ವೃತ್ತಾಂತದಿಂದಾಗಿ ಆ ಪಟ್ಟಣಕ್ಕೆ ತಂಜಾವೂರು ಎಂಬ ಹೆಸರು ಬಂದಿದೆ. ಈ ರೀತಿ ನೀಲಮೇಘ ಸ್ವಾಮಿ ತಂಜಕನನ್ನು ಸಂಹರಿಸಿದ್ದನ್ನು ನೋಡಿ ದಂಡಕನು ಸ್ವಾಮಿಯೊಂದಿಗೆ ಹೋರಾಡುವುದಕ್ಕೆ ಸಿದ್ಧನಾದ. ಭಗವಂತನ ಬಲಕ್ಕೆ ಹೆದರಿ ಪಾತಾಳದಲ್ಲಿ ಅಡಗಿ ಕೊಂಡ. ಆದರೆ ಶ್ರೀಪತಿಯು ಅವನನ್ನು ಹಿಂಬಾಲಿಸಿ ಪಾತಾಳಕ್ಕೆ ಹೋದ. ಆದರೆ ದಂಡಕನು ಗಜರೂಪವನ್ನು ಧರಿಸಿ ವರಾಹರೂಪಿಯಾದ ಭಗವಂತನನ್ನು ಎದುರಿಸಿದ ಮಾಯಾವಿಯಾದ ಆ ಅಸುರ ನನ್ನು ಸಂಹರಿಸುವುದಕ್ಕೆ ಸ್ವಾಮಿಯು ವರಾಹ ರೂಪವನ್ನು ತ್ಯಜಿಸಿ, ಸಿಂಹರೂಪವನ್ನು ಧರಿಸಿ ಅವ ನನ್ನು ಸಂಹರಿಸಿದ. ಆಗ ದಂಡಕನು ಇಲ್ಲಿ ನೀಲನರಸಿಂಹ ಸ್ವಾಮಿಯೆಂಬ ಅರ್ಚಾ ರೂಪದಲ್ಲಿ ನೆಲೆಸಿ ಭಕ್ತರನ್ನು ಅನುಗ್ರಹ ಸಿಬೇಕೆಂದು ಪ್ರಾರ್ಥಿ ಸಿದ.

ಅದೇ ರೀತಿ ಇಂದಿಗೂ ಸಿಂಹರೂಪನಾಗಿ ಭಗವಂತನು ನಮಗೆ ದರ್ಶನವನ್ನು ನೀಡುತ್ತಿದ್ದಾನೆ.

ಇಬ್ಬರು ಅಣ್ಣಂದಿರೂ ಮರಣಿಸಿದ ವಾರ್ತೆಯನ್ನು ಕೇಳಿದ ದಾರಕನು ಕೋಪದಿಂದ ಲೋಕವನ್ನೆಲ್ಲಾ ಅಂಧಕಾರ ಮಯವನ್ನಾಗಿ ಮಾಡಿದ. ಈ ಸಮಯದಲ್ಲಿ ಭಗವಂತನು ತೇಜೋರೂಪವನ್ನು ಧರಿಸಿ ರತ್ನಗಿರಿಯ ಸ್ವರೂಪವನ್ನು ಧರಿಸಿ, ದಾರಕನ್ನು ಸಂಹರಿಸಿದ. ಅಂದಿನಿಂದ ಇಲ್ಲಿನ ಸ್ವಾಮಿಮಣಿ ಕ್ಕುನ್ನ ಪೆರುಮಾಳ್ ಎಂಬ ರೂಪದಲ್ಲಿ ದರ್ಶನವನ್ನು ನೀಡುತ್ತಿ ದ್ದಾನೆ. ಈ ರೀತಿ ಅದ್ಭುತವಾದ ಸ್ಥಳ ಪುರಾಣವನ್ನು ವೈಖಾನ ಸಾಗಮಶಾಸ್ತ್ರದ ಪ್ರಕಾರ ಮೂರು ದೇವಾಲಯಗಳ ದೇವರೂ ಒಂದೇ ದಿವ್ಯದೇಶವೆಂದು ಪರಿಗಣಿಸಲ್ಪಡುತ್ತಾ ಇಂದಿಗೂ ಭಕ್ತ ರನ್ನು ಅನುಗ್ರಹಿಸುತ್ತಿದ್ದಾರೆ. ಪೂದತ್ತಾಳ್ವಾರ್, ತಿರುಮಂಗೈಯಾ ಳ್ವಾರ್, ಮಂಗಳಾಶಾಸನವನ್ನು ಬರೆದಿದ್ದಾರೆ. ಈ ಸ್ವಾಮಿಯನ್ನು ದರ್ಶಿಸಿದವರು ಸಮಸ್ತ ಪಾಪಗಳನ್ನು ಕಳೆದುಕೊಂಡು ಭಗ ವಂತನ ಅನುಗ್ರಹದಿಂದ ದೀರ್ಘಾಯುಸ್ಸನ್ನು ಪಡೆದು ಜೀವಿ ಸುತ್ತಾರೆಂದು ಸ್ಥಳ ಪುರಾಣದ ಪ್ರಕಾರ ತಿಳಿಯುತ್ತಿದೆ.

# ಶ್ರೀ ತಂದೆ ಮುದ್ದು ಮೋಹನ ವಿಠ್ಠಲದಾಸರು

ಮುದ್ದಮೋಹನದಾಸ ಕರಕಮಲ ಸಂಜಾತಂ
ವರ ಕರಿಗಿರಿ ಕ್ಷೇತ್ರವಾಸಂ।
ನೃಸಿಂಹಪಾದಾರವಿಂದೈಕದಾಸಂ ತಂದೆ
ಮುದ್ದುಮೋಹನ ದಾಸವರ್ಯಂ ಭಜೇ॥

ಕರ್ನಾಟಕದ ಉತ್ತರಭಾಗದಲ್ಲಿ ಸುಮಾರು 18 ನೇ ಶತಮಾನದಲ್ಲಿ ರಾಯಚೂರು ಜಿಲ್ಲೆಯ ಸುಮಾರು ಪ್ರದೇಶಗಳು 'ಹರಿದಾಸರ ನೆಲೆ' ಎನಿಸಿಕೊಂಡಿದ್ದವು. ವಿಪರ್ಯಾಸವೆಂದರೆ ಅಲ್ಲಿನ ಹರಿದಾಸರ ಜೀವನ, ಸಾಧನಾ,ಬೋಧನಾ,ಮಹಿಮೆ ಪವಾಡಗಳು ದಕ್ಷಿಣ ಕರ್ನಾಟಕದಲ್ಲಿ ಮನೆ ಮಾತಾಗಿದ್ದವು. ಹೆಸರು ಹೇಳಲು ಯಾರೊಬ್ಬರೂ ಹರಿದಾಸರು ಮೈಸೂರು ಪ್ರದೇಶದಲ್ಲಿ ಇರಲಿಲ್ಲ. ಸುಮಾರು 19-20ನೇ ಶತಮಾನದ ಹೊತ್ತಿಗೆ ಹಳೇ ಮೈಸೂರು ಹರಿದಾಸರ ನೆಲೆವೀಡಾಯಿತು.ಇದಕ್ಕೆ ಕಾರಣೀಭೂತರು 'ಅಂಕಿತಕ್ರಾಂತಿ' ಮಾಡಿದ ತಂದೆಮುದ್ದು ಮೋಹನ ವಿಠ್ಠಲದಾಸರು ಎಂದರೆ ಅತಿಶಯೋಕ್ತಿಯಾಗಲಾರದು.

ಪುರಾಣ ಪ್ರಸಿದ್ಧವಾದ ಕರಿಗಿರಿ ಕ್ಷೇತ್ರದಲ್ಲಿ ತುಮಕೂರು ಜಿಲ್ಲೆಯಲ್ಲಿ ದೇವರಾಯನ ದುರ್ಗಕ್ಕೆ ಸೇರಿದ ಒಂದು ಪುಟ್ಟ ಗ್ರಾಮ ನರಸೀಪುರ. ಅಲ್ಲಿ ಶೇಷಪ್ಪ ಮತ್ತು ಲಕ್ಷ್ಮಿದೇವಮ್ಮ ದಂಪತಿಗಳು ಸಾತ್ವಿಕರು ಹಾಗೂ ಸದಾಚಾರ ಸಂಪನ್ನರಾಗಿದ್ದರು. ಅವರಿಗೆ ಒಂದು ಹೆಣ್ಣು ಮಗು ಇತ್ತು. ಒಂದು ಗಂಡು ಮಗು ಬೇಕೆಂದು ಘಾಟಿ ಸುಬ್ರಹ್ಮಣ್ಯಕ್ಕೆ ಹೋಗಿ ಪ್ರಾರ್ಥನೆ ಸಲ್ಲಿಸಿ ನೇಮ ನಿಷ್ಠೆಯಿಂದ ವ್ರತ ಮಾಡಿದರು. ಫಲ ಸ್ವರೂಪ ನಾಗಿ ಕ್ರೋಧನ ಸಂವತ್ಸರ ಶ್ರಾವಣ ಶುದ್ಧ ಚೌತಿ ಶ್ರವಣ ನಕ್ಷತ್ರದಲ್ಲಿ ಒಂದು ಗಂಡು ಮಗುವಿನ ಜನನವಾಯಿತು. ಸುಬ್ರಹ್ಮಣ್ಯದೇವರ ವರ ಪ್ರಸಾದದಿಂದ ಹುಟ್ಟಿದ ಆ ಮಗುವಿಗೆ ಸುಬ್ಬರಾಯನೆಂದು ಹೆಸರಿಟ್ಟರು.

ಕುಂದಾಪುರದ ವ್ಯಾಸರಾಜ ಮಠದ ಶ್ರೀಪಾದರು ಆಗಿನ ಶ್ರೀ ಲಕ್ಷ್ಮೀಪ್ರಿಯ ತೀರ್ಥರು ಮಗುವಿಗೆ ಅಕ್ಷರಾಭ್ಯಾಸ ಮಾಡಿಸಿದರು. ಮುಂದೆ ಆ ಬಾಲಕನ ಎಂಟನೇ ವಯಸ್ಸಿನಲ್ಲಿ ಬ್ರಹ್ಮೋಪದೇಶವನ್ನು ಆ ಶ್ರೀಪಾದಂಗಳವರೇ ಮಾಡಿಸಿದರು. ಅಲ್ಲದೇ ಸಂಧ್ಯಾವಂದನೆ ದೇವರ ಪೂಜೆ ಇತ್ಯಾದಿಗಳನ್ನು ಮಾಡಲು ಕಲಿಸಿಕೊಟ್ಟರು, ನಂತರ ತಮ್ಮೊಂದಿಗೆ ಆ ಬಾಲಕನನ್ನು ಕರೆದುಕೊಂಡು ಹೋಗಿ ಬೇಲೂರು,ಅಬ್ಬೂರು, ಚೆನ್ನಪಟ್ಟಣ ಮುಂತಾದ ಕ್ಷೇತ್ರಗಳ ದರ್ಶನ ಮಾಡಿಸಿ ಆಶೀರ್ವದಿಸಿ ಕಳು ಹಿಸಿದರು.

ಸ್ವಭಾವತಃ ಬುದ್ಧಿವಂತನಾದ ಬಾಲಕ ಸುಬ್ಬರಾಯ ಓದು ಬರಹದಲ್ಲೂ ಚುರುಕಾಗಿದ್ದನು. ವಿನಯ ವಿಧೇಯತೆಗಳನ್ನು ಮೈಗೂಡಿ ಸಿಕೊಂಡಿದ್ದನು. ಆಗಿನ ಕಾಲದ ಪದ್ಧತಿಯಂತೆ ಹದಿನೈದು ವರ್ಷದ ಬಾಲಕನಿಗೆ ಎದುರು ಮನೆಯ ಎಂಟು ವರ್ಷದ ಅಚ್ಚಮ್ಮನೊಂದಿಗೆ ಮದುವೆ ಮಾಡಿದರು. ಆಗಿನ ಎಲ್.ಎಸ್.ಪರೀಕ್ಷೆಯಲ್ಲಿ ಸುಬ್ಬರಾಯ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಅಲ್ಲಿಯ ಒಂದು ಪಾಠಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಅವಲಂಬಿಸಿದರು. ಆದರೆ ಆ ವೃತ್ತಿ ಅಷ್ಟು ಸಮರ್ಪಕ ಎನಿಸಲಿಲ್ಲ. ಅದನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಚಿಂಚೊಳ್ಳಿ ವೆಂಕಣ್ಣಾಚಾರ್ಯರ ಬಳಿ ವೇದ ಶಾಸ್ತ್ರಗಳ ಅಧ್ಯಯನ ಮಾಡಲಾರಂಭಿಸಿದರು. ಜೊತೆಗೆ ಏಕಾದಶಿ ಜಾಗರಣೆ, ಭಜನೆ ಇತ್ಯಾದಿಗಳಲ್ಲಿ ಭಾಗವಹಿಸಲಾರಂಭಿಸಿದರು. ಹರಿದಾಸ ಸಾಹಿತ್ಯದ ಕಡೆ ಒಲವು ಹೆಚ್ಚಾಯಿತು. ಹರಿದಾಸರ ಜೀವನ ಚರಿತ್ರೆಗಳನ್ನು ಓದಿ ದೇವರ ನಾಮಗಳನ್ನು ಹಾಡತೊಡಗಿದರು. ಶ್ರೀಜಗನ್ನಾಥದಾಸರ ಮೇರು ಕೃತಿ ಹರಿಕಥಾಮೃತಸಾರದ ಮೂವತ್ತೆರಡು ಸಂಧಿಗಳನ್ನೂ ಕಂಠಪಾಠ ಮಾಡಿ ಕರತಲಾಮಲಕ ಮಾಡಿಕೊಂಡರು. ಸುಶ್ರಾವ್ಯವಾಗಿ ಹಾಡುವುದಲ್ಲದೆ ಮನ ಮುಟ್ಟುವಂತೆ ಪ್ರವಚನ ಮಾಡುವ ಕಲೆಯನ್ನು ರೂಢಿಸಿಕೊಂಡರು.

- ಡಾ॥ ಎನ್.ಜಿ. ವಿಜಯಲಕ್ಷ್ಮೀ ರಾಘವೇಂದ್ರಾಚಾರ್ಯ
9035185102

ಚಿಂಚೊಳ್ಳಿ ವೆಂಕಣ್ಣಾಚಾರ್ಯರಲ್ಲಿ ವ್ಯಾಸಂಗ ಒಂದು ಹಂತ ತಲುಪಿದ ನಂತರ ಸುಬ್ಬರಾಯರು ನರಸೀಪುರಕ್ಕೆ ಹಿಂದಿರುಗಿದರು. ದೃಢ ಕಾಯನಾಗಿ ಹಾಗೂ ಸುಂದರಾಂಗನಾಗಿ ಬಂದ ಇಪ್ಪತ್ತೂರು ವರ್ಷದ ತರುಣ ಮಗನನ್ನು ಕಂಡು ತಂದೆ ತಾಯಿ ಯರ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಆದರೆ ಅವ ಧೂತನಂತೆ ಕಾಡು ಮೇಡು ಸುತ್ತುತ್ತಿದ್ದ ಮಗನನ್ನು ಕಂಡು ಬಹಳ ಆತಂಕವೂ ಆಯಿತು. ಮಗಳು ಅಳಿಯನಿಗೆಂದು ಮಾವ ಕೊಟ್ಟಿದ್ದ ಮಂಚವನ್ನು "ಪರಶುರಾಮ ದೇವರಿಗೆ ಆಹುತಿ ನೀಡುತ್ತೇನೆಂದು ಸುಟ್ಟು ಹಾಕಿದ ಮಗನಿಗೆ ಬುದ್ಧಿಹೇಳಿ ತಿದ್ದಿದರು. ಹೆದರಿ ಕಂಗಾಲಾಗಿದ್ದ ಅಚ್ಚಮ್ಮನೊಂದಿಗೆ ಸಂಸಾರ ನಡೆಸುವಂತೆ ಮಗನಿಗೆ ಮಾರ್ಗ ತೋರಿದರು. ತಂದೆ ತಾಯಿಯರ ಮನಸ್ಸನ್ನು ನೋಯಿಸ ಲಾರದೆ ತಮ್ಮ ಧರ್ಮಪತ್ನಿಯೊಂದಿಗೆ ಕಂಸಾರಿಯನ್ನು ನೆನೆಯುತ್ತ ಸಂಸಾರ ನಡೆಸಿದರು. ಆದರೂ ಅವರ ಮನಸ್ಸು ಸದಾ ಅಂಕಿತ ಸ್ವೀಕರಿಸುವ ಬಗ್ಗೆ ಚಿಂತಿಸುತ್ತಿತ್ತು. ತಾನು ಹರಿ ದಾಸನಾಗಬೇಕು. ನೀತ ಗುರುಗಳಿಂದ ಅಂಕಿತ ಪಡೆಯ ಬೇಕು ಎಂದು ಹಗಲಿರಳು ಚಿಂತಿಸುತ್ತಿದ್ದರು.

ಪ್ರತಿ ವರ್ಷ ಫಾಲ್ಗುಣ ಶುದ್ಧ ಪೂರ್ಣಿಮಾ ದಿನದಂದು ದೇವರಾಯ ದುರ್ಗದಲ್ಲಿ ಲಕ್ಷ್ಮೀನರಸಿಂಹ ಸ್ವಾಮಿಯ ರಥೋತ್ಸವ ನಡೆಯುತ್ತಿತ್ತು. ಸುಬ್ಬರಾಯರು ತಪ್ಪದೇ ಪ್ರತಿವರ್ಷ ರಥೋತ್ಸವಕ್ಕೆ ಹೋಗುತ್ತಿದ್ದರು. ಒಂದು ತಂಬೂರಿಯನ್ನು ಖರೀದಿಸಿ, ಕಾಲಿಗೆ ಗೆಜ್ಜೆ ಕಟ್ಟಿ, ತಂಬೂರಿ ಕೈಲಿ ಹಿಡಿದು ಚಿಟಿಕೆ ಬಾರಿಸುತ್ತಾ ದಾಸರ ವೇಷದಲ್ಲಿ ಹಾಡುತ್ತಾ ನರ್ತಿಸುತ್ತಾ ನರಸಿಂಹ ಸ್ವಾಮಿಯ ಸೇವೆ ಮಾಡು ತ್ತಿದ್ದರು.

ಅಂದು ಸುಬ್ಬರಾಯರ ಮನೆಯಲ್ಲಿ ಅವರ ಧರ್ಮಪತ್ನಿ ಅಚ್ಚಮ್ಮ ನವರ ಸೀಮಂತದ ಸಡಗರ. ನೆಂಟರಿಷ್ಟರಿಂದ ಮನೆ ತುಂಬಿ ಹೋಗಿತ್ತು. ಅದೇ ಸಮಯಕ್ಕೆ ಸರಿಯಾಗಿ ದೊಡ್ಡಬಳ್ಳಾಪುರದ ಮುದ್ದುಮೋಹನ ದಾಸರು ಆಗಮಿಸಿದ್ದರು. ಸುಬ್ಬರಾಯರಿಗೆ ಕನಸಲ್ಲಿ ಕಂಡ ನಿಧಿ ಎದುರಿಗೆ ಕಂಡಂತಾಗಿತ್ತು. ತಮ್ಮ ಮನದ ಆಸೆ ಆಕಾಂಕ್ಷೆಗಳನ್ನು ಹೇಳಿಕೊಂಡು ಉದ್ಧಾರ ಮಾಡಬೇಕೆಂದು ಅಡ್ಡಬಿದ್ದರು. ಮರು ದಿನವೇ ತುಮಕೂರಿನ ವ್ಯಾಸರಾಯರ ಶ್ರೀಮಠದಲ್ಲಿ ದಾಸದೀಕ್ಷೆ ನೀಡಿದರು. ಮುದ್ದುಮೋಹನ ವಿಠ್ಠಲದಾಸರು ದೇವತಾರ್ಚನೆ ಮುಗಿಸಿ ತಮ್ಮ ಬಿಂಬ ಮೂರ್ತಿ ಮುದ್ದು ಮೋಹನವಿಠ್ಠಲನನ್ನು ಧ್ಯಾನಿಸಿ ಸುಬ್ಬರಾಯರಿಗೆ "ತಂದೆಮುದ್ದು ಮೋಹನವಿಠ್ಠಲ" ಎಂಬ ಅಂಕಿತ ಪ್ರಸಾದಿಸಿದರು. ನಿತ್ಯಪಾರಾಯಣ ಮಾಡಲು ಅಂಕಿತ ಪದ ಒಂದನ್ನು ರಚಿಸಿಕೊಟ್ಟರು.

ತಂದೆ ಮುದ್ದು ಮೋಹನವಿಠ್ಠಲ ಸಲಹಬೇಕಿವನ ॥ಪ॥

ಕಂದುಗೊರಳನ ಪ್ರಿಯನೆ ಅಭಿವಂದಿಪೆನು ಸತತ ॥ಅ.ಪ.॥

ಶೋಕನಾಶನ ವಿಗತ ಶೋಕನಯ್ಯನ ವೇಗ।
ವಾಕ್ಕು ಮೊದಲಾದ ಸರ್ವೇಂದ್ರಿಯಗಳಲಿ ನಿಂತು ॥

ಲೋಕದೊಳಗೆ ಇವಗೆ ಬೇಕಾದ ವರಗಳನಿತ್ತು।
ಲೌಕಿಕ ಮಾರ್ಗವ ಬಿಡಿಸೋ ನಾಕಜನ ಪಿತನೆ ॥1॥

ಜ್ಞಾನ ಭಕ್ತಿ ವೈರಾಗ್ಯಗಳನೆಲ್ಲವೈ ಇತ್ತು।
ಜ್ಞಾನಿಗಳ ಸಹವಾಸದಿ ರತಿಯ ಕೊಟ್ಟು ॥
ಹಾನಿ ವೃದ್ಧಿಗಳು ಏನೇನು ಬಂದರೂ।
ಆನಂದವನೆ ಕೊಟ್ಟು ರಕ್ಷಿಸೋ ನರಹರೇ ॥2॥

ಕಾಮ ಕ್ರೋಧಮದ ಮತ್ಸರಗಳ ಕಡಿದು।
ನಾಮೋಚ್ಚಾರಣೆ ಎಂಬ ವಜ್ರ ಕವಚ ತೊಡಿಸಿ।
ತಾಮರಸ ವಂದ್ಯ ಸಿರಿ ಮುದ್ದುಮೋಹನ ವಿಠ್ಠಲ ।
ಕಾಮಿತಾರ್ಥ ಕೊಡು ಹೃತ್ಪದ್ಮದೊಳು ಪೊಳೆದು ॥3॥

ಈ ಅಂಕಿತ ಪದವನ್ನು ಪ್ರತಿನಿತ್ಯ ಗಾಯತ್ರಿಮಂತ್ರದಂತೆ ಪಠಿಸಿ ಸಿದ್ಧಿ ಪಡೆದುಕೊಂಡರು. ಅದಕ್ಕಾಗಿ ನರಸೀಪುರದ ಸುತ್ತಮುತ್ತಲ ಗುಡ್ಡ ಗುಹೆ ಗಳಲ್ಲಿ ಕುಳಿತು ತಪಸ್ಸನ್ನು ಆಚರಿಸಿದರು. ಮೌನವ್ರತ ಆಚರಿಸಿ ದರು. ಸುಬ್ಬರಾಯದಾಸರೆನಿಸಿದರು. ತಂದೆ ಮುದ್ದು ಮೋಹನ ವಿಠ್ಠಲದಾಸ ರೆಂದು ಪ್ರಸಿದ್ಧರಾದರು.

ಕರಿಗಿರಿಯಲ್ಲಿ ನಿತ್ಯಯಾಯವಾರ ಮಾಡಿ ಜ್ಞಾನ ಸತ್ರ ಹಾಗೂ ಅನ್ನಸತ್ರ ಗಳನ್ನು ಅದ್ಧೂರಿಯಾಗಿ ನಡೆಸುತ್ತಿದ್ದರು. ತಂದೆ ತಾಯಿಯವರು ಹರಿ ಪಾದ ಸೇರಿದ ನಂತರ ಸಂಸಾರದ ಜವಾಬ್ದಾರಿ ಸುಬ್ಬರಾಯದಾಸರ ಮೇಲೆ ಬಿತ್ತು. ದಿನಸಿ ಅಂಗಡಿ ತೆರೆದು ವ್ಯಾಪಾರ ಮಾಡಿದರು ತುಂಬಲಾರದ ನಷ್ಟವಾಯಿತು. ಬೆಂಗಳೂರಿನಲ್ಲಿ ತರಗುಪೇಟೆಯಲ್ಲಿ ವ್ಯಾಪಾರ ಮಾಡಲಾರಂಭಿ ಸಿದರು. ಅಲ್ಲಿಯೂ ನಷ್ಟವಾಯಿತು. ಈ ವ್ಯಾಪಾರವೇ ಬೇಡವೆಂದು ಮಧುಕರ ವೃತ್ತಿಯನ್ನು ಅವ ಲಂಬಿಸಿದರು. ಪ್ರವಚನ, ಭಜನೆ, ದಾಸ-ವ್ಯಾಸ ಸಾಹಿತ್ಯದ ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಸುಮಾರು ಸಾವಿರದ ನೂರಾ ಅರವತ್ತೈದು ಸುಜೀವಿಗಳಿಗೆ ಅಂಕಿತ ವಿತ್ತರು. ಅವರಲ್ಲಿ ಮೊದಲನೆಯವರು ಬಾಗೇಪಲ್ಲಿ ದಾಸರು, ಕೊನೆಯವರು ಮೈಸೂರಿನ ಗುರುಗೋವಿಂದದಾಸರು. ಚಿತ್ರದುರ್ಗದಲ್ಲಿ ಮುನ್ನೂರಕ್ಕು ಹೆಚ್ಚು ಸುಜೀವಿಗಳಿಗೆ ಅಂಕಿತವಿತ್ತು ದಕ್ಷಿಣ ಕರ್ನಾಟಕವನ್ನು ಹರಿದಾಸರ ನೆಲೆವೀಡ ನ್ನಾಗಿ ಪರಿವರ್ತಿಸಿದರು.

ದೇವರಾಯನದುರ್ಗದ ದಾಸಕೂಟ ಸಭಾ ಎಂಬ ಭವನ ಕಟ್ಟಿಸಿ ಹರಿ ದಾಸ ಕೇಂದ್ರವನ್ನು ಸ್ಥಾಪಿಸಿದರು. ಪರಮಾರ್ಥ ಚಂದ್ರೋದಯ ಎಂಬ ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಹೊರತಂದು ಆ ಪತ್ರಿಕೆಗಳನ್ನು ತಮ್ಮ ಜೋಳಿಗೆಯಲ್ಲಿ ಇಟ್ಟು ಕೊಂಡು ಮನೆ ಮನೆಗೆ ತಲುಪಿಸುತ್ತಿದ್ದರಂತೆ.

ಧನ್ವಂತ್ರಿ ದೇವನನ್ನು ಸ್ಮರಿಸಿ ರೋಗಿಗಳಿಗೆ ಚಿಕಿತ್ಸೆ ನೀಡಿ ಭವರೋಗ ವೈದ್ಯರೆನಿಸಿಕೊಂಡು ಬಹು ಜನಪ್ರಿಯರಾಗಿದ್ದರು. ದಾಸರ ಸ್ಪಷ್ಟ ಉಚ್ಚಾರಣೆ ಹಾಗೂ ಪ್ರವಚನ ಹೇಳುವ ಶೈಲಿಗೆ ಮಾರುಹೋಗಿ,ಸರ್ಕಾರದವರು ಬೆಂಗಳೂರಿನ ಜೈಲಿನ ಖೈದಿಗಳಿಗೆ ಇವರ ಪ್ರವಚನ ಕೇಳಿಸುವ ವ್ಯವಸ್ಥೆ ಮಾಡಿ ದ್ದರು. ಎಷ್ಟೋ ಖೈದಿಗಳು ಪರಿವರ್ತಿತರಾಗಿ ಸಮಾಜದಲ್ಲಿ ಒಳ್ಳೆಯ ವ್ಯಕ್ತಿಗಳಾಗಿ ಸತ್ ಪ್ರಜೆಗಳೆನಿಸಿ ಜೀವನ ನಡೆಸಿದರು ಎಂದು ಪ್ರತೀತಿ.

ಆ ಸಮಯದಲ್ಲಿ ಪುತ್ತಿಗೆ ಮಠದ ಶ್ರೀ ಪಾದಂಗಳವರಾಗಿದ್ದ ಶತಾಯುಷಿ ಶ್ರೀ ಸುಧೀಂದ್ರ ತೀರ್ಥರು "ತಂದೆಮುದ್ದು ಮೋಹನವಿಠ್ಠಲದಾಸರ" ಸಾಧನೆ ಯನ್ನು ಮೆಚ್ಚಿ ಅವರಿಗೆ "ಪರಮಪ್ರಿಯ" ಎಂದು ಬಿರುದು ನೀಡಿದರು. ಅಂದಿ ನಿಂದ ಅವರು "ಪರಮಪ್ರಿಯ ಸುಬ್ಬರಾಯದಾಸ" ರೆಂದೇ ಜನಮಾನಸದಲ್ಲಿ ನೆಲೆಯೂರಿದರು.

ಕೊನೆಯದಾಗಿ ತಂದೆಮುದ್ದು ಮೋಹನವಿಠ್ಠಲದಾಸರ ಸಾಹಿತ್ಯದ ಬಗ್ಗೆ ಹೇಳುವುದಾದರೆ ಅವರು ರಚಿಸಿಕೊಟ್ಟ 1165 ಅಂಕಿತ ಪದಗಳು ಇವೆ. ಅಲ್ಲದೆ ಸಾಕಷ್ಟು ಚಿಕ್ಕ ಪುಟ್ಟ ಉಗಾಭೋಗಗಳನ್ನು ರಚಿಸಿದ್ದಾರೆ ಉದಾಹರಣೆಗೆ :

ಕರಿಗಿರಿ ಯಾತ್ರೆ ಮಾಡದವ ಭವ
ಕರಕರಿ ಪಡುವ ತಂದೆಮುದ್ದುಮೋಹನವಿಠ್ಠಲ
ಶ್ರೀರಾಮ ನಾಮಕೆ ಸರಿ ಇಲ್ಲ ಶ್ರೀಕೃಷ್ಣ ನಾಮಕೆ ಬೆಲೆ ಇಲ್ಲ
ಶ್ರೀನರಹರಿ ನಾಮಕೆ ಮಿಗಿಲಿಲ್ಲ
ಶ್ರೀ ತಂದೆ ಮುದ್ದು ಮೋಹನವಿಠ್ಠಲದಾಸರಿಗೆ ಭಯವಿಲ್ಲ ॥
ಹರಿದಾಸ ಸಂಗದಿಂದ ಹರಿ ನಿನ್ನ ಸಂಗವಾಯಿತೋ ಎನಗೆ
ತಂದೆ ಮುದ್ದು ಮೋಹನವಿಠ್ಠಲ ॥

ವಿಕ್ರಮ ಸಂವತ್ಸರ ಚೈತ್ರ ಶುದ್ಧ ನವಮಿ ಅಂದರೆ ಶ್ರೀರಾಮನವಮಿ ತಂದೆ ಮುದ್ದುಮೋಹನವಿಠ್ಠಲದಾಸರು ತಮ್ಮ ಇಹ ಲೋಕದ ವ್ಯಾಪಾರ ಮುಗಿಸಿ ದರು. (ಕಿ.ಶ. 1940)



# ಅನ್ನಮಯ್ಯನಿಗೆ ಒಲಿದ ಶ್ರೀನಿವಾಸ

ಇಂದಿನ ಕಲಿಯುಗದಲ್ಲಿ ಕೇವಲ ನಾಮ ಸಂಕೀರ್ತನೆಯನ್ನು ಮಾಡಿದರೆ ಸಾಕು ಅಂತಹಾ ಭಕ್ತರನ್ನು ಅನುಗ್ರಹಿಸುತ್ತೇನೆಂದು ಕೇವಲ ಭಕ್ತಿಯೊಂದೇ ಮುಖ್ಯವೆಂದು ಸಾಕ್ಷತ್ತು ಭಗವಂತನೇ ತಿಳಿಸಿದ್ದಾನೆ. ಆದ್ದರಿಂದ ಕಲಿಯುಗದಲ್ಲಿ ಕೇವಲ ಭಗವಂತನ ನಾಮಸ್ಮರಣೆ ಅಥವಾ ನಾಮಸಂಕೀರ್ತನ ಅತ್ಯಂತ ಮುಖ್ಯವೆಂದು ಸಾಕ್ಷಾತ್ತು ಭಗವಂತನೆ ತಿಳಿಸಿದ್ದಾನೆ. ಆದ್ದರಿಂದ ಕಲಿಯುಗದಲ್ಲಿ ಕೇವಲ ಭಗವಂತನ ನಾಮಸ್ಮರಣೆ ಅಥವಾ ನಾಮ ಸಂಕೀರ್ತನೆ ಮಹತ್ತರವಾದುದಾಗಿದೆ. ತಾಳ್ಳಪಾಕ ಅನ್ನಮಾಚಾರ್ಯರು ಅದೇ ಸಾಲಿಗೆ ಸೇರಿದವರು ಎಂದರೆ ತಪ್ಪಾಗಲಾರದು. ಅನ್ನಮಯ್ಯ ತಮ್ಮ ಕೀರ್ತನೆಯಲ್ಲಿ ಭಗವನ್ನಾಮಸ್ಮರಣೇಯಲ್ಲೇ ಎಲ್ಲಾ ಮಂತ್ರಗಳೂ ಅಡಗಿವೆ ಎಂದು ತಿಳಿಸಿದ್ದಾರೆ. ಆದ್ದರಿಂದ ಎಲ್ಲಾ ಮಂತ್ರಗಳ ಮಹಿಮೆಯೂ ವೇಂಕಟೇಶ ಮಂತ್ರವೆಂದು ತಿಳಿಸುತ್ತಾ ಆ ಮಂತ್ರವೇ ತಮ್ಮ ಜನ್ಮದ ಸಾಫಲ್ಯಕ್ಕೆ ದಾರಿದೀಪವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಅನ್ನಮಾಚಾರ್ಯರಿಗೆ ಬಾಲ್ಯದಿಂದಲೇ ಶ್ರೀವೆಂಕಟೇಶ್ವರನ ಮೇಲೆ ಅಪಾರವಾದ ಭಕ್ತಿ ವೇಂಕಟೇಶ್ವರನ ಪ್ರಸಾದವೆಂದರೆ ಮಾತ್ರಾ ಅವರು ಆಹಾರವನ್ನು ಸ್ವೀಕರಿಸುತ್ತಿದ್ದರಂತೆ. ಅಂತಹಾ ಅದೃಷ್ಟ ಅನ್ನಮಾಚಾರ್ಯರಿಗೆ ಬಾಲ್ಯದಿಂದಲೇ ಒದಗಿ ಬಂದಿತ್ತು. ಅವರ ಕೀರ್ತನೆಗಳನ್ನು ಗಮನಿಸಿದಾಗ ಅನ್ನಮಾಚಾರ್ಯರಿಗೆ 16ನೆಯ ವಯಸ್ಸಿನಲ್ಲೇ ಶ್ರೀನಿವಾಸನ ಸಾಕ್ಷಾತ್ಕಾರವಾಯಿತೆಂದು ತಿಳಿಯ ಬಹುದಾಗಿದೆ. ಇದರ ಪ್ರಕಾರ ಇತಿಹಾಸಕಾರರು, ಅನ್ನಮಾಚಾರ್ಯರು ಕ್ರಿ.ಶ. 1408 ರಲ್ಲಿ ಜನ್ಮಿಸಿದಂತೆ, ಹಾಗೇ ಅವರ 16ನೆಯ ವಯಸ್ಸಿನಲ್ಲಿ ಸ್ವಾಮಿಯ ಸಾಕ್ಷತ್ಕಾರವನ್ನು ಪಡೆದರೆಂದು ಸ್ಪಷ್ಟಪಡಿಸಿದ್ದಾರೆ.

ನಾವು ಸಾಮಾನ್ಯವಾಗಿ ಷೋಡಶೋಪಚಾರ ಎಂದು ಕರೆಯುತ್ತೇವೆ. ಇದರ ಪ್ರಕಾರ ಹದಿನಾರು ಎಂಬ ಸಂಖ್ಯೆಗೆ ಬಹಳ ಪ್ರಾಮುಖ್ಯತೆ ಇದೆ. ಶಾರೀರಕ ಹಂತದಲ್ಲಿ ಮನುಷ್ಯನಿಗೆ 16ನೆಯ ವಯಸ್ಸು ಅತ್ಯಂತ ಮುಖ್ಯವಾದುದು. "ಪದಕವಿಪಿತಾಮಹ" ಎಂದು ಕರೆಯಲ್ಪಡುವ ಅನ್ನಮಾಚಾರ್ಯರಿಗೆ ಮೊಟ್ಟಮೊದಲ ಬಾರಿ ಕಾಲ್ನಡಿಗೆಯಲ್ಲಿ ತಿರುಮಲೆಯನ್ನು ತಲುಪುವ ಸಂದರ್ಭದಲ್ಲಿ ಆಯಾಸಗೊಂಡು ಜ್ಞಾನತಪ್ಪಿ ಬಿದ್ದಾಗ ಸ್ವತಃ ಅಲಮೇಲುಮಂಗಮ್ಮ ಬಂದು ಅವರಿಗೆ ಶ್ರೀಹರಿಯ ಪ್ರಸಾದವನ್ನು ತಿನ್ನಿಸಿ ಅವರ ಆಯಾಸವನ್ನು ಬಗೆಹರಿಸಿದಳಂತೆ. ಆ ಸಂದರ್ಭದಲ್ಲಿ ಅನ್ನಮಾಚಾರ್ಯರು ವೇಂಕಟೇಶ್ವರ ಶತಕವನ್ನು ಆಶುವಾಗಿ ಹಾಡಿದರಂತೆ ಈ ಶತಕದಲ್ಲಿ ಸ್ವಾಮಿಯ ಲೀಲೆಗಳು ಮಹಿಮೆಗಳು ವರ್ಣಿಸಲ್ಪಟ್ಟಿವೆ. ಅಷ್ಟೇ ಅಲ್ಲ ಸ್ವಾಮಿಯನ್ನು ಕನಸಿನಲ್ಲಿ ಕಂಡರೆಂಬುದಕ್ಕೆ ಅವರು ತಮ್ಮ ಕೀರ್ತನೆಯಲ್ಲಿ ಶ್ರೀಹರಿಯನ್ನು ವರ್ಣಿಸಿರುವುದೇ ಸಾಕ್ಷಿಯಾಗಿದೆ.

ಅನ್ನಮಾಚಾರ್ಯರು ತಿರುಮಲೆಗೆ ನಡೆದುಹೋಗುತ್ತಿದ್ದ ಯಾತ್ರಿಕರ ಮೂಲಕ ತಿರುಮಲೇಶನ ವೈಭವವನ್ನು ಕೇಳಿ ಆನಂದಿಸಿದರು ಸ್ವಾಮಿಯು ಸ್ವಯಂಭು ಮೂರ್ತಿ. ಅಂತಹಾ ಅರ್ಚಾಮೂರ್ತಿಯ ಸೌಂದರ್ಯವನ್ನು ಅನ್ನಮಾಚಾರ್ಯರು ತಮ್ಮ ಹಲವಾರು ಕೀರ್ತನೆಗಳಲ್ಲಿ ಹಾಡಿ ಹೊಗಳಿದ್ದಾರೆ. ಎಲ್ಲದಕ್ಕಿಂತಲೂ ಪ್ರತ್ಯೇಕವಾಗಿ ಶ್ರೀನಿವಾಸನ ವರದಹಸ್ತ ಪಾದಗಳ ವರ್ಣನೆ ಅದರೊಂದಿಗೆ ಉತ್ಸವ ಮೂರ್ತಿಗೆ ನಡೆಯುವ ಉತ್ಸವಗಳು, ಇವೆಲ್ಲವೂ ಅವರಿಗೆ ಉಂಟಾದ ಸಾಕ್ಷಾತ್ಕಾರದ ಅನುಭವವೆಂದು ತಿಳಿಯಬಹುದು. ಹಾಗೇ ಕಲ್ಯಾಣೋತ್ಸವ, ಬ್ರಹ್ಮೋತ್ಸವಗಳಲ್ಲಿ ಮಲೆಯಪ್ಪ ಸ್ವಾಮಿಯ ದರ್ಶನ ಭಾಗ್ಯ ಅನ್ನಮಯ್ಯರಿಗೆ ದೊರಕಿತ್ತು. ಅವರ ಕೀರ್ತನೆಯಲ್ಲಿ ಆ ವರ್ಣನೆಗಳನ್ನು ನಾವು ಕಾಣಬಹುದು. ಆ ಕೀರ್ತನೆಯನ್ನು ಕೇಳಿಸಿಕೊಳ್ಳುವವರಿಗೂ ಆ ದಿವ್ಯಾನುಭೂತಿಯು ಉಂಟಾಗುತ್ತಿತ್ತು. ಈಗಲೂ ಆ ಅನುಭವವಾಗುವುದು. ತಥ್ಯ! ಇದು ಅವರಿಗೆ ಅರ್ಚಾಮೂರ್ತಿಯ ದರ್ಶನ ಭಾಗ್ಯ ದೊರೆಕಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅನ್ನ ಮಾಚಾರ್ಯರು ತಮ್ಮ 16ನೆಯ ವಯಸ್ಸಿನಲ್ಲಿ ಸ್ವಾಮಿಯು ಸಾಕ್ಷಾತ್ಕರಿಸಿದಾಗ ಯಾವ ಕೀರ್ತನೆಗಳನ್ನು ಹಾಡಿದ್ದರೋ ಸ್ಪಷ್ಟವಾಗಿ ತಿಳಿದು ಬಂದಿಲ್ಲವಾದರೂ ಶ್ರೀನಿವಾಸನ ದರ್ಶನವಾದಾಗ ಅವರು ಭಯ ಭಕ್ತಿಯಿಂದ ವಿಸ್ಮಯಕ್ಕೆ ಒಳಗಾಗಿರಬಹುದು. ಸಾಧಾರಣವಾಗಿ ಸ್ವಾಮಿಯು ಸಾಕ್ಷಾತ್ಕರಿಸಿದಾಗ ಪ್ರಾರ್ಥನೆಯಲ್ಲಿ ಸಂಬೋಧನೆಗಳು ನಡೆಯುತ್ತವೆ. ಆ ರೀತಿ ನಡೆಯುವುದು ವಿಷ್ಣು ಅವತಾರಗಳಲ್ಲಾದರೂ ಅವೆಲ್ಲವೂ ನಾರಾಯಣನ ಅಂಶವೇ ಆದ್ದರಿಂದ ಅನ್ನಮಾಚಾರ್ಯರು ರಚಿಸಿದ ಕೀರ್ತನೆಗಳೆಲ್ಲವೂ ಅಂತಹಾ ಸಮಯದಲ್ಲೇ ಹಾಡಿದ್ದಿರಬಹುದು. ಅನ್ನಮಾಚಾರ್ಯರು ಬಾಲ್ಯದಿಂದಲೇ ಶ್ರೀನಿವಾಸನ ಪರಮಭಕ್ತರು. ಆದ್ದರಿಂದ ಸ್ವಾಮಿಯು ಅವರಿಗೆ ಪ್ರತ್ಯಕ್ಷವಾದ ಸಮಯದಲ್ಲಿ ಆ ಸ್ವಾಮಿಯನ್ನು ಸೇವಿಸಿದ ಪೌರಾಣಿಕ ಪಾತ್ರಗಳೇ ನೆನಪಿಗೆ ಬಂದಿರಬಹುದು. ಆದ್ದರಿಂದ ಅವರ ಕೀರ್ತನೆಗಳಲ್ಲಿ ಧ್ರುವನಿಗೆ ಒಲಿದವನೇ, ಪ್ರಹ್ಲಾದ ವರದ, ಕರಿರಾಜವರದ, ಕಾಕಾಸುರ ಸಂಹಾರಿ, ವಿಭೀಷಣ ವರದ, ಅಕ್ರೂರ ವರದ ಅಂಬರೀಷ ವರದ, ದ್ರೌಪದಿಯ ಮಾನವನ್ನು ರಕ್ಷಿಸಿದವನೇ, ಅರ್ಜುನ ಸಾರಥಿ ಎಂದು ದೇವರನ್ನು ಕೀರ್ತಿಸುವುದನ್ನು ನಾವು ನೋಡಬಹುದು.

ಶ್ರೀನಿವಾಸನ ಪರಮ ಉತ್ಕೃಷ್ಟವಾದ ನಂದಕ ಖಡ್ಗದ ಅಂಶವೇ ಅನ್ನಮಾ ಚಾರ್ಯರಾಗಿ ಜನ್ಮಿಸಿದರು. ಅಂತಹಾ ಮಹಿಮಾನ್ವಿತ ಭಕ್ತರಾದ ಅನ್ನಮಾಚಾರ್ಯರ ಕೀರ್ತನೆಗಳ ಮೂಲಕ ಸಪ್ತಗಿರೀಶನನ್ನು ಹಾಡಿಹೊಗಳಿ ಆತನನ್ನು ಸಾಕ್ಷಾತ್ಕರಿಸಿಕೊಳ್ಳುವ ಸುಲಭವಾದ ಮಾರ್ಗವನ್ನು ಸಾಮಾನ್ಯ ಭಕ್ತನಿಗೂ ತೋರಿದ್ದಾರೆ. ಇದೇ ಅಲ್ಲದೇ ಅನೇಕ ಕೀರ್ತನೆಗಳ ಮೂಲಕ ಸ್ವಾಮಿಯ ದರ್ಶನವಾದಾಗ ಅನ್ನಮಾಚಾರ್ಯರು ಆ ಸ್ವಾಮಿಯನ್ನು ಹಾಡಿ ಹೊಗಳಿ, ಆ ಕೀರ್ತನೆಗಳು ಸಾಮಾನ್ಯರಿಗೂ ಅರ್ಥವಾಗುವಂತೆ ರಚಿಸಿ ಜನ ಸಾಮಾನ್ಯರಲ್ಲೂ ಭಕ್ತಿ ಭಾವನೆಯನ್ನು ಹೆಚ್ಚಿಸುವ ಮಹತ್ಕಾರ್ಯವನ್ನು ಅನ್ನಮಾಚಾರ್ಯರು ಮಾಡಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಅಂತಹ ಮಹಾನ್‌ಭಕ್ತರಾದ ಅನ್ನಮಾಚಾರ್ಯರನ್ನು ಸ್ಮರಿಸುತ್ತಾ ಅವರ ಕೀರ್ತನೆಗಳ ಮೂಲಕ ಸ್ವಾಮಿಯನ್ನು ಅರ್ಚಿಸಿ ಕೀರ್ತಿಸಿ ಧನ್ಯರಾಗೋಣ.

ಮೂಲ: ಎ. ವಿಭೀಷಣ ಶರ್ಮ
ಅನುವಾದ : ಎಸ್. ವಾದಿರಾಜ

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ
- ಅನುವಾದ : ಶ್ರೀಮತಿ

**- ಕಳೆದ ಸಂಚಿಕೆಯಿಂದ**

ಪೆರಿಯಾಳ್ವಾರನ್ನು ಭಗವಂತನು ಎಡೆಬಿಡದೆ ಅನುಗ್ರಹಿಸಲಿ!

ಶ್ರೀ ವಿಷ್ಣುಚಿತ್ತ ಕುಲನಂದನ ಕಲ್ಪವಲ್ಲಿ
ಗೋಪಾಲಕಾಂತ ವಿನಿವೇಶಿತ ಮಾಲ್ಯಲೋಲ!
ಗೋಪಾಂಗನಾಕುಚ ಕುಲಾಚಲಮಧ್ಯಸುಪ್ತ
ಗೋವಿಂದರಾಜಾ! ವಿಜಯಿ ಭವ ಗೋಧನಾಢ್ಯ!

(ಶ್ರೀ ವಿಷ್ಣುದಾಸರ ಕುಲವೆಂಬ ನಂದನವನದಲ್ಲಿ ಕಲ್ಪಲತೆಯಂಥ ಗೋದಾದೇವಿಯ ಕೇಶದಲ್ಲಿ ಧರಿಸಲ್ಪಟ್ಟ ಹೂಮಾಲೆಯಲ್ಲಿ ವಿಕಸಿತಗೊಂಡವನೇ! ಗೋಪಾಂಗನೆಯರ ವಕ್ಷದಲ್ಲಿ ಕುಲಾಚಲಮಧ್ಯಪಸಿಡಿದವನೇ! ಗೋಧನಸಮೃದ್ಧಿ ಹೊಂದಿದವನೇ! ಗೋವಿಂದರಾಜಾ! ಜಯ ಶೀಲನಾಗಿ ಬಾ!)

ಪೆರಿಯಾಳ್ವಾರ ಕೋಮಾರಿತದಲ್ಲಿ ನೆಲೆಗೊಂಡ ಗೋದಾದೇವಿ ಭಗವಂತನಿಂದ ಅನುಗ್ರಹಿಸಲ್ಪಡಲಿ!

ಭಕ್ತಾಂಘ್ರಿರೇಣುಮುನಿನಾ ಪರಮಂ ತದೀಯ
ಶೇಷತ್ವ ಮಾಶ್ರಿವತಾ ವಿಮಲೇನ ನಿತ್ಯಂ
ಪ್ರಬೋಧಿಕಸುತೆಕೃತಾ ಹ್ಯಾವಬೋಧಿಕ ಶ್ರೀ -
ಗೋವಿಂದರಾಜ ವಿಜಯಿ ಭವ ಗೋಪಬಂಧೂ

(ಮೇಲಿನ ಭಾಗವತ ಶೇಷತತ್ವದಲ್ಲಿ ಆಶ್ರಯಿಸಿದವನು, ನಿಷ್ಕಲ್ಮಷನು ಪ್ರಬೋಧಿಕಸ್ತುತಿ (ತಿರುಪ್ಪಳ್ಳಿಯೆಳುಚ್ಚಿ ಎಂಬ ಗೀತೆಯಲ್ಲಿ) ರಚಿಸಿದವನನ್ನು ಅಗು ಭಕ್ತಾಂಘ್ರಿಣಿರೇಣುಮುನಿಯ ಕೈಯಿಂದ (ತೊಂದರ ಪಪ್ಪಾಡಿಯಾಳ್ವಾರನೆಡಿ ವಿಪ್ರ ನಾರಾಯಣನು) ಪ್ರತಿದಿನವು ಬಣ್ಣಿಸಿ ಕೊಂಡವನೇ! ಗೋಪಾಲಬಂಧೂ! ಶ್ರೀ ಗೋವಿಂದರಾಜಾ ! ಜಯವಂತನಾಗು! )

ತೊಂದರಡಿಪ್ಪೊಡಿಯಾಳ್ವಾರರು (ಭಕ್ತಾಂಘ್ರಿರೇಣು) ಭಗವಂತನಿಂದ ಅನುಗ್ರಹಿಸಲ್ಪಡಲಿ.

ಶ್ರೀಪಾಣನಾಮಕ ಮಹಾಮುನಿ ಗೀಯಮಾನ
ದಿವ್ಯಾನುಭಾವದಯಮಾನ ದೃಗಂಚಲಾಢ್ಯ
ಸರ್ವಾತ್ಮರಕ್ಷಣ ವಿಚಕ್ಷಣ ಚಕ್ರಪಾಣೇ
ಗೋವಿಂದರಾಜ ವಿಜಯೀ ಭವ ಗೋಪಿಕೇಂದ್ರ

(ಪಾಣಾಜ್ಯುಲಗು (ತಿರುಪ್ಪಾಣಾಳ್ವಾರ್) ಮಹಾಮುನಿಗಳಿಂದ ಕೀರ್ತಿಸಲ್ಪಟ್ಟಿರುವ ದಿವ್ಯಪ್ರಭಾವ ಹೊಂದಿದವನೇ ! ಕೃಪೆಯಿಂದ ಕರುಣಾ ದೃಷ್ಟಿ ಹರಿಸುವವನೇ? ಸಕಲ ಚೇತನ ರಕ್ಷಣ ಪ್ರವಣಾ! ಚಕ್ರಧಾರಿ! ಗೋಪಿಕಾ ಪ್ರಭೋ! ಗೋವಿಂದ ರಾಜಾ!ಜಯಶಾಲಿಯಾಗು ನೀ)

ತಿರುಪ್ಪಾಣಾಳ್ವಾರರು ಭಗವಂತನಿಂದ ಅನುಗ್ರಹಿಸಲ್ಪಡಲಿ
ಭಕ್ತೋತ್ತಮಾಯ ಪರಕಾಲಮುನೀಂದ್ರನಾಮ್ನೇ

ವಿಶ್ರಾಣಿತಾತುಲ ಮಹಾಧನ ಮೂಲಮಂತ್ರ
ಪೂರ್ಣಾನುಕಂಪ ಪುರುಷೋತ್ತಮ ಪುಷ್ಕರಾಕ್ಷ
ಗೋವಿಂದರಾಜ ವಿಜಯೀ ಭವ ಗೋಸನಾಥ

(ಪರಕಾಲ ಮುನೀಂದ್ರ ಮುಂತಾದ ಹೆಸರು ಪಡೆದ ಭಕ್ತ ಶಿಖಾಮಣಿ ನಿಧಿಯಂಥ ಮೂಲ (ಅಷ್ಟಾಕ್ಷರೀ ) ಮಂತ್ರದಲ್ಲಿ ಸ್ತುತಿಸಲ್ಪಟ್ಟವನೇ ! ದಯಾಪೂರ್ಣ ! ಪುರುಷೋತ್ತಮಾ! ಪುಂಡರೀಕಾಕ್ಷಾ! ಗೋವುಗಳಿಂದ ಆವರಿಸಲ್ಪಟ್ಟವನೇ! ಗೋವಿಂದರಾಜಾ! ಜಯಶೀಲನಾಗಿರು!)

ತಿರುವಂಗೈ ಆಳ್ವಾರರು ಭಗವಂತನಿಂದ ಅನುಗ್ರಹಿತರಾಗುವರು.
ಸತ್ತ್ವೋತ್ತರೇ ಚರಮ ಪರ್ವಣಿ ಸಕ್ತಚಿತ್ತೇ,
ಶಾಂತೇ ಸದಾ, ಮಧುರಪೂರ್ವಕ ವಾಙ್ಮನೀಂದ್ರೇ
ನಾಥ ಪ್ರಪನ್ನ ಹೃದಯಾಂಬುಜ ನಂದಸೂನೋ
ಗೋವಿಂದರಾಜಾ ವಿಜಯೀ ಭವ ! ಕುಂದದಂತ

(ಸತ್ತ್ವಭೂಯಿಷ್ಠಮಗು ಚರಮ ಪೂರ್ವದಲ್ಲಿ ಹಾಗೂ ಆಚಾರ್ಯ ನಿಷ್ಠೆಯಲ್ಲಿ ಆಸಕ್ತ ಮಾನಸದವನೇ ಪರಮ ಶಾಂತ ಸ್ವಭಾವದವನೇ ಹಾಗೂ ಮಧುರಕವಿ ಆಳ್ವಾರರ ವಿಷಯದಲ್ಲಿ ಪ್ರಸನ್ನನಾದ ಹೃದಯಾಬ್ಜವನ್ನು ಹೊಂದಿದವನೇ! ಅಸ್ಮನಾಥಾ! ನಂದಕುಮಾರಾ! ಕುಂದ ಸುಂದರದಂತಾ! ಓ ಗೋವಿಂದರಾಜಾ! ಜಯಶೀಲನಾಗಿ ಬಾ)

ಶ್ರೀ ಮಧುರಕವಿ ಆಳ್ವಾರರು ಭಗವಂತನಿಂದ ಅನು ಗ್ರಹಿಸಲ್ಪಡಲಿ,

ಭಕ್ತ ಪ್ರಪನ್ನ ಕುಲನಾಯಕ ಭಾಷ್ಯಕಾರ
ಸಂಕಲ್ಪ ಕಲ್ಪತರು ದಿವ್ಯ ಫಲಾಮಲಾತ್ಮನ್
ಶ್ರೀ ಶೇಷ ಶೈಲಕಟಕಾಶ್ರಿತ ಶೇಷಶಾಯಿನ್
ಶ್ರೀಗೋವಿಂದರಾಜಾ ವಿಜಯೀ ಭವ ವಿಶ್ವಮೂರ್ತೇ !

(ಭಕ್ತಿ ಪ್ರಸನ್ನ ಕುಲನಾಯಕನಾಗಿ ಶ್ರೀ ಭಾಷ್ಯಕಾರರಿಂದ ಸಂಕಲ್ಪ ಮಾಡಿಸಿ ಕಲ್ಪವೃಕ್ಷಕ್ಕೆ ದಿವ್ಯ ಫಲ ರೂಪದಲ್ಲಿ ಬಂದ ಅಮಲಾತ್ಮ ಶೇಷಾದ್ರಿ ಕಟಕವನ್ನಾಶ್ರಿಸಿದವನು!ಶೇಷಶಾಯಿ ! ವಿಶ್ವ ಮೂರ್ತಿ! ಗೋವಿಂದರಾಜಾ! ಜಯಶೀಲನಾಗಿರು.

- ಮುಂದುವರೆಯುತ್ತದೆ.

## ಶ್ರೀರಾಮನ ಸನ್ನಿಧಿ ತಿರುಮಲೆ

ಕಲಿಯುಗದ ಪ್ರತ್ಯಕ್ಷದೈವನಾದ ಶ್ರೀವೆಂಕಟೇಶ್ವರಸ್ವಾಮಿಯು ನೆಲೆಸಿರುವ ಆನಂದ ನಿಲಯದಲ್ಲಿ ಘಂಟಾಮಂಟಪ, ಸ್ನಪನ ಮಂಟಪದ ನಂತರ ಇರುವುದೇ ಶ್ರೀರಾಮನಸನ್ನಿಧಿ ಸೀತಾರಾಮಲಕ್ಷ್ಮಣರ ಉತ್ಸವ ಮೂರ್ತಿಗಳನ್ನು ಇಲ್ಲಿ ಮಂಟಪದಲ್ಲಿತ್ತಿದ್ದವುದರಿಂದ ಇದನ್ನು ಶ್ರೀರಾಮರ ಮಂಟಪವೆಂದು ಹೆಸರು ಬಂದಿದೆ. ಸೀತಾದೇವಿಯನ್ನು ಹುಡುಕುತ್ತಾ ರಾಮ ಲಕ್ಷ್ಮಣರು ವೆಂಕಟಾದ್ರಿಯನ್ನು ಸಂದರ್ಶಿಸಿದ ನೆನಪಿನಲ್ಲಿ ಅವರ ಉತ್ಸವ ಮೂರ್ತಿಗಳನ್ನು ಇಲ್ಲಿ ನೆಲೆಗೊಳಿಸಿದರೆಂದು ಹೇಳುತ್ತಾರೆ.

ಪ್ರಸ್ತುತ ಈ ಮೂವರ ಮಾರ್ತಿಗಳು ಗರ್ಭಗೃಹದಲ್ಲಿ ದರ್ಶನ ನೀಡುತ್ತಿದೆ. ಜಗಲ ಇಕ್ಕೆಲಗಳಲ್ಲಿ ಶ್ರೀರಾಮನ ಪರಿವಾರದ ಅಂಗದ, ಹನುಮಂತ, ಸುಗ್ರೀವ ಹಾಗೂ ಶ್ರೀವೆಂಕಟೇಶ್ವರ ಸ್ವಾಮಿಯ ಪರಿವಾರದೇವತೆಗಳಾದ ವಿಶ್ವಕ್ಸೇನ,ಅನಂತ ಹಾಗೂ ಗರುಡರ ಉತ್ಸವಮೂರ್ತಿಗಳಿವೆ. ತ್ರೇತಾಯುಗದ ಶ್ರೀರಾಮನೇ ಕಲಿಯುಗ ಶ್ರೀನಿವಾಸನು. ಶ್ರೀರಾಮನವಮಿಯ ಪರ್ವದಿನದಲ್ಲಿ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡುತ್ತಾರೆ. ಪ್ರತಿ ತಿಂಗಳಲ್ಲಿ ಬರುವ ಪುನರ್ವಸು ನಕ್ಷತ್ರದ ದಿನದಂದು ಶ್ರೀರಾಮಚಂದ್ರದೇವರು ಸಹಸ್ರದೀಪಾಲಂಕರಣ ಸೇವೆಯಲ್ಲಿ ಪಾಲ್ಗೊಳ್ಳುವರು.ವರ್ಷಕ್ಕೊಮ್ಮೆ ತೆಪ್ಪೋತ್ಸವವು ನಡೆಯುತ್ತದೆ.

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ವೇಂಗೈನಾಡು ಎನ್ನುವ ಮತ್ತೊಂದು ವಿವರಣೆ ದೊರೆಯುತ್ತದೆ. ಇದನ್ನು ಚೋಳರು ಆಳುತ್ತಿದ್ದರು. ಅವರ ಕಾಲ ಕ್ರಿ.ಶ.10 ನೇ ಶತಮಾನ 11ನೇ ಶತಮಾನಗಳು. ಚೋಳರ ಧ್ವಜದಲ್ಲಿ ಹುಲಿಯು ಚಿತ್ರಿತವಾಗುತ್ತಿದ್ದಿತೆಂದು ಕೇಳಿದ್ದೇನೆ. ಆದರೆ ಈ ಚೋಳರ ರಾಜ್ಯ ಗೋದಾವರಿಯಿಂದ ಕೃಷ್ಣೆಯ ಮಧ್ಯವೆಂದು ಬರೆದಿದೆ. ಚೋಳರು ತಂಜಾವೂರು ಪ್ರಾಂತ್ಯದಲ್ಲಿ ಮೊದಲು ಆಳುತ್ತಿದ್ದರೆಂಬುದಾಗಿ ತಮಿಳುನಾಡಿನ ಚರಿತ್ರೆಯಲ್ಲಿ ಗೊತ್ತಾಗುತ್ತದೆ. ಈ ಚೋಳರು ಪ್ರಾಚೀನರು, ಇವರ ಕಾಲ ಕ್ರಿಸ್ತ ಪೂರ್ವಕ್ಕೂ ಸಾಗುತ್ತದೆ ಎನ್ನುತ್ತಾರೆ. ಕಾವೇರಿ ನದೀ ಮುಖಜ ಭೂಮಿಯಲ್ಲಿ ಇವರು ರಾಜ್ಯವಾಳುತ್ತಿದ್ದು, ರೋಂ ಮುಂತಾದ ಪಾಶ್ಚಾತ್ಯ ದೇಶಗಳೊಡನೆ ಆಗಿನ ಕಾಲಕ್ಕೆ ಸಂಪರ್ಕವಿಟ್ಟುಕೊಂಡಿದ್ದರೆಂದು ತಿಳಿಯುತ್ತದೆ. ಕನ್ನಡದಲ್ಲಿ ಇವರ ರಾಜ್ಯವನ್ನು ವೆಂಗಿನಾಡೆಂದೂ ಕರೆಯುತ್ತಿದ್ದರೆಂದು ಉಲ್ಲೇಖವಾಗಿದೆ. ಆದರೆ ಈ ವೆಂಗಿನಾಡು ಗೋದಾವರಿಯಿಂದ ಕೃಷ್ಣೆಯ ಮಧ್ಯದ ಪ್ರದೇಶಕ್ಕೆ ಸೀಮಿತವಾಗಿದ್ದು ಆಂಧ್ರ ಪ್ರದೇಶಕ್ಕೆ ಸೇರಿದೆ. ಹುಲಿಯ ಧ್ವಜ ಇದ್ದುದರಿಂದ ಇವರನ್ನು ವೇಂಗೈ ಎನ್ನುತ್ತಿದ್ದು ಅದರಿಂದ ವೆಂಗಿನಾಡು ಹುಟ್ಟಿಕೊಂಡಿರಬಹುದೇ? ಏತಕ್ಕೆಂದರೆ ಹುಲಿಧ್ವಜದವರು ಆಳಿದ ನಾಡು ತಾನೇ ಅದು. ಈ ಚೋಳರು ತಿರುಪತಿ ಪ್ರಾಂತ್ಯವನ್ನು ಆಳುತ್ತಿದ್ದರೆ? ಆಗಿನ ಕಾಲಕ್ಕೆ ಅವರು ವೇಂಗಡವೆಂಬ ಹೆಸರನ್ನು ಈ ಪ್ರದೇಶಕ್ಕೆ ನೀಡಿದ್ದರೆ? ವೇಂಗೈನಾಡಿಗೂ, ಚೋಳರ ಪ್ರಭುತ್ವಕ್ಕೂ, ವೇಂಗಡ ಎನ್ನುವ ಹೆಸರಿಗೂ ಪರಸ್ಪರ ಸಂಬಂಧವಿರಬಹುದೇ ಎನ್ನುವುದು ಪರಿಶೀಲನಾರ್ಹವಾದ ವಿಚಾರ.

ಈ ವಿವರಗಳನ್ನು ಬರೆದ ನಂತರ ನನಗೆ ಶ್ರೀ ಬಿ.ಜಿ. ಎಲ್.ಸ್ವಾಮಿ ಅವರ 'ಹಸುರುಹೊನ್ನು' ಎನ್ನುವ ಪುಸ್ತಕದಲ್ಲಿ ಇದೇ ರೀತಿಯ ಪ್ರಸ್ತಾಪವು ಇರುವುದೆಂದು ತಿಳಿದು ಬಂದಿತು. ಅದರಲ್ಲಿನ 64 ನೇಯ ಪುಟದಿಂದ 97 ನೆಯ ಪುಟದ ವರೆಗೆ ವೇಂಗೈ ಎನ್ನುವ ವಿವರಣೆಯನ್ನು ಬಹಳ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ಆದರೆ ಅವರಿಗೆ ಪೇಯಾಳ್ವಾರ್ ಅವರ ಈ ಮೇಲೆ ತಿಳಿಸಿದ ಪಾಶುರವೂ ಸಿಕ್ಕಿದರೆ ಇನ್ನೂ ಅಷ್ಟು ವಿವರ ಒದಗಿಸುತ್ತಿದ್ದರೋ ಏನೋ? ತಮಿಳುನಾಡಿನ ಗಡಿ ವಡವೇಂಗಡದವರೆಗೂ ಬೆಳೆದು ಪ್ರಾಯಶಃ ಅದರಾಚೆಗೆ ಈ ವೇಂಗೈ ಮರಗಳು ಅಥವಾ ಹೊನ್ನೇ ಮರಗಳು ಬೆಳೆಯುತ್ತಿರಲಿಲ್ಲವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಇವರು ವೇಂಗೈ ಎನ್ನುವುದು ಬೇಂಗ ಅಥವಾ ಹೊನ್ನೆ ಎನ್ನುತ್ತಾರೆ. ಇದೇ ಲೇಖಕರ ಶಾಸನಗಳಲ್ಲಿನ ಗಿಡ ಮರಗಳು ಎನ್ನುವ ಪುಸ್ತಕದಲ್ಲಿ 'ಲಾಂಛನ ಸಸ್ಯಗಳು' ಅಧ್ಯಾಯದಲ್ಲಿ, ವಾಗೈ (ಬಾಗೇ) ಎನ್ನುವ ವೃಕ್ಷಗಳನ್ನು ವರ್ಣಿಸಿ ಅದರ

ಹೂವನ್ನು ವಿಜಯಲಾಂಛನವಾಗಿ-ಗ್ರೀಕರು ಆಲಿವ್ ಬಳ್ಳಿಯನ್ನು ವಿಜಯ ಸೂಚಕವಾಗಿ ತಲೆಸುತ್ತ ಕಿರೀಟದಂತೆ ಧರಿಸುತ್ತಿದ್ದ ರೀತಿಯಲ್ಲಿ-ತಮಿಳುನಾಡಿನ ಅರಸರು ಅಲಂಕಾರ ಮಾಡಿಕೊಳ್ಳುತ್ತಿದ್ದರು ಎಂದಿದ್ದಾರೆ.(ಪುಟ 24-95) ಈ ವಾಗೈ-ವೇಂಗೈ (ವಿಜಯಸೂಚಕ) ಎನ್ನುವ ಅರ್ಥ ಹೊಂದಿ ಪರಿವರ್ತನೆ ಹೊಂದಿರಬಹುದಾದ ಸಂಭವವುಂಟಲ್ಲವೆ? ಈ ಬಾಗೇ ಹೂವನ್ನು ಶಿರೀಷವೆಂದು ಸಂಸ್ಕೃತದಲ್ಲಿ ಕರೆಯುತ್ತಾರಂತೆ. ಈ ಶಿರೀಷ ಪುಷ್ಪಗಳನ್ನು ಕವಿಗಳು ಬಹಳ ಹೊಗಳಿದ್ದಾರೆ. ದೈವಸ್ತುತಿಗಳಲ್ಲೂ ಇದಕ್ಕೆ ಒಂದು ಪ್ರಾಶಸ್ತ್ಯವಿದೆ. ವೇಂಗೈ ಸುವಾಸನಾಭರಿತ ಪುಷ್ಪ ಎಂದು ಆಳ್ವಾರ್ ತಿಳಿಸಿರುವುದರಿಂದ ಮೇಲಿನ ಪುಷ್ಪಗಳಲ್ಲಿ ಯಾವುದು ವೇಂಗೈ ಎನ್ನುವುದನ್ನು ಅಧ್ಯಯನ ಮಾಡಿ ತಿಳಿಯಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಬಿ.ಜಿ.ಎಲ್.ಸ್ವಾಮಿ ಅವರ 'ಹಸುರು ಹೊನ್ನಿ'ನಿಂದ ಮತ್ತೊಂದು ಮುಖ್ಯ ಅಂಶ ಹೊರ ಬೀಳುತ್ತದೆ. ಇದು ಸ್ವಲ್ಪ ಮಟ್ಟಿಗೆ ತಿರುಮಲೆಯ ಇತಿಹಾಸಕ್ಕೆ ಹೊಂದಿಕೊಳ್ಳುತ್ತದೆ ಎಂದು ನನ್ನ ತೀರ್ಮಾನ.

ಮುರುಗನು ವಳ್ಳಿಯ ಕಾದಲನ್ನು ಪರೀಕ್ಷಿಸುವ ಸಲುವಾಗಿ ವೇಂಗೈ ವೃಕ್ಷವಾಗಿ ನಿಂತನಂತೆ! ಈ ಮರವನ್ನು ವೇದ ಶಾಸ್ತ್ರಾಗಮಗಳ ಮರುರೂಪವೆನ್ನುತ್ತಾದಂತೆ ವಳ್ಳಿ, ಆ ಮರವನ್ನು ಕಡಿಯಲು ಹೋದ ತನ್ನ ಊರವರನ್ನು ತಡೆದು, ಮರದ ರೂಪದ ತನ್ನ ಪ್ರಿಯನನ್ನು ಗುರುತಿಸಿವರಿಸಿದ್ದರಿಂದ ವಳ್ಳಿಯ ಊರವರಾದ ಕೊರವರಿಗೆ ವೇಂಗೈ ವೃಕ್ಷ ಇಂದಿಗೂ ಪೂಜನೀಯವಂತೆ! ಇದು ಅವರಿಗೆ ದೈವಸದೃಶ. ಮುರುಗನಿಗೆ ಪ್ರಿಯವೆನಿಸುವುದು ಎರಡು-ಒಂದು ಮಲೆ, ಮತ್ತೊಂದು ವೇಂಗೈ ಮರ. ಆದ್ದರಿಂದಲೇ ವೇಂಗೈ ಮರಗಳಿಂದ ಆವೃತವಾದ ಮಲೆಯ ಮೇಲೆ ಮುರುಗನು ಖಂಡಿತವಾಗಿಯೂ ನೆಲಸಿರುವನೆಂಬ ನಂಬಿಕೆ ಕೊರವರಿಗೆ!ಮುರುಗನ ಪ್ರಾಚೀನ ನೆಲೆಗಳಲ್ಲಿ ಈ ಲಕ್ಷಣ ಇರುವುದಂತೆ!

- ಮುಂದುವರೆಯುತ್ತದೆ.

## ಶ್ರೀ ಕೋದಂಡರಾಮ ದೇವಾಲಯ, ತಿರುಪತಿ

ಶ್ರೀ ವೆಂಕಟೇಶ್ವರನು ನೆಲೆಸಿರುವ ತಿರುಮಲೆಯ ಪಾದಗಳ ಸನಿಹದಲ್ಲಿರುವ ತಿರುಪತಿ ಪಟ್ಟಣದಲ್ಲಿದೆ ಈ ದೇಗುಲ. ತನ್ನನ್ನು ದರ್ಶಿಸಿದ ಭಕ್ತರ ಕೋರಿಕೆಗಳನ್ನು ಈಡೇರಿಸುವನೀತನೆಂದು ಪ್ರಸಿದ್ಧಿ ಪಡೆದಿರುವನು ಲಂಕೆಯ ಮೇಲೆ ದಂಡೆತ್ತಿ ರಾವಣನನ್ನು ಸಂಹರಿಸಿ ಸೀತಾದೇವಿಯನ್ನು ಕರೆದುಕೊಂಡು ಅಯೋಧ್ಯೆಗೆ ಹೊರಟಾಗ ಶ್ರೀರಾಮನೊಂದಿಗೆ ಲಕ್ಷ್ಮಣ, ಹನುಮಂತ, ಸುಗ್ರೀವ,ಜಾಂಬವಂತ,ಅಂಗದ ಮೊದಲಾದವರು ಹೊರಟರು. ಮಾರ್ಗಮಧ್ಯದಲ್ಲಿ ತಿರುಪತಿಯಲ್ಲಿ ಕೆಲ ಸಮಯ ವಿಶ್ರಮಿಸಿದರೆಂದು ಪ್ರತೀತಿಯಿದೆ. ಈ ಸಂದರ್ಭದಲ್ಲಿ ಜಾಂಬವಂತನು ಈ ದೇವಾಲಯ ನಿರ್ಮಿಸಿದ. ತಿರುಪತಿ ನಗರದ ಅಗ್ರ ಭಾಗದಲ್ಲಿ ವಿಶಾಲವಾದ ಸ್ಥಳದಲ್ಲಿ ಈ ದೇವಾಲಯ ನಿರ್ಮಾಣವಾಗಿದೆ.

ಗರ್ಭಗುಡಿಯಲ್ಲಿ ಕೋದಂಡ ಬಾಣಗಳಿಂದ ಕೂಡಿದ ಶ್ರೀರಾಮಚಂದ್ರನ ಮೂರ್ತಿ ಇದ್ದು ಬಲಭಾಗದಲ್ಲಿ ಸೀತಾದೇವಿಯ ವಿಗ್ರಹ ಹಾಗೂ ಲಕ್ಷ್ಮಣಸ್ವಾಮಿಯ ವಿಗ್ರಹವಿದೆ.ಇಲ್ಲಿ ಹನುಮಂತನ ಮೂರ್ತಿ ಇಲ್ಲದಿರುವುದು ವಿಶೇಷವೆನಿಸಿದೆ. ಜಾಂಬವಂತನು ಪ್ರತಿಷ್ಠಾಪಿಸಿರುವುದರಿಂದ ಇಲ್ಲಿ ಆಂಜನೇಯನ ವಿಗ್ರಹವಿಲ್ಲ. ಆದರೆ ದೇವಾಲಯದ ಹೊರ ಭಾಗದಲ್ಲಿ ಹನುಮಂತನ ಮೂರ್ತಿ ಇದೆ. ಬಸ್ ನಿಲ್ದಾಣ ಹಾಗೂ ರೈಲು ನಿಲ್ದಾಣಗಳಿಂದ ಸುಮಾರು 2 ಕಿ.ಮೀ.ದೂರದಲ್ಲಿದೆ.ಈ ದೇವಾಲಯ ತಿರುಪತಿಯಲ್ಲಿ ನೆಲೆಗೊಂಡಿರುವ ಶ್ರೀ ಕೋದಂಡರಾಮಸ್ವಾಮಿಯನ್ನು ದರ್ಶಿಸಿದರೆ ಕೋರಿಕೆಗಳು ಈಡೇರುತ್ತದೆ.

# ಶ್ರೀವೆಂಕಟಾಚಲ ಮಹಾತ್ಮೆ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್,
ಅನುವಾದ – ಶ್ರೀಮತಿ. ಎನ್. ಪಾರ್ವತಿ

ಹಿಂದಿನ ಸಂಚಿಕೆಯ ನಂತರ.....

ಭಾರತೀಯರು ಜಲದ ಪ್ರಾಮುಖ್ಯತೆಯನ್ನು ತಿಳಿದಿರುವವರು. ಅದಲ್ಲದೇ ಜಲ ಮತ್ತು ವನ ಸಂಪತ್ತನ್ನು ಪ್ರಕೃತಿಯ ಪ್ರಸಾದವೆಂದು ಆರಾಧಿಸುವವರು. ಬೆಟ್ಟಗಳಲ್ಲಿರುವ ಜಲ ಪ್ರವಾಹಗಳನ್ನು ಭಗವಂತನ ಕರುಣಾ ಪ್ರವಾಹ ಎಂದು ಪೂಜಿಸುವವರು. ಇವುಗಳನ್ನೇ ಪುಣ್ಯತೀರ್ಥಗಳೆಂದಿದ್ದಾರೆ. ಆಯಾ ತೀರ್ಥಗಳಲ್ಲಿ ಸ್ನಾನ ಮಾಡುವವರು ವಿವಿಧ ರೀತಿಗಳ ಸಂಕಷ್ಟಗಳಿಂದ ಮುಕ್ತಿ ಪಡೆಯುತ್ತಾರೆ ಎಂದು ಕಥೆಗಳ ಮೂಲಕ ಸಾಮಾನ್ಯರಿಗೆ ವಿಶ್ವಾಸವನ್ನು ಮೂಡಿಸಿರುವವರು. ಅವುಗಳಲ್ಲಿ ತಿರುಮಲೆಯಲ್ಲಿ ಹರಿಯುವ ಕಪಿಲ ತೀರ್ಥವೂ ಒಂದು. ಈ ತೀರ್ಥವು ಅನೇಕ ತೀರ್ಥಗಳಿಗೆ ಸಮ ಎಂದು ವಿಷದೀಕರಿಸುವ ವೃತ್ತಾಂತವನ್ನು ಈ ಸಂಚಿಕೆಯಲ್ಲಿ ವರ್ಣಿಸುತ್ತೇನೆ.

ಶೌನಕಾದಿ ಮುನಿಗಳ ಶ್ರದ್ಧಾಸಕ್ತಿಗಳನ್ನು ಗುರುತಿಸಿದ ಸೂತನು-ಮುನಿಗಳೇ ವಾಲ್ಮೀಕಿಯು ಹೇಳಿರುವ ಆತ್ಮಾರಾಮ ವೃತ್ತಾಂತವನ್ನು ನಿಮಗೆ ತಿಳಿಯಪಡಿಸುತ್ತೇನೆ.

ಮಧ್ಯ ಪ್ರದೇಶದಲ್ಲಿ ಆತ್ಮಾರಾಮ ಎಂಬ ಒಬ್ಬ ಬ್ರಾಹ್ಮಣನಿದ್ದನು. ಸತ್ ಬ್ರಾಹ್ಮಣನು ಒಳ್ಳೆಯ ನಡೆತೆ ಉಳ್ಳವನು. ಪಂಡಿತನು ಧರ್ಮ ಕರ್ಮ ನಿಷ್ಠಪರನು ಬ್ರಾಹ್ಮಣರನ್ನು ಗೌರವಿಸುವವನು. ಆತನು ಮಾಡುವ ದಾನ ಧರ್ಮಗಳಿಗೆ ಪಾರವೇ ಇರಲಿಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿಯೇ ಜೀವಿಸುತ್ತಿದ್ದ ಆತ್ಮಾರಾಮನ ತಂದೆಯ ಸಂಪಾದನೆ ಎಲ್ಲಾ ಖರ್ಚಾದ ನಂತರ ದರಿದ್ರನಾದನು.

ಆತ್ಮಾರಾಮನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಹಿಂದಿನಿಂದಲೂ ನಡೆಸಿಕೊಂಡು ಬಂದಿದ್ದ ದೇವತಾ ಪೂಜೆ, ಬ್ರಾಹ್ಮಣರ ಸೇವೆ ಮಾಡಲು ಹಣವಿಲ್ಲದೆ ಊರನ್ನು ಬಿಟ್ಟನು. ತಿರುಪತಿಗೆ ಬಂದನು. ಸಪ್ತಗಿರಿಗಳ ಕೆಳಗೆ ಕಪಿಲ ತೀರ್ಥದಲ್ಲಿ ಸ್ನಾನ ಮಾಡಿದನು. ಸ್ನಾನ ಮಾಡಿದ ನಂತರ ಕಪಿಲೇಶ್ವರನನ್ನು ಪೂಜಿಸಿದನು. ನಂತರ ದಾರಿ ಕಾಣದೇ ಕಪಿಲ ತೀರ್ಥದಿಂದ ತೆರಳಿ ದಾರಿಯಲ್ಲಿ ಸಿಕ್ಕ ಏಳು ತೀರ್ಥಗಳಲ್ಲಿ ಪವಿತ್ರ ಸ್ನಾನವನ್ನು ಮಾಡಿ ಬೆಟ್ಟವನ್ನು ಹತ್ತುತ್ತಿದ್ದನು. ಆ ಬೆಟ್ಟಗಳ ಮಧ್ಯೆ ಒಂದು ಗುಹೆ ಇತ್ತು. ಆ ಗುಹೆಯಲ್ಲಿ ಒಬ್ಬ ಮುನಿ ಧ್ಯಾನನಿಷ್ಠನಾಗಿದ್ದನು.

ಆತ ಯಾರೆಂದರೆ ಸನತ್ಕುಮಾರನು. ಬೆಟ್ಟವನ್ನು ಹತ್ತುತ್ತಿದ್ದ ಆತ್ಮಾರಾಮನು ನಿರ್ಜನ ಪ್ರದೇಶದಲ್ಲಿ ಧ್ಯಾನನಿಷ್ಠನಾಗಿದ್ದ ಮುನಿಯನ್ನು ನೋಡಿ ಆಶ್ಚರ್ಯಚಕಿತನಾದನು. ಮಹಾತ್ಮರ ದರ್ಶನದಿಂದ ಪುನೀತರಾಗೋಣ ಎಂದುಕೊಂಡು ಆ ಮುನಿಗೆ ಸಾಷ್ಟಾಂಗವೆರಗಿದನು. ಮುನಿ ತನ್ನ ಎದುರಿಗಿದ್ದ ಬ್ರಾಹ್ಮಣನನ್ನು ಪ್ರಸನ್ನ ದೃಷ್ಟಿಯಿಂದ ನೋಡಿದನು. ಮುನಿಯ ಪ್ರಸನ್ನದೃಷ್ಟಿಯನ್ನು ನೋಡಿ ತಬ್ಬಿಬ್ಬಾದ ಆತ್ಮಾರಾಮನು,

ತಪವರೇಣ್ಯರೇ , ಮಹಾತ್ಮ! ನಿರ್ಮಲ ಹೃದಯೀ ! ನೀವು ಮಹಾನುಭಾವರು. ನಾನು ಪಾಪಾತ್ಮನು. ನಿಮ್ಮ ಕೃಪಾಕಟಾಕ್ಷದಿಂದ ನಾನು ಪುನೀತನಾಗಿದ್ದೇನೆ. ದಾರಿದ್ರ್ಯ ಬಾಧೆಗಳಿಂದ ಮನೆಯನ್ನು ತ್ಯಜಿಸಿದ್ದೇನೆ, ಸಂಸಾರದಿಂದ ದೂರನಾಗಿದ್ದೇನೆ, ದಿಕ್ಕು ತೋಚದೇ ಅಲೆಯುತ್ತಿರುವಾಗ ನಿಮ್ಮ ದರ್ಶನಭಾಗ್ಯ ಸಿಕ್ಕಿತು. ನೀವೇ ನನಗೆ ದಿಕ್ಕು. ನನ್ನ ಕಷ್ಟಕಾಲವನ್ನು ನೀವೇ ಗುರುತಿಸಿ,ಈ ಕಷ್ಟದಿಂದ ಪಾರಾಗುವ ಮಾರ್ಗವನ್ನು ಸೂಚಿಸಿ,ಎಂದು ದೈನ್ಯನಾಗಿ ಪ್ರಾರ್ಥಿಸಿದನು.

ಸನತ್ಕುಮಾರನು ಬ್ರಾಹ್ಮಣನ ದೈನ್ಯ ಪ್ರಾರ್ಥನೆಯನ್ನು ಆಲಿಸಿದನು. ಹೇಳಿದ್ದೆಲ್ಲಾ ಸತ್ಯ ಎಂದು ಮುನಿಗೂ ತಿಳಿಯಿತು. ಆತನನ್ನು ಅನುಗ್ರಹಿಸಿಬೇಕೆಂದು ಮನಸ್ಸು ಮಾಡಿದನು ವಿಪ್ರವರ್ಯ ಆಯಾಸ ಏಕೆ? ನೀನು ಮಾಡಿದ ಪಾಪ ದೂರವಾಗುವ ಕಾಲ ಬಂದಿದೆ. ನೀನು ಮಾಡಿರುವ ಪಾಪ ಏನು ಎಂಬುದನ್ನು ಕೇಳು ಹೇಳುತ್ತೇನೆ.

ಹಿಂದಿನ ಜನ್ಮದಲ್ಲಿ ನೀನು ಲೋಭಿಯಾಗಿದ್ದೆ ಯಾರಿಗೂ ಏನೂ ಕೈಯೆತ್ತಿ ಕೊಡುತ್ತಿರಲಿಲ್ಲ ಅದಲ್ಲದೆ ೀ ಭಗವಂತನ ಸ್ಮರಣೆಯನ್ನು ಮಾಡಿದವನಲ್ಲ. ನಿನ್ನ ದುರ್ಗುಣ ಏನೆನ್ನುವುದನ್ನು ಹೇಳುತ್ತೇನೆ. ದಾನ ಕೊಡುವವರ ಹಾಗೂ ದಾನ ತೆಗೆದುಕೊಳ್ಳುವವರ ಮಧ್ಯೆ ವೈಶಮ್ಯವನ್ನು ಹುಟ್ಟಿಸಿ ಅವರನ್ನು ಕಲುಷಿತ ಮಾಡಿದ ಪಾಪನು ನೀನು. ಹೋಗಲಿ ನೀನು ಶುದ್ಧನಿದ್ದೀಯೋ, ಊಹೂಂ ಆಚಾರ ಭ್ರಷ್ಟನು, ಯಾರು ಏನೇ ಕೊಟ್ಟರೂ ಆಚಾರದ ಅರಿವಿಲ್ಲದೇ ಎಲ್ಲವನ್ನೂ ಸ್ವೀಕರಿಸಿದ್ದೀಯ. ಎಷ್ಟೋ ಜನರಿಗೆ ಮೋಸ ಮಾಡಿದ್ದೀಯಾ, ಹಣವನ್ನು ದೋಚುವುದರಲ್ಲಿ ಮಾತ್ರ ತುಂಬಾ ಜಾಗ್ರತೆಯನ್ನು ವಹಿಸುತ್ತಿದ್ದೆ. ನಿನ್ನ ಜೀವನದಲ್ಲಿ ದಾನ ಶಬ್ದಕ್ಕೆ ಅರ್ಥವೇ ಇಲ್ಲದೇ ಹೋಗಿತ್ತು. ಇಷ್ಟೆಲ್ಲಾ ಪಾಪವನ್ನು ಮಾಡಿದ್ದರೂ ಕಪಿಲ ತೀರ್ಥದಲ್ಲಿ ಸ್ನಾನ ಮಾಡಿದ್ದರಿಂದ ನಿನ್ನ ಪಾಪರಾಶಿ ನಾಶವಾಗಿದೆ. ಇದಷ್ಟೇ ಸಾಲದು. ನೀನು ಪುನಃ ಹಣವಂತನಾಗಬೇಕಾದರೆ ನೀನು ಶ್ರೀಪದ್ಮಾಲಯ ಕೃಪೆ ಹೊಂದಬೇಕು. ಶ್ರೀಹರಿ ವೃಕ್ಷಸ್ಥಳದಲ್ಲಿರುವ ವ್ಯೂಹಲಕ್ಷ್ಮಿ ಮಾತ್ರವೇ ಈ ಕೃಪೆಯನ್ನು ಅನುಗ್ರಹಿಸುವಂತಳು. ಆ ತಾಯಿ ಯಾರೆಂದು ಆಲೋಚಿಸುತ್ತಿದ್ದೀಯ? ಆ ತಾಯಿ ನಿನ್ನ ಕೋರಿಕೆಯನ್ನು ತೀರಿಸುವಳೇ ಎಂದು ಸಂದೇಹಿಸುತ್ತಿದ್ದಿಯ? ನಿನಗೆ ಆ ಭಯಬೇಡ.

ತಾಯಿ ದಯಾಮಳು, ಲೋಕಮಾತೆ, ಹುಣ್ಣಿಮೆ ಚಂದ್ರವದನೆಯಾದ ಆಕೆ ದರ್ಶನೀಯಳು. ಪದ್ಮಗಳನ್ನು ಕೈಯಲ್ಲಿ ಧರಿಸಿದ್ದಾಳೆ. ಆಕೆ ಮಹಾಲಕ್ಷ್ಮಿಯೇ. ಆದರೆ ವ್ಯೂಹ ಭೇದದಿಂದ ಕೀರ್ತಿಜಯ ಎಂದು ವಿಖ್ಯಾತಳಾಗಿದ್ದಾಳೆ, ಆ ತಾಯಿ ಕಾರುಣ್ಯಮಯಿ. ಎಲ್ಲದರಿಗಿಂತಲೂ ಮಹಾದೀನ ರಕ್ಷಕಿ. ತಾಯಿಯನ್ನು ಕಠೋರ ದೀಕ್ಷೆಗಳಿಂದ ಸೇವೆ ಮಾಡಬೇಕೆಂದುಕೊಳ್ಳುತ್ತಿರುವೆಯಾ? ಅದ್ಯಾವುದರ ಅವಶ್ಯಕತೆ ಇಲ್ಲ. ಅನಾಯಾಸವಾಗಿ ಅನುಗ್ರಹಿಸುವ ಮಹಾತಾಯಿ ಆಕೆ. ಆದರೆ ಆ ತಾಯಿಯ ಸುಲಭ ಅನುಗ್ರಹಕ್ಕಾಗಿ ಒಂದು ಮಂತ್ರವನ್ನು ಹೇಳುತ್ತೇನೆ. ಈ ಮಂತ್ರವನ್ನು ಲಕ್ಷ್ಮೀ ಮಂತ್ರ ಎನ್ನುತ್ತಾರೆ. ಈ ಮಂತ್ರವನ್ನು ಭಕ್ತಿಯಿಂದ ಜಪಿಸು. ನಿನ್ನ ಕೋರಿಕೆಯು ತಪ್ಪದೇ ನೆರವೇರುತ್ತದೆ. ಹೇಗೆ ಧ್ಯಾನ ಮಾಡಬೇಕೆಂಬ ಸ್ವಾರಸ್ಯಕರ ಮಾಹಿತಿಯನ್ನು ಬ್ರಾಹ್ಮಣನಿಗೆ ವಿಷಾದವಾಗಿ ತಿಳಿಸಿದನು. ಓ ಬ್ರಾಹ್ಮಣೋತ್ತಮ! ಲಕ್ಷ್ಮಿಮಂತ್ರ ಅನುಗ್ರಹ ಫಲ ಸಿದ್ಧಿರಸ್ತು. ಈಗಲೇ ವೆಂಕಟಾಚಲಕ್ಕೆ ತೆರಳು, ಅಲ್ಲಿ ಸ್ವಾಮಿ ಶ್ರೀನಿವಾಸನು ನಿನ್ನ ಮೊರೆಯನ್ನು ಆಲಿಸುತ್ತಾನೆ. ನಿನ್ನ ಕೋರಿಕೆಯನ್ನು ಈಡೇರಿಸುತ್ತಾನೆ ಎಂದು ಆಶೀರ್ವದಿಸಿ ಅಂತರ್ಧಾನನಾದನು. ನಂತರ ಸನತ್ಕುಮಾರನ ಆನತಿಯ ಮೇರೆಗೆ ವೆಂಕಟಗಿರಿ ಬೆಟ್ಟದ ಕಡೆ ಹೆಜ್ಜೆ ಹಾಕಿದನು.

ಲಕ್ಷ್ಮಿ ಮಂತ್ರವನ್ನು ಜಪಿಸುತ್ತಾ ಪಾವನ ತೀರ್ಥಗಳಲ್ಲಿ ಸ್ನಾನ ಮಾಡುತ್ತಾ ಕೊನೆಗೆ ಸ್ವಾಮಿ ಪುಷ್ಕರಣಿಯಲ್ಲಿ ಮುಳುಗಿ ಹರಿ ಧ್ಯಾನವನ್ನು ಮಾಡುತ್ತಿದ್ದನು. ಆತ್ಮಾರಾಮನ ಧ್ಯಾನಕ್ಕೆ ಸಂತೃಪ್ತನಾದ ಹರಿಯು ಭೂ ನೀಲರೊಂದಿಗೆ ಪ್ರತ್ಯಕ್ಷನಾದನು. ಆತ್ಮಾರಾಮನು ಆ ಸ್ವಾಮಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದನು. ಕೂಡಲೇ ಫಲಸಿದ್ಧಿಸಿದ್ದಕ್ಕೆ ಸಂತೋಷ ಪಡುತ್ತಾ ಮೂಕನಾಗಿ ತಟಸ್ಥನಾಗಿ ನಿಂತನು. ಆತನ ಸಂದಿಗ್ಧ ಸ್ಥಿತಿಯನ್ನು ಗುರುತಿಸಿದ ಸ್ವಾಮಿಯು "ಆತ್ಮಾರಾಮ ಅನವಶ್ಯಕವಾಗಿ ಏಕೆ ಭಯಪಡುತ್ತೀಯ ವ್ಯೂಹ ಲಕ್ಷ್ಮಿಯ ಕಟಾಕ್ಷವು ನಿನಗೆ ದೊರೆತಿದೆ. ಆಯುರಾರೋಗ್ಯ ಭಾಗ್ಯಗಳಿಂದ ವೃದ್ಧಿ ಹೊಂದುತ್ತೀಯ ಹಾಗೆಯೇ ವಿಜ್ಞಾನನಿಷ್ಠೆ, ಅಭ್ಯುನ್ನತಿ ಸಿದ್ಧಿಸುತ್ತದೆ ಎಂದು ಅನುಗ್ರಹಿಸಿದನು. ಅನಂತರ ಅಂತರ್ಧಾನನಾದನು. ಆತ್ಮಾರಾಮನು ನಡೆದ ಘಟನೆಗಳನ್ನು ಮೆಲುಕು ಹಾಕುತ್ತಾ ಸ್ವಾಮಿಯು ಕಣ್ಣ ಮುಂದೆ ಸಾಕ್ಷಾತ್ಕರಿಸಿ ಅಂತರ್ಧಾನನಾದನಲ್ಲವೇ? ಇದು ನಿಜವೇ? ಕನಸೇ? ಎಂದು ಆಲೋಚಿಸುತ್ತಿದ್ದನು.

- ಮುಂದುವರೆಯುತ್ತದೆ.

## ಶ್ರೀ ಕೋದಂಡರಾಮ ಆಲಯ, ಚಂದ್ರಗಿರಿ

ಚಂದ್ರಗಿರಿಯಲ್ಲಿರುವ ಶ್ರೀಕೋದಂಡರಾಮನನ್ನು ದರ್ಶಿಸಿದರೆ ಕುಟುಂಬದ ಸದಸ್ಯರ ನಡುವೆ ಅನ್ಯೋನ್ಯತೆಯುಂಟಾಗುತ್ತದೆಯೆಂದು ಪ್ರಖ್ಯಾತವಾಗಿದೆ. ಚಂದ್ರಗಿರಿ ಪ್ರಾಂತ್ಯ ವಿಜಯನಗರದ ಅರಸರ ಆಳ್ವಿಕೆಗೊಳಪಟ್ಟಿತ್ತು. ವಿಜಯನಗರದ ಚಕ್ರವರ್ತಿಗಳು ಆಗಾಗ ಇಲ್ಲಿಗೆ ಬರುತ್ತಿದ್ದರು. ಇಲ್ಲಿಂದ ತಿರುಮಲೆಗೆ ತೆರಳಿ ಶ್ರೀವೆಂಕಟೇಶ್ವರನನ್ನು ದರ್ಶಿಸಿ ಸೇವೆಸಲ್ಲಿಸುತ್ತಿದ್ದರು. ಇವರ ಸಾಮಂತನು 16 ನೇ ಶತಮಾನದಲ್ಲಿ ಇಲ್ಲಿಗೆ ಬಂದು ವಿಶ್ರಮಿಸುತ್ತಿದ್ದಾಗ, ಸ್ವಪ್ನದಲ್ಲಿ ಸ್ವಾಮಿಯು ಸಾಕ್ಷತ್ಕಾರನಾಗಿ ದೇವಾಲಯ ನಿರ್ಮಿಸಿ ತನ್ನನ್ನು ಪ್ರತಿಷ್ಠಾಪಿಸ ಬೇಕೆಂದು ಹೇಳಿದನಂತೆ. ಅದರಂತೆ ಆ ಸಾಮಂತನು ಈ ದೇಗುಲ ನಿರ್ಮಿಸಿದ. ಗರ್ಭಗೃಹದಲ್ಲಿ ಸೀತಾಸಮೇತ ಶ್ರೀರಾಮ ಚಂದ್ರನು ತನ್ನೆಲ್ಲ ಸೋದರರೊಂದಿಗೆ ದರ್ಶನ ನೀಡುತ್ತಿರುವನು. ಇಕ್ಕೆಲಗಳಲ್ಲಿ ಗರುತ್ಮಂತನು ಹಾಗೂ ಹನುಮಂತನು ಇರುವನು. ಈ ಎಲ್ಲ ವಿಗ್ರಹಗಳು ಏಕಪೀಠದಲ್ಲಿರುವುದು ಇಲ್ಲಿನ ವಿಶೇಷವೆನಿಸಿದೆ.

ಚಂದ್ರಗಿರಿ ತಿರುಪತಿಯಿಂದ 15 ಕಿ.ಮೀ. ದೂರದಲ್ಲಿದೆ. ಈ ಸ್ವಾಮಿಯ ಸಂದರ್ಶನದಿಂದ ಕುಟುಂಬದ ಸದಸ್ಯರ ನಡುವಿನ ಬಾಂಧವ್ಯ ವೃದ್ಧಿಸುತ್ತದೆ.

ಏಪ್ರಿಲ್ ತಿಂಗಳ

# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ

ಅನುವಾದ- ಕೆ.ಎನ್.ಎಸ್

**ಮೇಷ**

ಹೊಸ ಸ್ಥಳಗಳ ಪ್ರಯಾಣ ಸುಖಕರ. ಆರೋಗ್ಯದಲ್ಲಿ ವ್ಯತ್ಯಾಸ, ಮನೋಚಿಂತೆ, ಲಕ್ಷ್ಮೀಕಟಾಕ್ಷ ಸಂಪೂರ್ಣ ವಾಗಿರುತ್ತದೆ.ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಪ್ರಗತಿ.

**ವೃಷಭ**

ವರ್ಷಾರಂಭದಿಂದ ಈ ರಾಶಿಯವರಿಗೆ ಉತ್ತಮ ಫಲ ದೊರೆಯುತ್ತದೆ.ವ್ಯಾಪಾರ ವ್ಯವಹಾರದಲ್ಲಿ ನಷ್ಟ ವಾದರೂ ಗುರುಕೃಪೆಯಿಂದ ದ್ರವ್ಯಲಾಭ,ಧನಲಾಭ,ವೃತ್ತಿ ವ್ಯಾಪಾರದಲ್ಲಿ ಧನಲಾಭ.

**ಮಿಥುನ**

ಈ ರಾಶಿಯವರಿಗೆ ಲಾಭ ಸ್ಥಾನದಲ್ಲಿ ರವಿ ಗುರು ಸಂಚಾರದಿಂದ ಅನುಕೂಲ ಫಲವಿರುತ್ತದೆ.ಬಂಧು-ಬಾಂದವರ ವಿರೋಧ, ಕಾರ್ಯದಲ್ಲಿ ನಷ್ಟದ ಭಯ,ಸ್ವ ಪ್ರಯತ್ನ ದಿಂದ ಧನಲಾಭ ವಿದ್ಯಾರ್ಥಿಗಳಿಗೆ ಪ್ರಗತಿ ಯಶಸ್ಸು.

**ಕರ್ಕಾಟಕ**

ಧನ-ದ್ರವ್ಯಲಾಭ ವೃತ್ತಿ ಕ್ಷೇತ್ರದಲ್ಲಿ ಪ್ರಿಯವಾದ ವಾರ್ತೆ, ಆರ್ಥಿಕ ಹಾಗೂ ಧರ್ಮವಾಗಿ ಬರಬೇಕಾದದ್ದು ನಿಮ್ಮ ಕೈಸೇರಲಿದೆ. ನಿತ್ಯ ಸೂರ್ಯ,ಸುಬ್ರಮಣ್ಯ ಆರಾಧನೆ,ಅಶ್ವಿನಿ ದೇವತೆಗಳು,ಧನ್ವಂತರಿ ಮೊದಲಾದ ವಿಷ್ಣು ದೇವತೆಗಳನ್ನು ಪೂಜಿಸಬೇಕು.

**ಸಿಂಹ**

ದೂರ ಪ್ರದೇಶಕ್ಕೆ ಹೋಗುವ ಅವಶ್ಯಕತೆಯಿರುತ್ತದೆ. ಆರೋಗ್ಯದಲ್ಲಿ ಏರುಪೇರು.ಶತ್ರುಭಯ, ವೃತ್ತಿರಂಗ ದಲ್ಲಿ ಸ್ವದೇಶ ಮತ್ತು ವಿದೇಶಗಳಿಗೆ ಸ್ಥಾನಪಲ್ಲಟ, ಸುಖ ವಾರ್ತೆ ಗಳು ಬರಲಿದೆ.

**ಕನ್ಯ**

ಕೋಪಾಧಿಕ್ಯ, ಲಕ್ಷ್ಮೀಕಟಾಕ್ಷ ಲಭ್ಯವಿದೆ, ಸ್ಥಾನ ಪಲ್ಲ ಟದ ಸಂಭವವಿದೆ. ಪ್ರಯಾಣದ ಸಮಸ್ಯೆ. ಈ ಕಾಲ ದಲ್ಲಿ ಅಧಿಕಾರ ಅಥವಾ ಸರ್ಕಾರದಿಂದ ಪ್ರತಿ ಫಲಲಭಿಸುತ್ತದೆ.

**ತುಲಾ**

ಆರ್ಥಿಕ ವೃದ್ಧಿ, ವ್ಯಾಪಾರದಲ್ಲಿ ಲಾಭ, ಉದ್ಯೋಗದಲ್ಲಿ ಅನುಕೂಲ ಸಮಯ, ಶತ್ರುಭಯ, ಸಂತೋಷಕರ ಸನ್ನಿವೇಷ ಬದಗುವ ಸಾಧ್ಯತೆ. ವಿದ್ಯಾರ್ಥಿಗಳು ಆಲಸ್ಯ ಬಿಟ್ಟು ಓದಿದರೆ ಪ್ರಗತಿಯಿದೆ.

**ವೃಶ್ಚಿಕ**

ವೃತ್ತಿರಂಗದಲ್ಲಿ ಧನಲಾಭ ಮತ್ತುಪ್ರಗತಿ, ಗೃಹದಲ್ಲಿ ಸಂತೋಷ ವಾರ್ತೆ. ನಿಮ್ಮ ಪ್ರಯತ್ನಗಳು ಸಫಲ ವಾಗುತ್ತದೆ. ಕೋರ್ಟು ವ್ಯವಹಾರದಲ್ಲಿ ಅನುಕೂಲ. ಹೊಸ ಪರಿಚಯಗಳು ಏರ್ಪಡುತ್ತವೆ.

**ಧನಸ್ಸು**

ವೃತ್ತಿರಂಗದಲ್ಲಿ ಶುಭಫಲ, ಸೌಖ್ಯವೃದ್ಧಿ, ಧನಲಾಭ. ಸರ್ಕಾರದಿಂದ ಸನ್ಮಾನಗಳು ನಡೆಯುತ್ತವೆ. ಗೌರವ ಮರ್ಯಾದೆ ಹೆಚ್ಚುತ್ತದೆ. ಅಕ್ಕ ತಂಗಿಯರಿಗೆ,ಅನ್ನ ತಮ್ಮಂದಿರಿಂದ ಅದೃಷ್ಟ ಕೂಡಿ ಬರುತ್ತದೆ. ಕುಟುಂಬ ಗೌರವ ಹೆಚ್ಚಾಗುತ್ತದೆ.

**ಮಕರ**

ವ್ಯಾಕುಲತೆ,ಕಾರ್ಯಕ್ಷೇತ್ರದಲ್ಲಿ ಶುಭವಾರ್ತೆ, ವಿದ್ಯಾರ್ಥಿಗಳಿಗೆ ಶ್ರೀಹಯಗ್ರೀವ ಮತ್ತು ವರಾಹ ಸ್ವಾಮಿ ದರ್ಶನದಿಂದ ಓದಿನಲ್ಲಿ ಅನುಕೂಲ ಸಾಧ್ಯತೆ, ಉದ್ಯೋಗಸ್ಥರಿಗೆ ಪದೋನ್ನತಿ, ವ್ಯಾಪಾರ ದಲ್ಲಿ ಧನಲಾಭ.

**ಕುಂಭ**

ಬುದ್ಧಿಕ್ಲೇಶ ಉಂಟಾಗುವ ಸಾಧ್ಯತೆ, ಲಕ್ಷ್ಮೀ ಕಟಾಕ್ಷ, ಗೃಹದಲ್ಲಿ ಶುಭಕಾರ್ಯ ಸಂಭವ. ಧನವೃದ್ಧಿ ಪ್ರಯಾಣ ಸುಖಕರ.

**ಮೀನ**

ಬಂಧುಮಿತ್ರರ ಜೊತೆ ಸೌಖ್ಯ, ದ್ರವ್ಯ ಮತ್ತು ಧನಲಾಭ ಕಾರ್ಯಕ್ಷೇತ್ರದಲ್ಲಿ ಶುಭಫಲ,ವ್ಯಾಧಿಭಯ,ಹೆಚ್ಚಿನ ಸ್ಥಾನ ಹಾಗೂ ಗೌರವಕ್ಕಾಗಿ ಪರಿಶ್ರಮ.

# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1.ಯುಗಾದಿಯಂದು ಪೂಜೆ ಮಾಡಬೇಕಾದ ಪ್ರಮುಖ ದೇವರು ಯಾವುದು?**

**ಉತ್ತರ :** ಯುಗಾದಿಯಂದು ಇಷ್ಟದೇವತಾ ಪೂಜೆಯೊಂದಿಗೆ ಬ್ರಹ್ಮ ದೇವರ ಮತ್ತು ಅವರ ಶರೀರೋಪಾಧೆಯಲ್ಲಿರುವ ಕಾಲಪುರುಷನ ಆರಾಧನೆಯನ್ನು ವಿಶೇಷವಾಗಿ ಹೇಳಲಾಗಿದೆ. ವಿಶ್ವಸೃಷ್ಟಿಯಾದ ದಿನವೇ ಯುಗಾದಿ. ಆದುದರಿಂದ ಸೃಷ್ಟಿಕರ್ತನಾದ ಆದಿಪಿತಾಮಹನ ರೂಪದಲ್ಲಿ ಅಂದು ಭಗವಂತನನ್ನು ಪೂಜಿಸುವುದು ಅರ್ಥಪೂರ್ಣವಾಗಿದೆ. ಸಂವತ್ಸರವು ಕಾಲಮಾನದ ವಿಶಿಷ್ಟವಾದ ರೂಪ. ಹಾಗಾಗಿ ಅದರ ಪ್ರಾರಂಭದ ದಿವಸದಲ್ಲಿ ಕಾಲಪುರುಷನನ್ನೂ ಪೂಜಿಸುವುದು ಉಚಿತವಾಗಿದೆ. ಪ್ರಜಾಪತಿಯನ್ನೂ, ಕಾಲಪುರುಷನನ್ನು ಒಟ್ಟಿಗೆ ಪೂಜಿಸುವುದು. ಪ್ರಜಾಪತಿಯೇ ಸಂವತ್ಸರವು. ಸಂವತ್ಸರವೇ ಪ್ರಜಾಪತಿ. ಹಾಗಾಗಿ ಅವನನ್ನು ಆರಾಧಿಸಿ ಅವನಿಗೆ ಧನ್ಯವಾದಗಳನ್ನೂ ಅರ್ಪಿಸುವುದು ಉಚಿತವಾಗಿದೆ.

**2.ಯುಗಾದಿಯಂದು ಬೇವುಬೆಲ್ಲವನ್ನೇ ಯಾಕೆ ಸ್ವೀಕರಿಸಬೇಕು?**

**ಉತ್ತರ:** ಬೇವು ಅಸ್ಥಿಗತವಾದ ರೋಗವನ್ನು ವಿಷದ ಸೋಂಕನ್ನೂ ನಿವಾರಿಸುವ ಮಹೌಷಧಿ. ಕಹಿಯಾಗಿರುವ ಬೇವಿನ ಎಲೆಯಲ್ಲಿ ವಾತದ ದೋಷವಿದೆ. ಆದರೆ ಸಿಹಿಯಾದ ಬೆಲ್ಲದೊಡನೆ ಅದು ಸೇರಿದರೆ ಆ ದೋಷವು ಶಮನ ಹೊಂದುತ್ತವೆ. ಜೀವನದ ಸುಖದುಃಖಗಳನ್ನು ಸಮವಾಗಿ ಭಾವಿಸಿ ಜೀವನವನ್ನು ನಡೆಸುವ ಸಾಮರ್ಥ್ಯವನ್ನು ಹೊಂದುವಂತಾಗಲಿ ಎಂಬುದರ ಸಂಕೇತ. ಈ ದಿವಸ ದೇವರ ನೈವೇದ್ಯಕ್ಕೆ ವಿಶೇಷವಾಗಿ ಬೇವಿನ ಚಿಗುರೆಲೆಯ ಕಲ್ಕವನ್ನು ಹೇಳಿರುವುದೇ ಯುಗಾದಿ ಹಬ್ಬದ ಪ್ರಧಾನ ದೇವತೆಗೆ ಪ್ರಿಯವಾದ ನೈವೇದ್ಯವಾಗಿದೆ. ದೇವರಿಗೆ ನಿವೇದಿಸಿದನ್ನು ಪ್ರಸಾದ ರೂಪದಲ್ಲಿ ಸೇವಿಸುವುದರಿಂದ ಆ ದೇವತೆಯ ಸುಪ್ರಸನ್ನತೆ ಸಾಕ್ಷಾತ್ಕಾರಗಳಿಗೆ ಅನುಗುಣವಾದ ಕೇಂದ್ರಗಳು,ಒಳಗಿನ ಪ್ರಕೃತಿಯಲ್ಲಿ ವಿಕಾಸಗೊಳ್ಳುವುದಕ್ಕೆ ಸಹಾಯವಾಗುತ್ತದೆ.

**3.ಯುಗಾದಿಯಂದು ಕೊಡುವ ದಾನದ ಮಹತ್ವವೇನು?**

**ಉತ್ತರ :** ಯುಗಾದಿಯ ಶುಭದಿನದುಂದು ಮನೆ ಮಂದಿಯೆಲ್ಲ ಸೇರಿ ಕೇಳುವ ಪಂಚಾಂಗ ಶ್ರವಣವು ಮುಂದಿನ ವರುಷದುದ್ದಕ್ಕೂ ಜರುಗುವ ಒಳಿತು ಕೆಡುಕು, ವಿದ್ಯಮಾನಗಳ ಮುನ್ನೋಟವು ಮುಂಬರುವ ದಿನಗಳ ಬಗ್ಗೆ ಭವಿಷ್ಯದ ಎಡರು ತೊಡರಗಳ ನಿವಾರಣೆಗೆ ಸ್ಪಷ್ಟಯೋಜನೆ ರೂಪಿಸಲು ಪ್ರೇರಣೆ ಕೊಡುವುದು. ಹೊಸ ವರುಷದ ಪ್ರಾರಂಭವಾದ್ದರಿಂದ ಈಗಿನಿಂದಲೇ ಚೆನ್ನಾಗಿ ಚಿಂತಿಸಿ ಯೋಚಿಸಿ ಸ್ಥಿತ ಪ್ರಜ್ಞತೆಯಿಂದ ಮುನ್ನುಡಿ ಇಡುವಂತಾಗಬೇಕೆಂಬ ಮಹಾಪಾಠವನ್ನು ಸೂಚ್ಯವಾಗಿ ಬೋಧಿಸುವುದರ ದ್ಯೋತಕವೇ ಪಂಚಾಂಗ ಶ್ರವಣ.

**4. ಯುಗಾದಿಯಂದು ಕೊಡುವ ದಾನದ ಮಹತ್ವವೇನು?**

**ಉತ್ತರ :** ಪ್ರತಿಯೊಂದು ಪರ್ವದಲ್ಲಿಯೂ ಯಥಾಶಕ್ತಿ ದಾನ ಮಾಡುವುದು ಪುಣ್ಯಕರ. ಯುಗಾದಿಯಲ್ಲಿ ಪ್ರಮುಖವಾಗಿ ಕೊಡಬೇಕಾಗಿರುವುದು ಪಂಚಾಂಗ, ಜಲಪಾತ್ರೆ, ವಸ್ತ್ರ, ಪಂಚಾಂಗ ಶ್ರವಣದ ಫಲವಾಗಿ ಪಂಚಾಂಗ ದಾನ ಮಾಡುವುದಾಗಿದೆ. ಯುಗಾದಿಯು ಉಷ್ಣಕಾಲದ ಪ್ರಾರಂಭವಾಗಿರುವುದರಿಂದ ಅಂದು ನೀರಿನ ಪಾತ್ರೆಗಳನ್ನು ದಾನಮಾಡುವುದು. ಅಷ್ಟೇ ಅಲ್ಲದೆ ಚೈತ್ರ ವೈಶಾಖ ಮಾಸಗಳು ಪೂರ್ತಿ ಬಂದವರಿಗೆ ನೀರು ಮಜ್ಜಿಗೆ ಪಾನಕಗಳನ್ನು ಕೊಡುವುದು ಪುಣ್ಯಕರ. ವಸ್ತ್ರದಾನ ಮಾಡುವಾಗ ಇಂದ್ರನು ವಸುಭೂಪತಿಗೆ ಅನುಗ್ರಹಿಸಿದ ದಾನ ಎಂಬ ಭಾವವಿರಬೇಕು. ದೇವತಾ ತಾದಾತ್ಮ್ಯ ಭಾವನೆಯಿಂದ ಅವುಗಳನ್ನು ದಾನ ಮಾಡಬೇಕು.

**5. ಶ್ರೀರಾಮನವಮಿ ಪಾನಕ ಕೋಸಂಬರಿಗಳ ಹಬ್ಬ ಎನ್ನಲು ಕಾರಣವೇನು?**

**ಉತ್ತರ:** ಪಾನಕ ಕೋಸಂಬರಿಗಳು ಬೇಸಿಗೆ ಕಾಲಕ್ಕೆ ತಂಪಾಗಿ ರುಚಿಕರವಾಗಿ ಹಿತವೂ ಆಗಿರುವ ದ್ರವ್ಯವಾಗಿದೆ. ಕಫ, ಪಿತ್ತಗಳ ನಿವಾರಣೆ, ಶೀತಲತೆ ಹಾಗೂ ಒಗಚು ಬೆರೆತ ಮಾಧುರ್ಯ ಇವು ಹೆಸರುಬೇಳೆಯ ಗುಣಗಳು, ಶೀತಲತೆ, ರಕ್ತಪಿತ್ತ ಮತ್ತು ಕಫಗಳನ್ನು ಹೋಗಲಾಡಿಸುವಿಕೆ, ಲಾಘವ, ತೊಗರುರುಚಿ, ಜ್ವರ ಪರಿಹಾರ ,ಇವು ಕಡಲೇಬೇಳೆಯ ಗುಣಗಳು ಅದು ಹಸಿಯಾಗಿರುವಾಗ ಅತಿ ಕೋಮಲ, ರುಚಿಕರ ಮತ್ತು ಶುಕ್ರಹರ ಆಗಿದೆ. ಆದರೆ ಅವುಗಳಲ್ಲಿ ಮಲಬದ್ಧತೆ ಮತ್ತು ವಾತವನ್ನು ಹೆಚ್ಚು ಮಾಡುವ ದೋಷವಿದೆ. ಆದರೆ ಅವುಗಳ ಜೊತೆಗೆ ಸೌತೇಕಾಯಿಯನ್ನು ಸೇರಿಸಿ ಕೋಸಂಬರಿ ಮಾಡುವುದರಿಂದ ಮಲಬದ್ದತೆಯ ದೋಷವು ಹೋಗುತ್ತದೆ. ಬೆಲ್ಲದ ಪಾನಕ ಉಪಯೋಗಿಸುವುದರಿಂದ ವಾತವು ಪರಿಹಾರವಾಗುತ್ತದೆ. ರಾಮನವಮಿಯಂದು ಉಪವಾಸವಿರುವುದರಿಂದ ಪಿತ್ತವು ಹೆಚ್ಚಾಗುವುದು. ಆದರೆ ಪಾನಕದಲ್ಲಿ ಬೇಲದಹಣ್ಣು ಮತ್ತು ನಿಂಬೆಹಣ್ಣಿನ ರಸ ಸೇರಿರುವುದರಿಂದ ಪಿತ್ತಶಮನವಾಗುತ್ತದೆ. ಶುಂಠಿ ಬೆಲ್ಲದಲ್ಲಿ ತುಪ್ಪ ಸೇರಿಸಿ ನಿವೇದಿಸುತ್ತೇವೆ. ಇದು ಕಫವಾತ ಪರಿಹಾರ ಜೀರ್ಣ ಶಕ್ತಿ ವೃದ್ಧಿಯಾಗುತ್ತದೆ. ರಾಮನವಮಿಯಂದು ನಿವೇದಿಸುವ ನೈವೇದ್ಯ ಪ್ರಸಾದವು ಆರೋಗ್ಯದ ದೃಷ್ಟಿಯಿಂದ ಬಹಳ ಉತ್ತಮವಾಗಿರುತ್ತದೆ.

# ನಮ್ಮೊಳಗೊಂದು ಆತ್ಮಾವಲೋಕನ

ಪ್ರಣವ

ನಾವು ಮಾಡುವ ಕೆಲಸ ಹೇಗಿರಬೇಕು Negativity ಅಥವಾ ಕೆಟ್ಟತನ ಅಥವಾ ಇನ್ನೊಬ್ಬರಿಗೆ ತೊಂದರೆ ಕೊಡುವ ಕೆಲಸ ನಿರಂತರವಾಗಿ ಮತ್ತು ಅದೇ ಉತ್ಸಾಹದಲ್ಲಿ ಬಹಳ ಕಾಲ ಮಾಡುವುದು ಸಾಧ್ಯವಿಲ್ಲ. ಆದರೆ ಅದೇ ರೀತಿ, Positivity ಅಥವಾ ಒಳ್ಳೆಯತನ ಅಥವಾ ಇನ್ನೊಬ್ಬರಿಗೆ ಸಹಾಯ ಮಾಡುವ ಕೆಲಸವನ್ನು ಜೀವನ ಪರ್ಯಂತ ಅದೇ ಉತ್ಸಾಹದಲ್ಲಿ ಮಾಡಬಹುದು.

ಏಕೆಂದರೆ, ಅಸೂಯೆಯಿಂದಲೋ, ಕೋಪದಿಂದಲೋ ಇನ್ನೊಬ್ಬರಿಗೆ ನಾವು ತೊಂದರೆ ಕೊಡಲು ಪ್ರಾರಂಭಿಸಿದರೆ ಅವರಿಗೆ ಆದರಿಂದ ತೊಂದರೆಯಾಗಬಹುದು ಅಥವಾ ಆಗದೇ ಇರಬಹುದು. ಆದರೆ ನಮಗೆ ಆದರಿಂದ ಲಾಭವಾಗುವ ಸಾಧ್ಯತೆ ಕಡಿಮೆ. ನಮ್ಮ ಮನಸ್ಥಿತಿ ಕೂಡ ಮಲಿನವಾಗುತ್ತಾ, ನರಮಂಡಲ ದುರ್ಬಲವಾಗುತ್ತಾ ಸಾಗುತ್ತದೆ. ಇತರರಿಂದ ಅದಕ್ಕೆ ಸಿಗುವ ಬೆಂಬಲ ಕೂಡ ಕಡಿಮೆಯಾಗುತ್ತಾ ಕೊನೆಗೆ ನಮ್ಮ ಬಗ್ಗೆಯೇ ಅವರಲ್ಲಿ ತಿರಸ್ಕಾರ ಮೂಡತೊಡಗುತ್ತದೆ.

ಇದರಿಂದ ಆತ್ಮತೃಪ್ತಿಯೂ ಸಿಗುವುದಿಲ್ಲ. ನೆಮ್ಮದಿಯೂ ಸಿಗುವುದಿಲ್ಲ. ಜೊತೆಗೆ ನೆಗೆಟಿವ್ ಕೆಲಸ ಮಾಡುವಾಗ ನಮ್ಮ ವಿರೋಧಿಗೆ ತೊಂದರೆಯಾದಾಗ ಮೇಲ್ನೋಟಕ್ಕೆ ನಮ್ಮಲ್ಲಿ ಸ್ವಲ್ಪ ಖುಷಿ ಕಾಣಿಸಿದರೂ ಆಳದಲ್ಲಿ ಮತ್ತು ದೀರ್ಘ ಕಾಲದಲ್ಲಿ ಅದರ ಪರಿಣಾಮ ನಮ್ಮ ವಿನಾಶಕ್ಕೆ ಕಾರಣವಾಗುತ್ತದೆ. ನಮಗರಿವಿಲ್ಲದೆಯೇ ನಮ್ಮ ಕೆಟ್ಟ ನಡವಳಿಕೆಗೆ ಕಾರಣವಾಗುತ್ತದೆ.

ಅದಕ್ಕೆ ಬದಲಾಗಿ ನೀವು ಯಾರಿಗಾದರೂ ಒಳ್ಳೆಯದನ್ನು ಮಾಡಲು ಪ್ರಯತ್ನಿಸಿ. ಆಗ ನಿಮ್ಮ ಮಾನಸಿಕ ವ್ಯಕ್ತಿತ್ವವೇ ವಿಭಿನ್ನವಾಗಿ ಇಡೀ ವಾತಾವರಣ ಚೇತೋಹಾರಿಯಾಗಿರುತ್ತದೆ. ನೀವು ಎಷ್ಟೇ ಸಹಾಯ ಮಾಡಿದರೂ ದಣಿವಾಗುವುದಿಲ್ಲ. ಸಹಾಯ ಮಾಡುವಾಗ ಏನಾದರೂ ನಿರೀಕ್ಷೆ ಇದ್ದರೆ ಅಥವಾ ಸಹಾಯ ಮಾಡಿ ದವರು ಉಪಕಾರವನ್ನು ಸ್ಮರಿಸದಿದ್ದರೆ ಒಂದಷ್ಟು ಬೇಸರವಾಗ ಬಹುದೇ ಹೊರತು ಅದಕ್ಕಿಂತ ಹೆಚ್ಚಿನದೇನೂ ಆಗುವುದಿಲ್ಲ. ನಮ್ಮಿಂದ ಇನ್ನೊಬ್ಬರಿಗೆ ಉಪಕಾರವಾಯಿತಲ್ಲ ಎಂಬ ಆತ್ಮತೃಪ್ತಿ ಇರುತ್ತದೆ, ಆನಂದವೂ ಸಹ ಇರುತ್ತದೆ.

ವ್ಯಾವಹಾರಿಕ ಮತ್ತು ವೈಯಕ್ತಿಕ ದ್ವೇಷ-ವಂಚನೆಯ ವಿಷಯಗಳಲ್ಲಿ ಇದು ಹೆಚ್ಚಾಗಿ ಅನ್ವಯಿಸುವುದಿಲ್ಲ. ಆದರೆ ಭಿನ್ನ ಅಭಿಪ್ರಾಯ ಮತ್ತು ಅಸೂಯಾಪರಗುಣಗಳಲ್ಲಿ ಇದರ ಪರಿಣಾಮ ಹೆಚ್ಚಾಗಿರುತ್ತದೆ.

ನಾವು ನಿಯಂತ್ರಣ ಸಾಧಿಸಬೇಕಾಗಿರುವುದೇ ಇಲ್ಲಿ, ಇನ್ನೊಬ್ಬರ ಬಗ್ಗೆ ಕೆಟ್ಟ ಮಾಹಿತಿ ಹಂಚುವುದಕ್ಕಿಂತ ಸಾಧ್ಯವಾದರೆ ಒಳ್ಳೆಯದನ್ನು ಹಂಚಿಕೊಳ್ಳೋಣ. ನಾವು ಯಾರು ಪರಿಪೂರ್ಣರಲ್ಲ. ಒಂದಲ್ಲ ಒಂದು ಸಂದರ್ಭದಲ್ಲಿ ನಾವು ಕೂಡ ಯಾವುದೋ ರೂಪದ ತಪ್ಪೆಸಗಿರುವ ಸಾಧ್ಯತೆ ಇದ್ದೇ ಇರುತ್ತದೆ. ಅದನ್ನು ಅವರವರ ಆತ್ಮಾವಲೋಕನಕ್ಕೆ ಬಿಟ್ಟು ನಾವು ಮಾತ್ರ ಸಾಧ್ಯವಾದಷ್ಟು ಸಕಾರಾತ್ಮಕ ಪ್ರವೃತ್ತಿಯನ್ನು ಬೆಳೆಸಿಕೊಳ್ಳೋಣ.

**ಭಕ್ತರು ದೇವಸ್ಥಾನದಲ್ಲಿ ಮೌನವನ್ನು ಆಚರಿಸಬೇಕು.**

**ಜೊತೆಗೆ "ಓಂ ನಮೋ ವೇಂಕಟೇಶಾಯ" ಎಂದು ನಾಮ ಸ್ಮರಣೆಯನ್ನು ಧ್ಯಾನಿಸಬೇಕು.**

**ಕ್ಯೂಲೈನ್‌ನಲ್ಲಿ ಹೋಗುವಾಗ ಗೋವಿಂದ ನಾಮಸ್ಮರಣೆಯನ್ನು ಮಾಡಬೇಕು.**

**ಬೇರೆಯವರನ್ನು ಸಂಬೋಧನೆ ಮಾಡುವಾಗ "ಗೋವಿಂದಾ" ಎಂದು ಸಂಬೋಧನೆ ಮಾಡೋಣ.**

**ಇದರಿಂದ ಯಾವಾಗಲೂ ದೇವರ ಸ್ಮರಣೆಯಲ್ಲಿಯೇ ಇರಬೇಕು.**

ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....



ಈ ಗೊಂಬೆಯನ್ನು ನೋಡಿ ಬಣ್ಣವನ್ನು ತುಂಬಿರಿ.

1. ಬಿಸಿಲು ಕಾಲದ ವಸ್ತುಗಳು
2. ಶ್ರೀರಾಮರಿಗೆ ನೈವೇದ್ಯಗಳು
3. ಯುಗಾದಿ ಪಚ್ಚಡಿಗೆ ಬೇಕಾಗುವ ಸಾಮಾಗ್ರಿಗಳು

ಮೇಲೆ ಹೇಳಿರುವ ಹಬ್ಬ ಹರಿದಿನಗಳು ಸಂಬಂಧಿಸಿದ ಚಿತ್ರದ ಹತ್ತಿರವಿರುವ ರೌಡ್‌ನಲ್ಲಿ ಆ ಸಂಖ್ಯೆಯನ್ನು ಹಾಕಿ



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಇ ಊ ಗೆ ಲ್ಲ ದ್ದು ಬ ರ ರೆ ಲ್ಲ

ಹ ದ್ದ ರ ಕ ಸ ವ ಸ ಕೊ ನೆ

ಉತ್ತರ: ಇದ್ದಲ್ಲಿ ಹೊಗೆ ಇದ್ದರೆ ಕಸವಿರೂ ಹೊಗೆ




ಮಕ್ಕಳೆ ರಾಮಧೂತ ಹನುಮನಿಗೆ ಸೀತಾರಾಮನ ಹತ್ತಿರ ಸೇರುವುದಕ್ಕೆ ಸಂಖ್ಯೆಗಳನ್ನು ಬರೆದು ದಾರಿಯನ್ನು ತೋರಿಸಿ

1. ಮುಕ್ತೇಶ್ವರ
2. ಮಹಾದೇವ ಆಲಯ
3. ಮೊಹಾಲಿ ಮೈದಾನ
4. ಜಲಿಯನ್ ವಾಲ್‌ಬಾಗ್

ತಿರುಮಲೆ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## ರಸಪ್ರಶ್ನೆಗಳು

01.ರಾಮದಾಸರು ಎಷ್ಟು ವರ್ಷಗಳ ಕಾಲ ಸೆರೆಮನೆಯಲ್ಲಿದ್ದರು? .....

02. ಯುಗಾದಿ ಯಾವ ಮಾಸದಲ್ಲಿ ಬರುತ್ತದೆ ? .....

03.ಪ್ರಕೃತಿ ಔಷಧಗಳಲ್ಲಿ ಅಗ್ರಸ್ಥಾನ ಪಡೆದ ಔಷಧ ಯಾವುದು ? .....

04.ದೇವಲೋಕದಿಂದ ಮನುಷ್ಯ ಲೋಕಕ್ಕೆ ಯಾರು ಇಳಿದು ಬಂದರು? .....

05.ಯಾರು ಅಯೋಧ್ಯೆ ಪ್ರಜೆಗಳಲ್ಲಿ ಚೈತನ್ಯವನ್ನು ತುಂಬಿದರು? .....

06.ಆಕಾಶದಿಂದ ಮೋಡ ಯಾವ ರೂಪದಿಂದ ಭೂಮಿಗೆ ಬರುತ್ತದೆ? .....

07.ಸಾಲಿಗ್ರಾಮದಲ್ಲಿರುವ ಪ್ರಮುಖ ದೇವಾಲಯ ಯಾವುದು?.....

08.ವಿಶ್ವಾಮಿತ್ರರು ದಶರಥನ ಬಳಿ ಬಂದು ಯಾರನ್ನು ಕಾಡಿಗೆ ಕರೆದುಕೊಂಡು ಹೋದರು?.....

09.ಯಾವ ಮಾಸದಲ್ಲಿ ತಣ್ಣೀರ ಸ್ನಾನಕ್ಕೆ ಮಹತ್ವವಿದೆ? .....

10.ದರ್ಭಶಯನ ದೇವಾಲಯದಲ್ಲಿರುವ ಮೂರ್ತಿ ಯಾವ ಭಂಗಿಯಲ್ಲಿರುತ್ತಾನೆ? .....

11.ದಶರಥ ಮಾಡಿದ ಯಜ್ಞ ಯಾವುದು ? .....

12. ತಂಜೈಮಾಮಣಿಕೋವಿಲ್ ನಲ್ಲಿರುವ ಸ್ವಾಮಿಯ ಹೆಸರೇನು? .....

13. ಸುಬ್ಬರಾಯರ ಅಂಕಿತ ಏನು ? .....

14.ಅನ್ನಮಾಚಾರ್ಯರು ಯಾರ ಅಂಶ ? .....

15.ಯಾವ ತೀರ್ಥದಲ್ಲಿ ಸ್ನಾನ ಮಾಡಿದರೆ ಪಾಪಗಳು ಕಳೆಯುತ್ತದೆ? .....

## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.04.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರಸ್ ಕಾಂಪೌಂಡ್
ಕೆ.ಟಿ. ರಸ್ತೆ, ತಿರುಪತಿ : 517 507
ಆಂಧ್ರ ಪ್ರದೇಶ್

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ : | |
| ತಂದೆಯ ಹೆಸರು : | |
| ತಾಯಿಯ ಹೆಸರು: | ದೂರವಾಣಿ ಸಂಖ್ಯೆ: |

ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿರುವ ಬಾಕ್ಸ್‌ನಲ್ಲಿಯೇ ಬರೆಯಿರಿ






1) ಕೂಲಂಕುಂಡಾಯ, 2) ರಘುಪಾಯ, 3) ದಶರಥ ಪಾಯ, 4) ಸೀತಾಪಾಯ, 5) ಸುಂದರಾಯ
6) ಕೌಸಲ್ಯಾಯ, 7) ಜಯಾಯ, 8) ಪಟ್ಟಾಭಿಷೇಕಾಯ

ಈ ಪಕ್ಕದ ಚಿತ್ರದಲ್ಲಿರುವ ಮೂರು ವಸ್ತುಗಳಲ್ಲಿರುವ ಯಾವ ವಸ್ತು ಆ ಬಟ್ಟಲನ್ನು ಸೇರುತ್ತದೆ. ಆ ವಸ್ತುವಿಗೆ ದಾರಿಯನ್ನು ತೋರಿಸಿ ಮಕ್ಕಳೇ



ಉತ್ತರ: ಹುಣಸೆ

## ಛಲದಿಂದ ಜಯ

ಇರುವೆ ಚಿಕ್ಕದಾದರೂ ಅದು ತನ್ನ ದೊಡ್ಡ ಆಹಾರವನ್ನು ಹೊರುತ್ತದೆ.

ಮಕ್ಕಳೇ! ನನ್ನಹಾಗೆ ಛಲದಿಂದ ನೀವು ಯಾವ ಕೆಲಸವನ್ನು ಮಾಡಿದರೂ ಅದು ನಿಶ್ಚಿಯವಾಗಿ ಜಯವಾಗುತ್ತದೆ.

ಚಿತ್ರಕಥೆ

# ಎಲ್ಲರಿಗೂ ಮೋಕ್ಷವೇ

ಕಥೆತೆಲುಗುಮೂಲ: ಡಿ.ಶ್ರೀನಿವಾಸದೀಕ್ಷಿತರು
ಅನುವಾದ: ಶ್ರೀಮತಿ
ಚಿತ್ರಗಳು: ಕೆ.ದ್ವಾರಕನಾಥ್






**ಲೋಕಾಃ ಸಮಸ್ತ ಸುಖಿನೋ ಭವಂತು!**

ಸ್ವಸ್ತಿ!

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ
(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನವೀಕರಣ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -"ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507".

ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ವಸಂತೋತ್ಸವಗಳು
## 21.04.2024 ರಿಂದ 23.04.2024 ರ ವರೆಗೆ

## ಶ್ರೀನಿವಾಸಮಂಗಾಪುರಂ
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
## ಪುಷ್ಪಯಾಗ ಮಹೋತ್ಸವ 04.04.2024

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-03-2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/2024-2026" Posting on 5th of Every Month

# ತಿರುಮಲೆ ಸ್ವಾಮಿಯವರ ಶ್ರೀರಾಮನವಮಿ ಆಸ್ಥಾನ ಮಹೋತ್ಸವ

## 17.04.2024